Public Wakfs (Extension of Limitation) Mysore Amendment Bill, 1973—Introduction.

Sri H. M. CHANNABASAPPA.—(Minister of Public Work and Electricity) Sir, On behalf of the Minister for Labour I introduce the Public Wakfs (Extension of Limitation) Mysore Amendment Bill, 1973.

MADAM SPEAKER.—The Bill is introduced. *

Cancellation orders of Government to the Selected list of Candidates for Posts of Junior Engineers.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ನಾನು ರೂಲ್ 312ರ ಪ್ರಕಾರ ಒಂದು ಸೂಚನೆಯನ್ನು ಕಳುಹಿಸಿದ್ದೇನೆ. ರಾಜ್ಯದ ಪಬ್ಲಿಕ್ ಸರ್ವಿಸ್ ಕಮಿಷನ್ ಮಾಡಿದ್ದ ಜೂನಿಯರ್ ಇಂಜಿನಿಯರುಗಳ ಆಯ್ಕೆ ಪಟ್ಟಿಯನ್ನು ಸರ್ಕಾರ ರದ್ದುಪಡಿಸಿದೆಯೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಬಗ್ಗೆ ಸರ್ಕಾರದ ಹೇಳಿಕೆ ಅಗತ್ಯವಾಗಿದೆ. ಇದರಲ್ಲಿ ರಾಜ್ಯಾಂಗದ ಪ್ರಶ್ನೆ ಕೂಡ ಅಡಕವಾಗಿದೆ. ಈ ಒಂದು ಬಿಕ್ಕಟ್ಟನ್ನು ಸರ್ಕಾರ ಯಾವ ರೀತಿಯಿಂದ ಪರಿಹರಿಸಿಕೊಂಡಿದೆ? ಮತ್ತು ಜೂನಿಯರ್ ಇಂಜಿನಿಯರುಗಳ ಆಯ್ಕೆ ಕನಿಷ್ಠ ಪ್ರಮಾಣದಲ್ಲಿ ಆಗಿಲ್ಲ. ಅಭ್ಯರ್ಥಿಗಳಿಗೆ ಏನೇನು ಖರ್ಚು, ಅನಾಹುತ ಆಗಬೇಕೋ ಅದೆಲ್ಲ ಆಗಿ ಮುಗಿದಿದೆ. ಇನ್ನು ಸಂಪೂರ್ಣವಾಗಿ ತಲೆ ಬೋಳಿಸಿಕೊಂಡು ಬೀದಿ ಅಲೆಯುವುದು ಬಾಕಿ ಇದೆ. ಸರ್ಕಾರ ಈ ವಿಚಾರದ ಬಗ್ಗೆ ಅತಿ ಜರೂರಾಗಿ ಒಂದು ಹೇಳಿಕೆಯನ್ನು ಕೊಡಬೇಕು. ಮಾನ್ಯ ಸಚಿವರು ಇಲ್ಲಿಯೇ ಇದ್ದಾರೆ.

Sri H. M. CHANNABASAPPA.—Madam Speaker, the hon. member has raised a question questioning the validity of the order reported to have been published in the paper. The Government will be too glad to make a statement on that and I will do it tomorrow.

Death of a Persons in Police Custody at Gulbarga.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ತುರ್ತು ಅಪ್ಪಣೆಯನ್ನು ಕೇಳಿ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಗುಲ್ಬರ್ಗದಲ್ಲಿ ಪೋಲೀಸರಿಂದ ಅಮಾನುಷ ಕೃತ್ಯ ನಡೆದಿದೆ.

ಅಧ್ಯಕ್ಷರು.—ನಿನ್ನೆ ನೋಟೀಸ್ ಬಂದಿದೆ. ಈಗ ಮುಖ್ಯ ಮಂತ್ರಿಗಳು ಇಲ್ಲಿಲ್ಲ. ನಿಮ್ಮ ಸೂಚನೆಯನ್ನು ಕಾಲ್ ಅಟೆನ್‌ಷನ್ ನೋಟೀಸ್ ಆಗಿ ಬದಲಾಯಿಸುತ್ತೇನೆ.

†ಶ್ರೀ ಎಚ್. ಡಿ. ದೇವೇಗೌಡ.—ಇದು ಬಹಳ ಮುಖ್ಯವಾದ ವಿಚಾರ. ಇದನ್ನು ಗಮನ ಸೆಳೆಯುವ ಸೂಚನೆಯಾಗಿ ಪರಿವರ್ತನೆ ಮಾಡಬಾರದು.

ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಅಲ್ಲಿ ಒಬ್ಬರನ್ನು ಕೊಲೆ ಮಾಡಿರತಕ್ಕ ಬಗ್ಗೆ ನೋಟೀಸ್ ಕೊಟ್ಟಿರುವ ವಿಚಾರದಲ್ಲಿ ನಾವು ಕಾಯದೆ, ಕಾನೂನು ಪರಿಮಿತಿಯೊಳಗೆ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ದೇಶದಲ್ಲಿ ಜನರ ಹಿತರಕ್ಷಣೆಯನ್ನು ಯಾರು ಮಾಡಬೇಕಾಗಿತ್ತೋ ಆ ಪೋಲೀಸಿನವರು ಭಕ್ಷಣ ಮಾಡುವ ಪರಿಸ್ಥಿತಿಗೆ ಹೋದಾಗ ಅದರ ಬಗ್ಗೆ ಸಹನೆ ಏಕಿರುತ್ತದೆ? ಏಕೆಂದರೆ ಈ ಹೊತ್ತು ಗುಲ್ಬರ್ಗದಲ್ಲಿ ನಡೆದಿರುವ ವಿಚಾರ, ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ, ಸೋಮವಾರ ನಂಜೆ ಒಬ್ಬ ದಶರಥರಾಲ ಎಂಬ ಒಬ್ಬ ಪರಾಫ್ ವರ್ತಕನನ್ನು ಪೋಲೀಸ್ ಸ್ಟೇಷನ್ನಿಗೆ ಕಳುಹಿಸಿದ ಪದಾರ್ಥಗಳನ್ನು ಆತ ಕೊಂಡುಕೊಂಡಿರುವ ಬಗ್ಗೆ ವಿಚಾರಿಸಲು

* Bill appended as annexure to the Volume.

(ಶ್ರೀ ಎಚ್. ಡಿ. ದೇವೇಗೌಡ)

ಕರೆದುಕೊಂಡು ಹೋಗಿ, ಆತನನ್ನು ಹೊಡೆದು, ಆತ ನತ್ತ ಮೇಲೆ ಹೇಣವನ್ನು ತೆಗೆದು ಕೊಂಡು ಹೋಗಿ ಗುಲ್ಬರ್ಗದಲ್ಲಿರುವ ಒಂದು ಕೋಟೆಯಲ್ಲಿ ಬಿಸಾಕಿ, ಮಾರನೇ ದಿನ ಆತನ ಮನೆಯವರು ವ್ಯಕ್ತಿ ಪತ್ತೆ ಇಲ್ಲ ಎಂದು ಹುಡುಕಿದಾಗ ಹೆಣ ಸಿಕ್ಕಿತು ಎಂದು ಹೇಳಿ, ಮಹಜರು ಮಾಡಿ ಸಿದ್ದು ಎಲ್ಲವೂ ಪತ್ರಿಕೆಯಲ್ಲಿ ಪ್ರಕಟವಾಗಿದೆ. ನನಗೆ ಈ ಬಗ್ಗೆ ಜೈಲಿಗ್ಯಾಂ ಬಂದ ತಕ್ಷಣ ಸರ್ಕಾರದ ಮತಿಯಿಂದ ಉತ್ತರ ಪಡೆಯುವುದಕ್ಕೆ ಮಾನ್ಯ ಅಧ್ಯಕ್ಷರ ಮುಖೇನ ಕಳುಹಿಸಿಕೊಟ್ಟಿದ್ದೇನೆ. ಈ ಅಮಾನುಷ ಕೃತ್ಯ ನಡೆದ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕು, ನಥಿಂಗ್ ಷಾರ್ಟ್ ಆಫ್ ಎ ಜುಡಿಷಿಯಲ್ ಪ್ರೋಬ್. ನಾನು ಸರ್ಕಾರದ ಮೇಲೆ ಒತ್ತಡವನ್ನು ಹಾಕಿ ಉತ್ತರವನ್ನು ಪಡೆಯಬೇಕು ಎಂದಲ್ಲ; ಆಲ್ಲಿ ನಡೆದಿರತಕ್ಕ ಹೀನಕೃತ್ಯವೇನಿದೆ ಅದರ ಸಂಬಂಧದಲ್ಲಿ ಡಿ. ಐ. ಜಿ. ಅವರು ಇಬ್ಬರು ಕಾನಸ್ಟೇಬರ್‌ಗಳನ್ನು ಸಸ್ಪೆಂಡ್ ಮಾಡಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ. ಈ ದುರ್ಘಟನೆಯನ್ನು ಮುಚ್ಚುವುದಕ್ಕೆ ಸಾಕಷ್ಟು ಅವಕಾಶವಿದೆ. ಏಕೆಂದರೆ ಎರಡು ಜನ ಪೋಲೀಸ್ ಕಾನ್‌ಸ್ಟೇಬಲ್‌ಗಳು ಆ ವ್ಯಕ್ತಿಯನ್ನು ಹೊಡೆದಿಲ್ಲ. ಅದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಸಬ್ ಇನ್‌ಸ್ಪೆಕ್ಟರ್, ಇನ್‌ವೆಸ್ಟಿಗೇಷನ್ ಆಫೀಸರ್ ಇವರು ಎಲ್ಲಾ ಕಲ್ಯೂಡ್ ಆಗಿದ್ದಾರೆ. ಎರಡು ಜನ ಕಾನ್‌ಸ್ಟೇಬರ್‌ಗಳನ್ನು ಸಸ್ಪೆಂಡ್ ಮಾಡಿ ಈ ಒಂದು ವ್ಯವಹಾರ ಮುಚ್ಚಿದ್ದಾರೆ. ಈ ಕಾರಣದಿಂದ ಇದಕ್ಕೆ ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲ. ಇದರ ಜೊತೆಗೆ ನತ್ತಮೇಲೆ ಆತನನ್ನು ಕೋಟೆ ಕೊತ್ತಲದಲ್ಲಿ ಹಾಕಿದ್ದಾರೆ. ಮಾರನೇ ದಿವಸ ಪೋಲೀಸ್ ಸ್ಟೇಷನ್‌ಗೆ ಬಂದ ವ್ಯಕ್ತಿ ಬರಲಿಲ್ಲ ಎಂದು ಮನೆಯವರು ಹುಡುಕಿದಾಗ ಅಮೇಲೆ ಹೆಣ ವೈದ್ಯರಿಂದ ಪರೀಕ್ಷಿಸಿನೆ ಮಾಡಬೇಕಾದ ಪರಿಸ್ಥಿತಿಯಾಗಿದೆ. ಗುಲ್ಬರ್ಗಾ ಪಟ್ಟಣದಲ್ಲಿ ಬಂದ್, ಆಚರಣೆ ಮಾಡಿದ್ದಾರೆ, ಹರತಾಳ ಮಾಡಿದ್ದಾರೆ ಇದರ ಬಗ್ಗೆ ಜನತೆಯಲ್ಲಿ ಸಾಕಷ್ಟು ಭಯ ಉತ್ಪಾದನೆ ಆಗಿದೆ. ಪೋಲೀಸರು ಹೀನಕೃತ್ಯ ಮಾಡಿದಾಗ ನಮಗೆ ರಕ್ಷಣೆ ದೊರೆಯುವುದಿಲ್ಲ. ಯಾರ ಸರ್ಕಾರದ ಮೇಲೆ ಜನತೆ ಪೋಲೀಸರ ಮೇಲೆ ವಿಶ್ವಾಸ ಇಟ್ಟಿದ್ದರೋ ಆ ವಿಶ್ವಾಸವಿಲ್ಲ ಎಂದು ಈ ಪ್ರಕರಣಗಳಿಂದ ಅರ್ಥವಾಗುತ್ತದೆ. ನಾನು ನೆನ್ನೆ ಈ ವಿಷಯ ಪ್ರಸ್ತಾಪ ಮಾಡಬೇಕು ಎಂದು ಹೇಳಿದ್ದೇನು. ಸರ್ಕಾರ ಸಂಬಂಧಪಟ್ಟ ವಿವರಗಳನ್ನು ತರಿಸುವುದಕ್ಕೆ ಕಷ್ಟವಿಲ್ಲ. ನನ್ನೆ ಮಧ್ಯಾಹ್ನ ಇನ್‌ಫರ್‌ಮೇಷನ್ ಕೇಳಿದಾಗ ಇವೊತ್ತು ಸಭೆಗೆ ಬರತಕ್ಕ ಕಾಲದಲ್ಲಿ ಇನ್‌ಫರ್‌ಮೇಷನ್ ಕಲೆಕ್ಟ್ ಮಾಡುವುದು ಕಷ್ಟದ ಕೆಲಸವಲ್ಲವೆಂದು ನಾನು ಹೇಳುತ್ತೇನೆ. ಇದರ ಬಗ್ಗೆ ನಾವು ಯಾವ ಪೋಲೀಸ್ ಅಧಿಕಾರಿಗಳಿಂದ ವಿಚಾರಣೆ ನಡೆಸುವುದಕ್ಕೆ ಅವಕಾಶ ಕೊಡಲು ತಯಾರಿಲ್ಲ. ನಮಗೆ ಸ್ಪಷ್ಟವಾದ ಉತ್ತರಕೊಡಬೇಕು. ಜೊತೆಯಲ್ಲಿ ಒಬ್ಬ ಜಡ್ಜ್ ಅಪಾಯಿಂಟ್ ಮಾಡಿ ನ್ಯಾಯ ದೊರಕಿಸಿಕೊಡಬೇಕು. ಯಾರು ಸೀನಿಯರ್ ಆಫೀಸರು, ತಪ್ಪಿತಸ್ಥರು; ಹೇಗೆ ಕೊಲೆಯಾಯಿತು ಎಂಬುದು ಸರ್ಕಾರದ ಮುಂದೆ ಬರಬೇಕು ಎನ್ನುವುದು ವಿಚಾರ.

ಶ್ರೀ ಪಾಟಾಳ್ ನಾಗರಾಜ್ (ಚಾಮರಾಜಪೇಟೆ).—ಪೋಲೀಸ್ ಪ್ರಕರಣ ಕೇಸ್ ದಾಖಲ್ ಮಾಡಿಕೊಂಡಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. ಯಾರಮೇಲೆ ದಾಖಲೆ ಮಾಡಿಕೊಂಡಿದ್ದಾರೆ, ಯಾರನ್ನು ದಸ್ತಗಿರಿ ಮಾಡಿದ್ದಾರೆ ಎಂಬುದು ಈ ಪ್ರಕರಣದಲ್ಲಿ ಬಂದಿಲ್ಲ. ಶ್ರೀಮತಿ ಅನಸೂಯಮ್ಮನ ಪ್ರಕರಣ ದೊಡ್ಡದು ಆಯಿತು, ಇದೇ ರೀತಿ ಶ್ರೀಮಾನ್ ಹಂಜಿ ಶಿವಣ್ಣನವರು ಒಬ್ಬ ಸಬ್ ಇನ್‌ಸ್ಪೆಕ್ಟರು ಸ್ಟೇಷನ್ನಿನಲ್ಲಿ ಹೊಡೆದು ಸಾಯಿಸಿದ ಎಂದು ಬರೆದಮೇಲೆ ಶ್ರೀಮಾನ್ ಹಂಜಿ ಶಿವಣ್ಣನವರ ಹೇಳಿಕೆ ಮೇರೆ ಅವನನ್ನು ಜೈಲಿಗೆ ಹಾಕಿದರು. ಪೋಲೀಸರಿಂದ ತೀರಾ ಗುಂಡಾಗಿರಿನತೆ ದಿದೆ. ಈಗ ಇರುವುದು ಪೋಲೀಸ್ ಅಧಿಕಾರಿಗಳ ಮೇಲೆ ಆರೋಪ ಅಕ್ಕಮ. ಇದನ್ನು ವಿಚಾರಣೆ ಮಾಡಲು ಪೋಲೀಸರ ಮೇರೆ ಬಿಟ್ಟದ್ದು ಕೆಲವು ನಿದರ್ಶನಗಳು ಇವೆ. ಅವನ್ನು ಹೇಳುತ್ತೇನೆ. ಈ ಪ್ರಕರಣದಲ್ಲಿ ಸರ್ಕಾರದ ಪರವಾಗಿ ಶ್ರೀಮಾನ್ ಚನ್ನಬಸಪ್ಪನವರು ಈಗ ಇದ್ದಾರೆ, ಮುಖ್ಯ ಮಂತ್ರಿಗಳನ್ನು ಬಿಟ್ಟರೆ ಚೆನ್ನಬಸಪ್ಪನವರೇ ನಮ್ಮ ಎದುರಿಗೆ ಸಿಕ್ಕುವವರು. ಚನ್ನಬಸಪ್ಪನವರು ಅಡಳಿತದಲ್ಲಿ ದಕ್ಷ ಅಡಳಿತಗಾರರೆಂದು ಹೆಸರು ಪಡೆದಿದ್ದಾರೆ, ಮತ್ತು ಅವರು ಅಡಳಿತದಲ್ಲಿ ದಕ್ಷ ಉದ್ದಿಶ್ಯವಿಟ್ಟುಕೊಂಡಿರುವುದಾದರೆ ಈ ಸಂದರ್ಭದಲ್ಲಿ ಸ್ಪಷ್ಟವಾದ ಹೇಳಿಕೆ ಕೊಡಬೇಕು. ಸುಮ್ಮನೆಯಾವುದೋ ಅಧಿಕಾರಿಯಿಂದ ತನಿಖೆ ನಡೆಸುತ್ತೇವೆ ಎಂದರೆ ನಾವು ಅಲ್ಲಿಗೆ ಬಿಡುವುದಕ್ಕೆ ಸಿದ್ಧವಾಗಿಲ್ಲ. ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುತ್ತೇವೆ ಎಂದು ತಾವು ಹೇಳಬೇಕು. ಯಾವ ಸರ್ಕಾರದಲ್ಲೂ ಪೋಲೀಸರು ಇಷ್ಟು ಹದ್ದುಮೀರಿ ನಡೆದುಕೊಳ್ಳುತ್ತಿರಲಿಲ್ಲ. ಈಗ ಶ್ರೀಮಾನ್ ಅರಸ್‌ರವರ ಸರ್ಕಾರದಲ್ಲಿ ಅನೇಕ ನಿದರ್ಶನಗಳನ್ನು ಕೊಡುತ್ತೇನೆ. ಯಾರ ಮೇಲೆ ಸಿ. ಬಿ. ಐ, ಎನ್‌ಕ್ವೈರಿ ನಡೆದಿದೆ ಅಂಥ ಅಧಿಕಾರಿಗಳನ್ನು ಬಹಳ ಒಳ್ಳೆಯ ಸ್ಥಾನದಲ್ಲಿ ಇಟ್ಟಿದ್ದಾರೆ, ಬೇಕಾದರೆ

ಆ ಅಧಿಕಾರಿ ಯಾರು ಎಂದು ಹೇಳುತ್ತೇನೆ. ಆತ ಎಷ್ಟು ಅನ್ಯಾಯ ಮಾಡಿದ್ದಾನೆ ಹೇಳುತ್ತೇನೆ. ಪೋಲೀಸ್ ಅಧಿಕಾರಿಗಳು ಹೇಗೆ ಬೇಕಾದರೂ ನಡೆಯಬಹುದು, ತಮ್ಮ ಇಷ್ಟಬಂದ ಹಾಗೆ ನಡೆಯಬಹುದು ಎಂದು ನಡೆಯುತ್ತಿದ್ದಾರೆ; ಗುಲ್ಬರ್ಗಾ ಒಂದೇ ಅಲ್ಲ ಇನ್ನು ಅನೇಕ ಪ್ರಕರಣಗಳು ನಡೆದಿವೆ. ಇವರ ಪಾರ್ಟಿ ಮೆಂಬರ್‌ಗಳು ಬರೆಯುವುದನ್ನು, ಶ್ರೀಮಾನ್ ಹಂಜಿ ತಿಪಣ್ಣನವರು ಬರೆದದ್ದನ್ನು ಓದಿದ್ದೇನೆ. ಸಂಬಂಧಪಟ್ಟ ಸಬ್ ಇನ್ಸ್‌ಪೆಕ್ಟರ್ ಜೈಲಿನಲ್ಲಿ ಇದ್ದಾರೆ. ಈಗ ತಮ್ಮ ದಕ್ಷ ಹೇಳಿಕೆ ಸಭೆ ಮುಂದೆ ಇಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಒಂದು ಮಾತು ಹೇಳುತ್ತೇನೆ. ಈ ತರಹ ಸಂದರ್ಭಗಳು ಬಂದಾಗ ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ ಮಾಡುತ್ತೇವೆಂದು ಹೇಳುತ್ತೀರಿ. ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿಯಲ್ಲಿ ನಂಬಿಕೆ ಹೊರಟು ಹೋಗಿದೆ. ಅನೇಕ ಸಲ ಎನ್‌ಕ್ವೈರಿಗಳನ್ನು ಮಾಡಿ ಯಾರು ತಪ್ಪಿಸ್ಥರು ಎಂದು ಎಲ್ಲರೂ ಕೇಳುತ್ತಾರೆ; ಅಂಥವರನ್ನು ಬಿಟ್ಟು ಬಿಜ್ಜಿದ್ದಿರಿ ಖುರಾಸೆ ಮಾಡಿದ್ದೀರಿ. ಹೀಗೆ ನಡೆದು ಬಂದಿರುವ ಅನೇಕ ನಿದರ್ಶನಗಳು ಇವೆ, ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಜ್ಞಾಪಿಸುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇದ್ದರೆ ಚೆನ್ನಾಗಿತ್ತು. ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ ಬಿಟ್ಟುಬಿಡಿ; ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕು ಸೀನಿಯರ್ ಆದವರನ್ನು ನೇಮಕ ಮಾಡಬೇಕು ಎಂದು ಒತ್ತಾಯ ಮಾಡುತ್ತೇನೆ. ಹಿಂದೆ ಬಂದು ಸಲ ಮುನಿಯಮ್ಮ ಮುನಿಚಂದ್ರಪ್ಪ ಇವರ ಪ್ರಕರಣ ನಡೆದು ಹೋಯಿತು. ಇದೇ ರೀತಿ ಮುನಿಚಂದ್ರನ ವಿಷಯ ಮಾತನಾಡಿದೆ, ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿಯಾಗುತ್ತದೆ ಎಂದು ಹೇಳಿದರು, ಏನೂ ಮಾಡಲಿಲ್ಲ, ಇವೊತ್ತು ಕೂಡ ಅಂಥ ಪ್ರಕರಣದಲ್ಲಿ ಯಾರು ಒಳಗಾಗಿದ್ದಾರೋ ಅವರಿಗೆ ಬಿಡ್ತಿ ಸಿಕ್ಕಿದೆ. ಈ ಸ್ಥಿತಿ ಮೈಸೂರು ರಾಜ್ಯದಲ್ಲಿ ಬರಕೂಡದು. ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕು. ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ ಬೇಡ ಎಂದು ಹೇಳುತ್ತೇನೆ.

†ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಸರ್ಕಾರದವರು ಸುಲಭವಾಗಿ ಹೇಳಿಬಿಡಬಹುದು; ಇಬ್ಬರು ಪೋಲೀಸ್ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಿ ಅವರ ಮೇಲೆ ಕೇಸ್ ದಾಖಲೆ ಮಾಡಿಕೊಂಡಿದ್ದಾರೆ. ಆದರೆ ಇದು ಬಹಳ ಪ್ರಮುಖವಾದ ವಿಚಾರ ಇದೆ. ಯಾವನೋ ಬಬ್ಬ ಸಾಯಿಸಿದವನು ಅವನನ್ನು ಅದೇ ಪೋಲೀಸ್ ಸ್ಟೇಷನ್‌ನಲ್ಲಿ ಇಟ್ಟು, ಕೇಸ್ ನಡೆದರೆ, ಯಾರಾದರೂ ಸರ್‌ಕಮ್‌ಸ್ಟ್ಯಾನ್ಷಿಯಲ್ ಎವಿಡೆನ್ಸ್ ಕೊಟ್ಟರೆ ಕೇಸ್ ಏನಾಗುತ್ತದೆ ಎಂದು ಗೊತ್ತಿದೆ. ಪೋಲೀಸ್ ಸ್ಟೇಷನ್‌ನಲ್ಲಿ ನೋಡಿರುವವರು ಯಾರು? ಪೋಲೀಸ್ ಸ್ಟೇಷನ್‌ನಲ್ಲಿ ಇಂಥ ಒಂದು ಪ್ರಕರಣ ನಡೆದಿರಬೇಕಾದರೆ ತೆಗೆದುಕೊಂಡು ಹೋದವರಾಗಲಿ, ಹೊಡೆದವರಾಗಲಿ, ಸಾಯಿಸಿದವರಾಗಲಿ ಯಾರು ಎಂದು ತಿಳಿದುಕೊಳ್ಳಬೇಕಾದರೆ ಪೋಲೀಸರೇ ಬರಬೇಕಾಗುತ್ತದೆ. ಯಾವ ಪೋಲೀಸರೂ ಇದಕ್ಕೆ ಸಹಕಾರಿಯಾಗುವುದಿಲ್ಲ. ನಮಗೆ ನ್ಯಾಯ ಸಿಗಬೇಕಾದರೆ ಅವರ ಮೇಲೆ ತನಿಖೆ ನಡೆಸುವುದಕ್ಕೆ ಅವರಿಗೇ ಅವಕಾಶ ಕೊಟ್ಟರೆ, ಅವರು ಎಲ್ಲಾ ಹಾಗೆಯೇ ಮುಚ್ಚಿಹಾಕುತ್ತಾರೆ. ಜ್ಯುಡಿಷಿಯಲ್ ಎನ್‌ಕ್ವೈರಿ ಆಗುವುದರಿಂದ ನ್ಯಾಯ ಸಿಕ್ಕುತ್ತದೆ. ಸರ್ಕಾರದ ಪೋಲೀಸ್ ಅಧಿಕಾರಿಗಳಿಂದ ನ್ಯಾಯ ಸಿಕ್ಕುವುದಿಲ್ಲ ಎಂದು ಹೇಳಿ ಇದನ್ನು ಜ್ಯುಡಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ತೀರ್ಮಾನ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

†Sri D. B. KALMANKAR (Afzalpur).—Madam Speaker, I have received a telegram from the President of Saraf Sangh, Gulbarga and according to that telegram, one Sri Dasarathlal Banjaralal, aged about 46 years was killed while he was under the police custody on 19-2-1973 and the dead body was found thrown in the fort area that evening. Since the local police is involved in the matter investigations have to be made. In this connection I have also submitted a call attention notice which may be taken up at the earliest. Secondly, this particular incident has created a lot of sensation and panic among the people, even the Sarafs have closed their shops to mark their protest and anger on this particular incident in Belgaum town. Therefore this matter may be looked into immediately and if it is found that the police have done it deliberately and the man was killed while he was undr lock-up serious action against responsible policepersonnel be taken up. The police seem to think that they will go scot free. No doubt

(SRI D. B. KALMANKAR)

police has a right to detain a person but it does not mean that it should treat the detained person in the manner that has been done. I therefore request that this matter be looked into in all priority and see that justice is done and if the police personnel are involved they should be punished deterrently.

2-00 P. M.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷೆಣಿಯರೇ, ಪತ್ರಿಕೆಯಲ್ಲಿ ಬಂದಿದ್ದನ್ನು ಜನರು ಓದಿದ್ದಾರೆ. ಇದು ನಿಜವಾಗಿಯೂ ಎಲ್ಲರನ್ನೂ ಅತಿ ಗಾಬರಿ ಪಡಿಸತಕ್ಕ ವಿಷಯವಾಗಿದೆ. ಹಿಂದೆ ಇದ್ದಂತಹ ಸರಕಾರಗಳಲ್ಲಿ ಕೂಡ ಈ ರೀತಿ ಆಗಿಲ್ಲ ಎಂದು ಅಲ್ಲ. ಆದರೆ ಇಂದು ಬಹಳ ಅಪರೂಪವಾದ ಘಟನೆಗಳು ನಡೆಯುತ್ತಿವೆ. ಇತ್ತೀಚೆಗೆ ಅಲ್ಟರ್‌ನೇಟಿವ್ ಪೇಸ್ ಇದರ ಬಗ್ಗೆ ನೂ ಸ್ ಬರುತ್ತಿದೆ! ಇದು ಏನು ತೋರಿಸುತ್ತದೆ ಎಂದರೆ ಸರಕಾರದ ಆಡಳಿತದಲ್ಲಿ ಏನಿ ಇಲ್ಲದೆ ಇರುವುದರಿಂದ ತಾವು ಏನು ಬೇಕಾದರೂ ಮಾಡಬಹುದು ಎಂದು ಪೋಲೀಸಿನವರು ತಿಳಿದುಕೊಂಡಿದ್ದಾರೆ. ಇದು ಜನತೆಗೆ ಹೆದರಿಕೆಯನ್ನು ತರತಕ್ಕ ವಿಷಯವಾಗಿದೆ. ಪೋಲೀಸ್ ಸ್ಟೇಷನ್‌ಗೆ ಒಬ್ಬ ರೋಗಿಯನ್ನು ಕರೆದುಕೊಂಡು ಹೋಗಿ ಅವನನ್ನು ಸಿಕ್ಕಾಪಟ್ಟೆ ಹೊಡೆದು, ಅತನು ನತ್ತು ಹೋದರೆ ಅವನನ್ನು ಬೀದಿಯಲ್ಲಿ ತೆಗೆದುಕೊಂಡು ಬಂದು ಹಾಕುತ್ತಾರೆ. ಇಂಗ್ಲೆಂಡ್ ಮತ್ತು ಅಮೆರಿಕಾ ದೇಶದಲ್ಲಿ ಇರುವಂಥ ಆ ಮಟ್ಟದ ಪೋಲೀಸ್ ಅಧಿಕಾರಿಗಳು ನಮ್ಮ ದೇಶದಲ್ಲಿ ಸಿಕ್ಕುವುದಿಲ್ಲ. ಯಾರಾದರೂ ಸತ್ತರೆ ಅವನನ್ನು ತೆಗೆದುಕೊಂಡು ಹೋಗಿ ಕೋಟೆ, ಕೊತ್ತಲೆಗಳಲ್ಲಿ ಹಾಕುತ್ತಾರೆ. ಇಂತಹ ಅಮಾನುಷ ಕೃತ್ಯಗಳನ್ನು ನೋಡಿದರೆ ಇದು ನಮ್ಮ ರಾಜ್ಯದಲ್ಲಿ ಹೆಚ್ಚು ಹೆದರಿಕೆಯನ್ನು ತರತಕ್ಕ ವಿಷಯವಾಗಿದೆ. ವಿರೋಧ ಪಕ್ಷದ ನಾಯಕರು ಜುಡಿಷಿಯರ್ ಪ್ರೋಬ್ ಆಗಬೇಕು ಎಂದು ಹೇಳಿದ್ದಾರೆ. ಗುಲ್ಬರ್ಗ ಪೋಲೀಸ್ ಎನ್‌ಕ್ವೈರಿ ಮಾಡಿದ್ದೀರಾ ? ಇದು ನಭೆಗೆ ಕೊಡತಕ್ಕ ಮಾನ್ಯತ ಏನು ! ಇದು ಪಕ್ಷ ಪಂಗಡಗಳ ವಿಷಯ ಅಲ್ಲ. ಆದುದರಿಂದ ಪೋಲೀಸಿನವರು ಮಾಡಿರುವ ಅಮಾನುಷ ಕೃತ್ಯ ಏನು ಇದೆ ಅದನ್ನು ನಾವೆಲ್ಲರೂ ಖಂಡನೆ ಮಾಡಬೇಕು. ಎರಡನೆಯದು ಜುಡಿಷಿಯಲ್ ಎನ್‌ಕ್ವೈರಿಗಿಂತ ಕಡಿಮೆ ಇರತಕ್ಕ ಯಾವುದೇ ರೀತಿಯ ಆಶ್ವಾಸನೆ ಕೊಟ್ಟರೆ ನಾವು ಅದನ್ನು ಒಪ್ಪುವುದಕ್ಕೆ ತಯಾರು ಇಲ್ಲ. ಜುಡಿಷಿಯಲ್ ಎನ್‌ಕ್ವೈರಿ ಆಗಲೇಬೇಕು ಎನ್ನುವ ಮಾತನ್ನು ನಾನು ಒತ್ತಾಯಪೂರ್ವಕವಾಗಿ ತಮ್ಮ ಮೂಲಕ ಹೇಳುತ್ತೇನೆ.

†SRI C. M. ARUMUGAM (K.G.F.).—Madam Speaker, I have received a telegram from one Sri Sivaram Moga, who is the President of the Republican Party of the Gulbarga District, in this connection today. I would appeal to the Hon'ble Chief Minister to take concrete steps in this matter. The merchant, who was taken by the Police, never returned. That means he was in police custody till his death. If there was no prima facie case, there was absolutely no need for the Deputy Inspector General of Police to suspend the Head Constable and Police Constable. There was a complete Hartal in Gulbarga.

To quote another instance, there is a place called B. Nayanpur in Krishnarajanagar Taluk, where on the 20th of this month two students were taken to the Police Station, and they have not been let out so far! When the Police take any person to the Police Station they neither give any receipts nor inform their relatives.

What happened in Gulbarga might happen here also. Now that the Deputy Inspector General of Police has suspended the Head Constable and the Police Constable, we want a judicial probe in the matter. Of course, there are several instances of murder for many

reasons. But there was no need for the Police to murder a merchant. The fact remains that he was taken to the Police Station by the Head Constable and the Constable, and he never returned. That is why the entire Public—not only the marchants of Gulbarga demonstrated, shops were closed and they observed a complete harthal. I submit that in the interest of justice and truth, the Government should come forwerd to appoint a High Court Judge or a District Judge to probe into this matter.

Sri J. P. SARVESH (Serum).—Madam Speaker, committing attrocities against innocent people by the Police is not new. I have seen this in every Government. During the time of Sri S, Nijalingappa...

(Many opposition members stood up)

Sri D. DEVARAJ URS (Chief Minister).—The hon. member Sri Sarwesh is from that area. Let us hear him. I do not know why the hon. members are so impatient.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಬೆಂಗಳೂರಿನಲ್ಲಿಯೇ ಇದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಅಲ್ಲಿಯ ಬ್ಯಾಕ್‌ಗ್ರೌಂಡ್ ಅವರಿಗೆ ಚೆನ್ನಾಗಿ ಗೊತ್ತಿದೆ.

†Sri J. P. SARVESH.—During the Chief Ministership of Sriyuths B. D. Jatti, S. R. Kanthi, S. Nijalingappa and also Veerendra Patil several times such instances were discussed and the Police was condemned. When Sri Veerendra Patil was the Chief Minister.....

ಶ್ರೀ ಕಾಗೋಡು ತಿಮ್ಮಪ್ಪ.—ಈ ವಿಷಯಕ್ಕೆ ಸಂಬಂಧಪಟ್ಟ ವಿಚಾರವನ್ನು ಮಾತ್ರ ಹೇಳಬೇಕು.

Sri H. D. DEVEGOWDA.—He has supplied additional information in this fashion.

ಶ್ರೀ ಕಾಗೋಡು ತಿಮ್ಮಪ್ಪ.—ಈ ಪ್ರಕರಣದ ಬಗ್ಗೆ ಹೆಚ್ಚಿನ ವಿವರಗಳನ್ನು ಕೊಡುತ್ತೀರಾ ಎಂದು ಕೇಳುತ್ತಿದ್ದೇನೆ. ತಾವು ವಿವರಣೆ ಕೊಡುವುದು ನಿಜಲಿಂಗಪ್ಪನವರ ಕಾಲದಲ್ಲಿ ನಡೆದ ಕೆಲಸದ ವಿಚಾರ.....

† Sri J. P. SARWESH.—During the time of Sri Veerendra Patil Ministry, I had brought to his notice about the murder of one person by name Gundu by the police in Sedam Town, through a telegram and followed it up with a letter. Sri Veerendra Patil was kind enough to order an enquiry into that incident. After several months, I received a letter from him stating that there was no proof of the murder. What I mean to say is that the Police have got a habit of killing persons. It has almost become a habit with them. I therefore request the Chief Minister to see that persons who are responsible for such acts are punished.

ಶ್ರೀ ಹಂಜಿ ಶಿವಣ್ಣ.—ಪೋಲೀಸಿನವರು ಹಣ ಸಂಪಾದನೆ ಮಾಡುವ ಉದ್ದೇಶದಿಂದ ಅನೇಕ ಕಿರುಕುಳಗಳನ್ನು ಜನರಿಗೆ ಕೊಡುತ್ತಿರುವ ಬಗ್ಗೆ ನಾನು ಸರಕಾರದ ಗಮನಕ್ಕೆ ಕೆಲವು ವಿಚಾರಗಳನ್ನು ಇಲ್ಲಿ ತರಬೇಕಾಗಿದೆ. ನಮ್ಮ ಕ್ಷೇತ್ರದಲ್ಲಿ ನಡೆದ ಒಂದು ಖೂನಿ ಸಂದರ್ಭವನ್ನು ಇಲ್ಲಿನ ನಬ್ ಇನ್ಸ್‌ಪೆಕ್ಟರವರ ಗಮನಕ್ಕೆ ತಂದರೂ ಸರಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಗೂ ಮನವಿಗಳನ್ನು ಕಳುಹಿಸಿರಾಗಿದೆ. ಹಾಗಿದ್ದರೂ

(ಶ್ರೀ ಹಂಜಿ ಶಿವಣ್ಣ)

ಪೋಲೀಸಿನವರು ಜನರನ್ನು ರಕ್ಷಣೆ ಮಾಡುವುದಕ್ಕಿಂತ ಹೆಚ್ಚು ತೊಂದರೆಗಳನ್ನು ಕೊಡುವವರೆ ಹೆಚ್ಚಾಗಿದ್ದಾರೆ. ಇದರ ಬಗ್ಗೆ ಸರಕಾರ ತೀವ್ರವಾದ ಕ್ರಮ ತೆಗೆದುಕೊಳ್ಳುವುದು ಅಗತ್ಯ ಎಂದು ಇಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

† Sri B. B. SAYANAK (Belgaum).— Madam Speaker, Sri Dasarath Lal was taken to the Police custody on the 19th and many injuries were found on his body.

MADAM SPEAKER.—That has been reported in the Press.

Sri B. B. SAYANAK.—This is a very serious matter. The Police think that they are supreme in the Police Station and they think that the Government is backing and whatever they do in the Police Station there is none to challenge them. I therefore request the Government to probe into this matter and order for a judicial enquiry so that their misdeeds would be known.

† Sri D. DEVARAJ URS (Chief Minister).—Madam Speaker, I do realise that the matter is a serious one, but may I submit that even if one gentleman or any hon. member were to say that the matter of this nature is serious, then the Government unhesitatingly is one with them to say that it is serious. Does the seriousness depend upon all of us saying that it is serious ? It does not.

Sri M. S. KRISHNAN.—Sometime it becomes necessary for us to say that it is a serious matter.

Sri D. DEVARAJ URS.—All of us have said the same thing, there is nothing new either. Whatever Krishnan said on such matters, I quite imagine what he would say. Sometimes imagination is necessary Having heard Sri Krishnan on so many occasions, I can very well imagine what he would say.

Sri M. S. KRISHNAN.—I take it as a compliment.

Sri D. DEVARAJ URS.—I take it as a compliment to me also. I very humbly submit, let not an impression be gained here that Government is not taking up such matters seriously as was pointed out by Sri Sayanak that Government is giving support to whatever they do in Police Station. I do not know why he said that Government is supporting the Police. We are certainly going to support the Police as long as Sri Sayanak does not go out of the way and breaks the law. I am here to support the Police because Mr. Sayanak wants police support-including Mr. Vatal Nagaraj.

Sri B. B. SAYANAK.—I have never asked for Police support.

ಶ್ರೀ ವಾಟಾಳ್ ನಾಗರಾಜ್.—ನಮಗೇನೂ ನಿಮ್ಮ ಪೋಲೀಸಿನವರ ಸಹಾಯ ಬೇಕಾಗಿಲ್ಲ. ಮುತ್ತು ನಾವು ಕೇಳುತ್ತಲೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಹೇಳುವಂತೆ ನಮಗೆ ಪೋಲೀಸಿನವರ ರಕ್ಷಣೆ ಬೇಕಾಗಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ನಮಗೂ ಗೊತ್ತು, ತಾವು ಏನು ಹೇಳುತ್ತೀರಿ ಎಂದು Sri Vatal nagaraj does not want police suppoot because he is a heavenly born gentleman. He may not require the police support but the society in which we are living does require police support. Let us wait for the time when our Socialist leader from Shimoga constitute a Government. If he is going to constitute a Government, then he may completely dismiss the entire police force. He will be creating a society in which there will be no policeman. I want to submit that this Government at no instance, nor at the instance of anybody howsoever high he might be, either by caste or creed or relationship, has supported the police. Whenever the acts of omission and commission of police have come to the knowledge of Government, we have taken drastic action against them. Let me quote one instance. Just now Sri Shivanna brought an instance to the notice of this House. I may inform him that those Sub Inspectors have been kept under suspension. I do not want to cast any aspersion against anybody.

Sri B. B. SAYANAK.—Because he was a party man.

Sri D. DEVARAJ URS.—An offence is an offence whether it is committed by X or Y. Immediately on receipt of the Gulbarga incident, an investigation has been ordered and it will take place as early as possible. I may assure this House that whoever is involved whether he is a constable or a Police Inspector or even a Superintendent of Police, I do not spare if he is to be punished, he will be punished. This kind of feeling among some of the Hon. Members that Government is not going to take action or going to support the Police—I am sure, majority of our members may not hold that view, including the hon. Leader of the Opposition it is the legacy of the past. There might have been instances where Government might not have taken that much of action as was necessary to punish an officer irrespective of his position or status. Here and now I make it clear that whoever he is, we are going to take action as severe as the law demands on such occasions inspite of whatever others might think.

When it is the question of protection to property or life or when it is the question or dealing with a criminal act of this nature the Government will naturally be impartial. It rathe pains me if people say that the man involved in a case is belonging to the Ruling Party and therefore he is getting favourable treatment. They say in the cases of people belonging to the ruling party the Government is going to support and in the cases of people belonging to other parties there will be different treatment. It is not the question of politics here, but it is the question of saving or protecting property and life and allow the people to live peacefully. I certainly get odium if Government is going to differentiate between person and person. It is our duty to give protection to life and property. It may be, the Police people might have misbehaved. We have got instances of this nature. I am recalling to your memory one such instance. One Sub-inspector

(SRI D. DEVARAJ URS)

or some Constable shot dead one Superintendent of Police. Nobody instigated him. There are instances where even sometimes the Military people ran amuck and Police people ran amuck. But in these cases I do not know the full details. Any how I know this much, as you all know, that such a case has happened and that has been reported. Further invertigation is going on. It is not known whether any Constables are involved or some other officer is involved. When that is the case, I may assure you all that we are not going to protect or shield them to escape from the clutches of law. We have absolutely no political reason in this behalf. Some of the members demand judical enquiry. In my opinion such judicial enquiry is not at all necessary when the officers are there in the Department to do that enquiry impartially. I can assure the Hon. House that the enquiry to be conducted will be hundred per cent impartial, pure, unprejudicial and unbiased. The Government will never allow anybody to take sides and will never allow anybody to influence any one in this case. Even in the case of Chickmagalur where a criminal act had been committed the Sub Inspector and the connected people involved have been arrested and kept under suspension. The proceedings are going on. I have not allowed anybody to influence or to take sides or to approach anybody in this matter giving room for the people involved to escape frome the clutches of the law. I believe the Hon. Members of the opposite side will agree with me.

† ಶ್ರೀ ಎಡ್. ಡಿ. ದೇವೇಗೌಡ.—ಈಗ ಮುಖ್ಯಮಂತ್ರಿಗಳು ಮಾತನಾಡುತ್ತಾ ಇದು ಬಹಳ ಗಹನವಾದ ವಿಷಯ, ಇದರ ತೀವ್ರತೆ ನನಗೆ ಗೊತ್ತಿದೆ, ಯಾವುದೇ ಪ್ರಭಾವಕ್ಕೂ ಒಳಗಾಗದೆ ವಿಚಾರಣೆ ಮಾಡಿಸುತ್ತೇನೆಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಯಾವ ಸರ್ಕಾರ ಅಡಳಿತದಲ್ಲಿ ಇದ್ದರೂ ಸಹ ಶಾಂತಿಪಾಲನೆಯನ್ನು ಪೋಲೀಸರಿಂದಲೇ ಮಾಡಿಸಬೇಕಾಗುತ್ತದೆ. ಅದು ನಿರ್ವಿವಾದವಾದ ಮಾತು. ಯಾವುದೇ ರೀತಿಯ ಒತ್ತಡಕ್ಕೂ ಈ ವಿಚಾರದಲ್ಲಿ ಮಣಿಯುವುದಿಲ್ಲವೆಂದು ಮುಖ್ಯಮಂತ್ರಿಗಳು ಹೇಳಿದರು. ಸಂತೋಷ. ಆದರೆ ಅಲ್ಲಿ ನಡೆದಿರುವ ವಿದ್ಯಮಾನಗಳನ್ನು ತಮಗೆ ತಿಳಿಸುವ ಯಂತ್ರ ಏನಿದೆ, ಅದು ಪೋಲೀಸ್ ಯಂತ್ರವೇ ಆಗಿದೆ. ಇಂದು ಯಾವ ಒಂದು ಪೋಲೀಸ್ ಯಂತ್ರ ಆಪಾದನೆಗೆ ಗುರಿಯಾಗಿದೆಯೋ, ಆ ಒಂದು ಪೋಲೀಸ್ ಯಂತ್ರದ ಅಧಾರದ ಮೇಲೆ ತಾವು ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆ. ಪಾಸ್ ಲಗಸಿಯಿಂದ ಈ ತರಹ ಆಗಿರಬಹುದು ಎಂದು ಹೇಳುವುದಾದರೆ, ತಪ್ಪು ಮಾಡಿದವರು ಶಿಕ್ಷೆ ಅನುಭವಿಸಲಿ. ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ತಾವು ಪೋಲೀಸ್ ಯಂತ್ರದಿಂದಲೇ ನಿಷ್ಪಕ್ಷಪಾತವಾದ ವಿಚಾರಣೆ ಮಾಡಿಸುತ್ತೇವೆಂದು ಹೇಳುವುದಾದರೆ, ಅದಕ್ಕೆ ನಾವು ಸಿದ್ಧರಿಲ್ಲ. ಒಬ್ಬ ಮನುಷ್ಯನನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಕೊಲೆ ಮಾಡಿರುವ ಸಂದರ್ಭದಲ್ಲಿ ನ್ಯಾಯಾಂಗ ತನಿಖೆಯಾಗಬೇಕೆಂದು ಕೇಳಿದರೆ, ಅದು ಸರಿಯಲ್ಲ ಎಂದು ಹೇಳುವುದಾದರೆ, ಇನ್ನು ಎಂತಹ ಪ್ರಕರಣದಲ್ಲಿ ನ್ಯಾಯಾಂಗ ತನಿಖೆಯಾಗಬೇಕೆಂದು ನಾವು ಕೇಳಬೇಕು? ಇಂತಹ ಸಂದರ್ಭಗಳನ್ನು ಬಿಟ್ಟರೆ ಇನ್ನು ಎಂತಹ ಪ್ರಕರಣಗಳಲ್ಲಿ ನಾವು ಸೀರಿಯಸ್‌ನೆಸ್ ತೋರಿಸಬೇಕೆಂಬುದನ್ನು ನೀವೇ ಹೇಳಿ? ನ್ಯಾಯಾಂಗ ತನಿಖೆ ಆಗತ್ಯವಿಲ್ಲವೆಂದು ಹೇಳುವುದಾದರೆ, ಅದಕ್ಕಾಗಿ ವಿಷಾದ ವ್ಯಕ್ತಪಡಿಸಬೇಕಾಗುತ್ತದೆ. ಈ ವಿಚಾರದಲ್ಲಿ ತಮಗೆ ಎಷ್ಟು ಗೊತ್ತಿದೆಯೋ ಅಷ್ಟೇ ನನಗೂ ಗೊತ್ತಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಈ ಬಗ್ಗೆ ಆಶ್ಚರ್ಯ ಪಡಬೇಕಾಗುತ್ತದೆ. ನೆನ್ನೆ ಮಧ್ಯಾಹ್ನ 3 ಗಂಟೆಯಲ್ಲಿ ಈ ಬಗ್ಗೆ ನನಗೆ ಟೆಲಿಗ್ರಾಂ ಬಂದ ಕೂಡಲೆ ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಆ ಸಮಯದಿಂದ ಇಲ್ಲಿಯವರೆಗೆ ನನಗೆ ಗೊತ್ತಿರುವಷ್ಟೇ ತಮಗೂ ಗೊತ್ತಿರುವುದು ಎಂದು ಮುಖ್ಯಮಂತ್ರಿಗಳು ಹೇಳುವುದಾದರೆ, ಇದರ ಬಗ್ಗೆ ಸರ್ಕಾರಕ್ಕೆ ಏನು ಆನಕ್ಕೆ ಇದೆ ಎಂಬುದು ಗೊತ್ತಾಗುತ್ತದೆ. ಅಡಳಿತ ಯಂತ್ರವನ್ನು ಹಿಡಿ

ದಿರುವವರು ಎಲ್ಲ ವಿಷಯಗಳನ್ನು ತರಿಸಿ ನೋಡಬಹುದಾಗಿತ್ತು. ನಾನು ವಿಷಯ ತಿಳಿಸಿದ ಕೂಡಲೆ ನಂಬಂಧಪಟ್ಟ ಐ. ಜಿ. ಪಿ. ಅವರಿಂದ ತೀವ್ರತೆಯನ್ನು ಆರಿತುಕೊಂಡು ನಡೆದಿರುವ ವಿದ್ಯಮಾನಗಳೆಲ್ಲವನ್ನೂ ತರಿಸಿಕೊಳ್ಳಬಹುದಾಗಿತ್ತು. ಅದರಲ್ಲಿ ವಿಫಲಗೊಂಡಿದ್ದೀರಿ. ನಾನು ಈ ವಿಷಯ ತಿಳಿಸಿ 15 ಗಂಟೆಗಳಾದ ಮೇಲೂ ಸಹ ನನಗೆ ಗೊತ್ತಿರುವಷ್ಟೇ ತಮಗೂ ಗೊತ್ತಿದೆ ಎಂದು ಮುಖ್ಯಮಂತ್ರಿಗಳು ಹೇಳುವುದಾದರೆ ಏನು ಹೇಳಬೇಕೋ ನನಗೆ ಗೊತ್ತಾಗುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಶ್ರೀ ಮಾನ್ ದೇವೇಗೌಡರು ಹೇಗೆ ಆರ್ಥ ಮಾಡುತ್ತಿದ್ದಾರೊ ಗೊತ್ತಿಲ್ಲ. ಘಟನೆ ನಡೆದಿದೆ. ಇದರ ಹಿನ್ನೆಲೆ ಏನು ಎಂಬುದನ್ನು ಗೊತ್ತು ಮಾಡಬೇಕಾದರೆ 24 ಗಂಟೆಯೊಳಗೆ ಗೊತ್ತುಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇವರ ಬಗ್ಗೆ ಇನ್‌ವೆಸ್ಟಿಗೇಷನ್ ಆಗ ಬೇಕಾಗಿದೆ. ಕೇವಲ 24 ಗಂಟೆಗಳಲ್ಲಿ ಎಲ್ಲವನ್ನೂ ಪತ್ತೆ ಹಚ್ಚುವುದಕ್ಕೆ ಯಾವ ದೇಶದಲ್ಲಿಯೂ ಸಾಧ್ಯವಾಗಿಲ್ಲ. ಈಗ ಎಷ್ಟು ವಿವರಗಳು ಬಂದಿದೆಯೋ ಅಷ್ಟನ್ನು ಕೊಡಲಾಗಿದೆ. ಹೆಚ್ಚಿಗೆ ವಿವರ ಬೇಕಾದರೆ ಪೂರ್ಣ ಇನ್‌ವೆಸ್ಟಿಗೇಷನ್ ಆಗಬೇಕು. ಪೋಲೀಸರು ಈ ಕೇಸ್‌ನಲ್ಲಿ ಮಾಫಿಯಲ್ಲಿ ಹೋಗಿ ಅವರನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋದರೋ ಅಥವಾ ಬೇರೆಎಲ್ಲಿಗೆ ಕರೆದು ಕೊಂಡು ಹೋದರೋ ಎಂಬುದು ಗೊತ್ತಿಲ್ಲ. All these matters will have to be investigated and then a proper report is to be placed. ನಾವು ವಿಫಲರಾಗಿದ್ದೇವೆಂದು ಹೇಳಿದರೆ ಹೇಗೆ?

ಶ್ರೀ ಎಚ್. ಡಿ. ದೇವೇಗೌಡ.—ತಾವು ಅದಳಿತ ಯಂತ್ರವನ್ನು ಇಟ್ಟುಕೊಂಡಿರುವಾಗ, ನನಗೆ ಎಷ್ಟು ಗೊತ್ತಿದೆಯೋ ಅಷ್ಟೇ ತಮಗೂ ಗೊತ್ತಿದೆ ಎಂದು ಏನು ಹೇಳಿದಿರಿ, ಆ ಒಂದು ಮಾತಿನಿಂದ ಈ ವಿಷಯದಲ್ಲಿ ನೀವು ವಿವರಗಳನ್ನು ತರಿಸುವುದರಲ್ಲಿ ವಿಫಲರಾಗಿದ್ದೀರಿ ಎಂದು ಹೇಳಿದೆ. ಅದು ನಿರ್ವಿವಾದವಾದ ಮಾತಾಗುತ್ತದೆ. ಈ ವಿಷಯದಲ್ಲಿ ಯಾವುದೇ ಇಶ್ಯೂ ಪ್ರಶ್ನೆ ಬೇಡ. ತಾವು ಈ ಬಗ್ಗೆ ತಮ್ಮ ತಾಳ್ಮೆ ಕಳೆದುಕೊಳ್ಳುವುದು ಬೇಡ.

ಶ್ರೀ ಡಿ. ದೇವರಾಜ ಅರಸ್.—ತಾವು ಸಹ ಆ ರೀತಿ ಮಾತನಾಡುವುದು ಬೇಡ.

ಶ್ರೀ ಎಚ್. ಡಿ. ದೇವೇಗೌಡ.—ನಮಗೆ ಇರಕ್ಕೆಕ್ಕಂಥ ಆತಂಕ ಏನೆಂಬುದು ತಮಗೆ ಗೊತ್ತಾಗುತ್ತಿಲ್ಲ. ಒಬ್ಬ ಮನುಷ್ಯನನ್ನು ಪೋಲೀಸಿನವರು ಕೊಲೆ ಮಾಡಿ, ಅದರಿಂದ ಏಮುಕ್ತರಾಗಲು ಆ ಶವವನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗಿ ಬಿಸಾಕಿದ್ದಾರೆ. ಈ ಕಾರಣದಿಂದ ತಾವು ಪೋಲೀಸಿನವರಿಂದಲೇ ವಿಚಾರಣೆ ನಡೆಸಿದರೆ ಸರಿಯಾದ ನ್ಯಾಯ ನಮಗೆ ಸಿಗುವುದಿಲ್ಲ.

2-30 P. M.

Sri D. DEVARAJ URS.—This is the fundamental principle on which we differ. Simply because two constables have committed a mistake ಪೋಲೀಸಿನವರ ಮೇಲೆ ನಂಬಿಕೆ ಇಲ್ಲವೆಂದರೆ ಹೇಗೆ? If the hon. Member starts on that premise, I am sorry I cannot accept that proposition.

Sri H. D. DEVE GOWDA.—What harm is there to conduct an impartial judicial probe?

ಶ್ರೀ ಡಿ. ದೇವರಾಜ ಅರಸ್ ಈ ವಿಚಾರದಲ್ಲಿ ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಇದರಲ್ಲಿ ಜೆಸ್ಟ್‌ಮಾಡಿ ಹೇಳುವಂಥ ಪ್ರಶ್ನೆ ಏನೂ ಇಲ್ಲ. ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂಬ ಪ್ರಶ್ನೆ ಬಂದಾಗ ಅದೂ ಮಾಡೋಣ.

Sri C. M. ARUMUGHAM.—Don't appoint a Police Officer to enter into the matter. That is our request.

Sri H. D. DEVE GOWDA.—I am demanding a judicial enquiry.

Sri D. DEVARAJ URS.—This is not the stage at which it can be done. Let us find out what exactly is the position. Let us get more details. Because a Police Officer is involved, he cannot say: "No Police Officer has judicious mind." If that is the approach of the hon. member, I am terribly sorry I am not accepting the proposition made by the hon. Member. If that is the case, where shall I bring

(SRI D. DEVARAJ URS)

a new set of officers from top who will be free from all these things? 'The entire Police Department is prejudiced and is trying to cover up the sins done by the officers at the lower level"; it may not be fair to say that of the department.

Sri M. S. KRISHNAN.—Previously, you will see that every time such a thing happened,- or most of the times they were talking of Magisterial enquiry. What has been the result of these Magisterial enquiries? There was a similar case of a person by name Munichandra who was alleged to have been killed in the Vyalikaval Police Station. Goverement came forward with the same proposition which you are saying and said that they were conducting an impartial enquiry.

Sri D. DEVARAJ URS.—Now that it has come before us, let me get much more information and then we will see whether it should be enquired by the Police Officers, or whether a Magisterial enquiry or Judical Enquiry should be held. That will be looked into later on, not immediately. What is the point in saying that I am side-tracking the issue? All this is not necessary and certainly that is not my intention.

ಶ್ರೀ ವಾಟಾಳ್ ನಾಗರಾಜ್.—ಈ ವಿಷಯ ನಡೆದಿದ್ದು 19ನೇ ತಾರೀಖು. ನಮಗೆ ಈ ವಿಷಯ ಗೊತ್ತಾಗಿರುವಾಗ ಈ ಸರ್ಕಾರಕ್ಕೆ ಆದರ ಬಗ್ಗೆ ಮಾಹಿತಿ ಪೂರ್ತಿಯಾಗಿ ದೊರೆಯಲಿಲ್ಲ ವೆಂದು ಹೇಳಿದರೆ, ನಾವು ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ಏನು ನಂಬಿಕೆ ಇಡಬೇಕು? ಇದೇ ರೀತಿಯ ಪ್ರಕರಣ ಮೈಸೂರಿನಲ್ಲಿಯೂ ಹಿಂದೆ ನಡೆಯಿತು. ಆಗಲೂ ನಾವು ಇದೇ ಸಭೆಯಲ್ಲಿ ಅದರ ಬಗ್ಗೆ ವಿವರಗಳನ್ನು ಕೊಡಬೇಕೆಂದು ಕೇಳಿದ್ದೆವು. ಅದರೆ ಇವತ್ತಿನವರೆಗೂ ಯಾವ ವಿವರವನ್ನು ಆ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿಲ್ಲ. ಅದೇ ರೀತಿಯಾಗಿ ಈ ವಿಚಾರವನ್ನೂ ಸಹ ತಳ್ಳಿಹಾಕುವ ಮಾತಿನಲ್ಲಿ ತಿರುಗಿಸಿ ಹೇಳುತ್ತಿದ್ದಾರೆ. ಆದ್ದರಿಂದ ಈ ವಿಚಾರದಲ್ಲಿ ಒಂದು ಸ್ಪಷ್ಟವಾದ ಅಭಿಪ್ರಾಯವನ್ನು ಈ ಸಭೆಗೆ ಕೊಡುವುದರಲ್ಲಿ ಅವರಲ್ಲಿ ನಿಶ್ಚಿತ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಮಂತ್ರಿಗಳು ಹೇಳುತ್ತಿರುವ ವಿಷಯಗಳನ್ನು ಕೇಳಿದ್ದೇನೆ. ಈ ಕೇಸ್ ಬೇರೆ ಸ್ಥಳಗಳಲ್ಲಿ ಯಾವಾಗಲಾದರೂ ನಡೆದಿದ್ದರೆ, ಅಥವಾ ಯಾವುದಾದರೂ ಬೇರೆ ಘಟನೆಗಳು ನಡೆದಿದ್ದರೆ ನಾವು ಇಷ್ಟು ಆತಂಕವನ್ನು ವ್ಯಕ್ತಪಡಿಸುತ್ತಿರಲಿಲ್ಲ. ಇದನ್ನು ಪೋಲೀಸ್ ಸ್ಟೇಷನ್ನಿನಲ್ಲಿ ಪೋಲೀಸಿನವರು ನಡೆಸಿರಬಹುದೆಂದು ಕಲ್ಪನೆ ಮೂಡಿ ಬರುತ್ತಿದೆ. ಅದ್ದರಿಂದ ಇದರ ವಿಚಾರದಲ್ಲಿ ಸರಿಯಾದ ವಿಚಾರಣೆಯಾಗಬೇಕು.

Sri D. DEVARAJ URS.—Even that is a matter still to be verified Somebody says it is in the Station. These police people have gone in mufti; they have not gone in dress. Whether it is by and Police Officer's Order or not, these matters will have to be lookey into.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೇ ಪೋಲೀಸ್ ಸ್ಟೇಷನ್ನಿನಲ್ಲಿಯೇ ಪೋಲೀಸರಿಂದಲೇ ನಡೆದಂಥ ಅನೇಕ ಘಟನೆಗಳು ಅನೇಕ ಇವೆ. ಅಂತಹ ಘಟನೆಗಳಲ್ಲಿ ಪ್ರತ್ಯಕ್ಷವಾದ ಸಾಕ್ಷಿಗಳನ್ನು ಪೋಲೀಸ್ ಸ್ಟೇಷನ್ನಿನಲ್ಲಿ ಪೋಲೀಸಿನವರಿಂದಲೇ ಪಡೆದಿರುವುದೂ ಉಂಟು. ಅಂತಹ ಘಟನೆಗಳನ್ನು ಸರಿಯಾಗಿ ರುಜುವಾತು ಮಾಡುವುದು ಅನೇಕ ಸಂದರ್ಭಗಳಲ್ಲಿ ಬಹಳ ಕಷ್ಟವಾಗುತ್ತದೆ. ಅನೇಕ ಕೇಸುಗಳಲ್ಲಿ ಸರಿಯಾಗಿ ರುಜುವಾತು ಪಡಿಸಲಕ್ಕಾಗಿಲ್ಲ. ಅನೇಕ ಕೇಸುಗಳು ರುಜುವಾತು ಆಗದೆ ತಪ್ಪಿಸಿಕೊಂಡು ಹೋಗಿರುವ ನಿದರ್ಶನಗಳೂ ಸಹ ಇವೆ. ಪೋಲೀಸಿನವರನ್ನೇ ಸಾಕ್ಷಿಗಳಾಗಿ ಮಾಡಬೇಕಾಗಿ ಬರುತ್ತದೆ.

Sri D. DEVARAJ URS.—He is mixing up the proceedings in a court of law in a case. ಇನ್‌ವೆಸ್ಟಿಗೇಷನ್ನಿನಲ್ಲಿ ಏನಾದರೂ ತಪ್ಪುಮಾಡಿರಬಹುದೆಂದು ಕೋರ್ಟಿಗೆ ಹೋದರೆ ಅದಕ್ಕೆ ನಾನೇನು ಮಾಡಬೇಕಾಗುತ್ತದೆ. ಕೋರ್ಟಿನಲ್ಲಿ ವಾದಮಾಡುವವರಿದ್ದಾರೆ. ಕೆಲವು ವೇಳೆ ವಿಚಾರಣೆಯ ಕಾಲದಲ್ಲಿ ಪ್ರತ್ಯಕ್ಷವಾಗಿ ಸಾಕ್ಷಿಗಳು ಇಲ್ಲದೆಯೇ ಕೇಸುಗಳು ಹಾಳಾಗಿ ಹೋಗುತ್ತವೆ, ಅದೂ ಉಂಟು.

ಶ್ರೀ ಕಾಗೋಡು ತಿಮ್ಮಪ್ಪ.—ಈ ಕೇಸ್‌ನಲ್ಲಿ ನಮ್ಮಲ್ಲಿ ಯಾರೊಬ್ಬರ ಇಂಟರೆಸ್ಟ್ ಏನೂ ಇಲ್ಲ. ಇದೇನು ಪಕ್ಷದ ಪ್ರಶ್ನೆಯಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಇದರಲ್ಲಿ ನಮ್ಮ ಕಡೆಯ ಯಾರಿಗೂ ಅಂತಹ ಇಂಟರೆಸ್ಟ್ ಇಲ್ಲ. ಯಾವ ತಪ್ಪನ್ನೇ ಆಗಲೀ ಮುಚ್ಚಬೇಕೆಂದು ಸರ್ಕಾರಕ್ಕೆ ಇಚ್ಛೆಯಿಲ್ಲ. ಅಂತಹ ಭಾವನೆ ಕೂಡ ಇಲ್ಲ. ನಾವು ಇದರ ಬಗ್ಗೆ ನಿಷ್ಪಕ್ಷಪಾತವಾಗಿ ವಿಚಾರಣೆಯನ್ನು ನಡೆಸುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಜುಡಿಷಿಯರ್ ಎನ್‌ಕ್ವೈರಿ ಮಾಡಿದರೆ ಮಾತ್ರ ನಿಜವಾದ ಒಂದು ಚಿತ್ರವನ್ನು ಕಂಡುಹಿಡಿಯುವುದಕ್ಕಾಗುತ್ತದೆ. ಆಗ ಯಾರು ನಿಜವಾಗಿ ತಪ್ಪಿತಸ್ಥರು ಎಂಬುದು ವರದಿಯಲ್ಲಿ ಬರುತ್ತದೆ. ಆಗ ಅಂತಹವರ ಮೇಲೆ ಚಾರ್ಜ್‌ಷೀಟ್ ಹಾಕಬಹುದು, ಕೇಸು ಹಾಕಬಹುದು. ಆದ್ದರಿಂದ ಇದರ ಒಂದು ಸತ್ಯವನ್ನು ಕಂಡುಹಿಡಿಯಬೇಕಾದರೆ ಜುಡಿಷಿಯರ್ ಎನ್‌ಕ್ವೈರಿ ಮಾಡುವುದು ಅಗತ್ಯವಿದೆ. ಪೋಲೀಸ್ ಅಧಿಕಾರಿಗಳು ಏನಾದರೂ ಈ ಕೇಸಿನಲ್ಲಿ ಇನ್‌ವೆಸ್ಟಿಗೇಷನ್ ಮಾಡಿದರೆ ಅನೇಕಸಾರಿ ಸಾಕ್ಷಿ, ಆಧಾರಗಳನ್ನು ಒದಗಿಸುವುದರಲ್ಲಿ ಸಾಮ್ಯವಾಗಿದೆ ಹೋಗಬಹುದು. ಒಂದು ವೇಳೆ ಅದರಲ್ಲಿ ಸತ್ಯವಿದ್ದರೂ ವಿಚಾರಣೆಯ ಕಾಲದಲ್ಲಿ ಆ ಸತ್ಯ ಹೊರಗೆ ಬರುವುದಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಈ ದೃಷ್ಟಿಯಿಂದ ಇದರ ಬಗ್ಗೆ ಇನ್‌ವೆಸ್ಟಿಗೇಷನ್ನನ್ನು ಯಾರೊಬ್ಬರ ಪ್ರಭಾವಕ್ಕೂ ಒಳಗಾಗದೆ ಇರುವ ಹಾಗೆ ಮಾಡಬೇಕೆಂಬುದೇ ನನ್ನ ಇಚ್ಛೆ ಹಾಗೂ ಈ ಸರ್ಕಾರದ ಇಚ್ಛೆ. I will also read the report.

"It is reported that about 10-45 A.M. on 20 2-1973, one Janaki Bai presented a complaint to the Deputy Inspector General of Police N.E.R., Gulbarga, allenging that on 19-2-1973 at 4 P.M. her husband Dasarathlal Verma was taken by two Constables in mufti and that he had not returned so far. A little earlier, the Police had information about a dead body lying inside the Fort Area with injuries. The local marwadies suspepected it to be that of the said Sri Dasharathlal Verma who was reported to be missing.

2. On the report of one Sri Vijayakumar Kotgi, a case under Section 174 Cr.P.C. was registered in Jagath Police Station at Gulbarga Town. After an inquest was held by the Sub-Divisional Magistrate, Gulbarga, the dead body was subjected to post-mortem examination. During the inquest, some injuries were noticed on the body and foul play was suspected. Hence the case has been converted to one under Section 302 I.P.C. in Jagath Police Station in Cr. No. 34/73. The inquest report and the result of the post-mortem examination are awaited.

3. Further investigation of the case has been ordered to be taken up by the C.I.D. One Police Constable and one Head Constable have been kept under suspension from 21-2-1973, on suspiction."

That is the position.

ಶ್ರೀ ಕೆ. ಮಾದೇಗೌಡ.—ಈಗ ಎಫ್.ಐ.ಆರ್. ರಿಪೋರ್ಟಿನಲ್ಲಿ ಯಾರ ಮೇಲೆ ಅಪಾದನೆ ಇದೆ?

ಶ್ರೀ ಎಚ್. ಡಿ. ದೇವೇಗೌಡ .— ತಾವು ಹೇಳುವ ಪ್ರಕಾರ ಮಫ್ತಿಯಲ್ಲಿ ಪೋಲೀಸರು ಕರಕೊಂಡು ಹೋದರೆ, ಪೂರನೆಯ ದಿನ ಡೆಡ್ ಬಾಡಿ ಸಿಕ್ಕಿದೆ. ಮಫ್ತಿಯಲ್ಲಿ ತೆಗೆದುಕೊಂಡ ಹೋದ ಕಾನ್‌ಸ್ಟೇಬಿಲ್ ಹೊರಗಡೆ ಅವರನ್ನು ಮರ್ಡರ್ ಮಾಡಿದ್ದಾರೆಂದು ಹೇಳುವುದಕ್ಕೆ ಸಾಧ್ಯವಿದೆ ಅದಕ್ಕೆ ಜ್ಯುಡಿಶಿಯಲ್ ಎನ್‌ಕ್ವೈರಿ ಮಾಡಿದರೆ, ಸರಿಯಾದ ಎವಿಡೆನ್ಸ್ ಕೊಟ್ಟು, ಸತ್ಯ ಸಂಗತಿಯನ್ನು ತಿಳಿಯುವುದಕ್ಕೆ ಸಾಧ್ಯವಾಗುತ್ತದೆ. ಅದರ ಬದಲು ಪೋಲೀಸರೇ ಎನ್‌ಕ್ವೈರಿ ಮಾಡಿದರೆ ಏನಾಗಬಹುದು ? ಇಡೀ ರಾಜ್ಯದಲ್ಲಿರತಕ್ಕಂತಹ ಪೋಲೀಸರು ಅಪ್ರಮಾಣಿಕರು ಎಂದು ನಾನು ಹೇಳುವುದಿಲ್ಲ. ಅದಕ್ಕೆ ದಯವಿಟ್ಟು ಇದರಲ್ಲಿ ರಾಜಕೀಯ ಮಾಡದೆ ಒಂದು ನಿಷ್ಪಕ್ಷಪಾತವಾದ ಜುಡಿಶಿಯಲ್ ಎನ್‌ಕ್ವೈರಿ ಮಾಡಿಸಬೇಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್ .— ನಾನು ಕಳಕಳಿಯಿಂದ ಹೇಳುವುದೇನೆಂದರೆ, ಇದರಲ್ಲಿ ರಾಜಕೀಯ ಮಾಡುವುದು ಬೇಡ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ರಾಜಕೀಯ ಮಾಡುತ್ತಾರೆಂಬ ಮಾತನ್ನು ಹಿಂದಕ್ಕೆ ತೆಗೆದು ಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಅದು ಅರ್ಥವಿಲ್ಲದ ಮಾತು. ಇದರಲ್ಲಿ ರಾಜಕೀಯ ಮಾಡುತ್ತಾರೆಂದು ಹೇಳುವುದು ಸರಿಯಾದುದಲ್ಲ.

ಶ್ರೀ ಡಿ. ದೇವರಾಜ ಅರಸ್.—ತಾವು ನಿಷ್ಪಕ್ಷಪಾತವಾದ ಎನ್‌ಕ್ವೈರಿ ಮಾಡಿಸಬೇಕೆಂದು ಹೇಳುತ್ತಿದ್ದೀರಿ. ಅದು ಮ್ಯಾಜಿಸ್ಟೀರಿಯರ್ನಾಗಲಿ, ಅಥವಾ ಇನ್ನಾವುದೇ ಆಗಲಿ ಯಾವುದಾದರೂ ಮಾಡಿಸುತ್ತೇವೆ. ಅಷ್ಟು ಮಾತ್ರ ಹೇಳುತ್ತೇನೆ. ನಿಷ್ಪಕ್ಷಪಾತವಾದ ವಿಚಾರಣೆ ಮಾಡುವುದನ್ನು ತಾವು ಹೇಳುತ್ತಿದ್ದೀರಿ. Judicial enquiries have been held, magisterial enquiries have been conducted, official enquiries have been held. Depending upon the seriousness of the matter, we will make the enquiry. ಇದಕ್ಕಿಂತ ಹೆಚ್ಚಿನ ಸೀರಿಯಸ್‌ನೆಸ್ ಏನು-?

ಶ್ರೀ ಎಂ. ಎಸ್. ಕೃಷ್ಣನ್.—ತಾವು ನಿಷ್ಪಕ್ಷಪಾತವಾದ ವಿಚಾರಣೆ ನಡೆಸುತ್ತೀರಿ ಎಂದು ಹೇಳಿದ್ದೀರಿ. ಈಗ ವಿಚಾರಣೆ ಏನು ಎಂಬುದರಲ್ಲಿ ಬಿನ್ನಾಭಿಪ್ರಾಯ ಬಂದಿರುವುದು. ಈಗ ತಾವು ಮ್ಯಾಜಿಸ್ಟೀರಿಯರ್ ಅಥವಾ ಜುಡಿಶಿಯರ್ ಅಥವಾ ಇನ್ನಿತರ ಯಾವುದೋ ಎನ್‌ಕ್ವಾಯರಿ ಮಾಡುವುದನ್ನ ಯೋಚನೆ ಮಾಡೋಣ ಎಂದು ಹೇಳುತ್ತಿದ್ದೀರಿ. ನಾನು ಹೇಳುವುದು ಈಗಾಗಲೇ ಈ ಘಟನೆ 19ನೇ ತಾರೀಕಿಗೆ ನಡೆದಿದೆ. ತಮಗೆ ಪೋಲೀಸರ ಸಂಪರ್ಕ ಇದೆ, ಇನ್ನೂ ಹೆಚ್ಚಿನ ವಿಚಾರ ತಿಳಿದಿರಬಹುದು. ಆದರೆ ಮ್ಯಾಜಿಸ್ಟಿರಿಯರ್ ಎನ್‌ಕ್ವೈರಿ ಬಗ್ಗೆ ನಮಗೆ ಸ್ವಲ್ಪ ಅನುಮಾನ. ಏಕೆಂದರೆ ಹಿಂದೆ ವಿದ್ಯಾರ್ಥಿಗಳ ಮತ್ತು ಕಾರ್ಮಿಕರ ಗಲಭೆಗಳ ಬಗ್ಗೆ ಮ್ಯಾಜಿಸ್ಟೀರಿಯರ್ ಎನ್‌ಕ್ವಾಯರಿಯಾಗಿ ಪೋಲೀಸರಿಗೆ ಯಾವ ರೀತಿ ಕ್ಲೀನ್ ಚಿಟ್ ಕೊಟ್ಟಿದ್ದಾರೆಂದು ನಮಗೆ ಗೊತ್ತಿದೆ. ಇನ್ನೊಂದು ಏನೆಂದರೆ ಜುಡಿಶಿಯರ್ ಎನ್‌ಕ್ವಾಯರಿ ಮಾಡಿದರೆ ಮಾನ್ಯ ದೇವೇಗೌಡರು ಹೇಳಿದ ಹಾಗೆ ಇದರ ಬಗ್ಗೆ ಆಳವಾಗಿ ಹೋಗುವುದಕ್ಕೆ ಅವಕಾಶವಾಗುತ್ತದೆ. ಇದರ ಹಿನ್ನೆಲೆ, ಮತ್ತು ಪೋಲೀಸರ ವರ್ತನೆ ಯಾವ ರೀತಿ ಇದ್ದಿರಬಹುದು ಇವೆಲ್ಲವೂ ಬರುವುದಕ್ಕೆ ಅವಕಾಶ ಇದೆ. ಆದ್ದರಿಂದ ಇದರ ಬಗ್ಗೆ ಒಂದು ಜುಡಿಶಿಯರ್ ಎನ್‌ಕ್ವೈರಿ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಈಗ ಐಪಿಸಿ 302ರ ಪ್ರಕಾರ ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಇದು ಕೋರ್ಟಿನಲ್ಲಿ ಬಂದೇ ಬರುತ್ತದೆ. ಇದರ ಮಧ್ಯೆ ತಾವು ಹೇಳುವುದು ನನಗೊಂದೂ ಅರ್ಥವಾಗುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಬೇರೆ ಖಾಸಗೀ ಕ್ಷೇತ್ರದಲ್ಲಿ ನಡೆಯುತ್ತಿದ್ದರೆ ಪೋಲೀಸರು ಇನ್‌ವೆಸ್ಟಿಗೇಶನ್ ಮಾಡುತ್ತಿದ್ದರು.

Sri D. DEVARAJ URS.—Why are you so much exercised about it : I do not understand. He was a Sub-Inspector who was involved in a murder case in the police station in Tarikere area.

ಶ್ರೀ ಕಾಗೋಡು ತಿಮ್ಮಪ್ಪ.—ಆ ಕೇಸ್ ಫೇಕ್ ಏನಾಗುತ್ತದೆ ಎಂಬುದನ್ನು ಕಾದು ನೋಡಿ.

Sri D. DEVARAJ URS.—It has been already booked under 302 IPC This is also going to Court.

Sri C. M. ARMUGHAM .— Therefore, what we want is, if the matter goes to the court necessarily the investigation will be done by the police. There is no politics in it. The man who has been murdered, is a merchant and belongs to no party. It is not proved that he belongs to any political party. Sri Deve Gowda also shares the same anxiety. We want a categorical assurance from the Chief Minister that he will order a judicial probe. If he can say, if not today, at least tomorrow he may do so, after all, Madam Speaker, it is a murde , murder alleged to have been committed by the police in the police station. We can instruct the IGP to run so Gulbarga and get the relevant facts. He need not depend upon trunk call, or telegram. He can ask the DIG, Gulbarga, to come here. You may keep the issue open.

Sri D. DEVARAJ URS.—The F.I.R. has been submitted to the court. I can assure the hon. member as well as the House that I am as much anxious as the hon. Member is to see that this case is properly conducted and no stone will be left unturned to see that justice will be meted out. I might even send the I G.P. or the D.I.G. and tell them that these are the Government orders and that they must proceed in this way only. Therefore, the question is on what should there be a judicial enquiry. Is it on the conduct of the police or on the conduct of the Constables or on what? The matter is going to the court and the police will have to investigate into this matter. May be that we may have certain doubts that the immediate police officers might have some prejudice or some indirect influence. I can therefore assure this House that this investigation shall be done not by persons directly or indirectly involved in this affair but by persons who are free from these things. I am certinly going to ensure that; I can promise that. Let the whole case be conducted in the court in a proper judicious manner without any bias or prejudice.

ಶ್ರೀ ಕಾಗೋಡು ತಿಮ್ಮಪ್ಪ.—ಚಾರ್ಜ್ ಷೀಟ್ ಫೈಲ್ ಮಾಡಿದ್ದರೆ, ಕೋರ್ಟಿಗೆ ಹೋಗುತ್ತಾರೆ. ಎಫ್.ಐ.ಆರ್. ಕಳುಹಿಸಿದ್ದಾರೆಂದು ಹೇಳಿದ ಮೇಲೆ, ತಾವು ಏನಾದರೂ ಮಾಡಿ ಚಾರ್ಜ್‌ಷೀಟ್‌ನ್ನು ತರಿಸಿಕೊಂಡು ನಮಗೆ ಹೇಳಬೇಕು.

ಶ್ರೀ ಡಿ. ದೇವರಾಜ್ ಅರಸ್.—ಇದು ನರಿಯಾದ ಕೇಸು ಆಗಿದ್ದರೆ, ತಪ್ಪಿತಸ್ಥರು ಎಂಬುದು ಪ್ರೂವ್ ಆದರೆ, ಅಂತಹ ತಪ್ಪಿತಸ್ಥರನ್ನು ಬಿಡುವುದಕ್ಕೆ ಅವಕಾಶವಿಲ್ಲ. ಇದರಲ್ಲಿ ಏನಾದರೂ ಅನುಮಾನವಿದ್ದರೆ, ಅಂಥಾದ್ದಕ್ಕೆ ಎಂದಿಗೂ ಅವಕಾಶಕೊಡುವುದಿಲ್ಲ.

ಅಧ್ಯಕ್ಷರು.—ಸರ್ಕಾರ ಇಷ್ಟೊಂದು ಆಷ್ಯೂರೆನ್ಸ್ ಕೊಟ್ಟಮೇಲೆ ಇನ್ನೇನು ಹೇಳುವುದು?

ಶ್ರೀ ಎಚ್. ಡಿ. ದೇವೇಗೌಡ.—ಇವತ್ತು ಕೋರ್ಟಿನಲ್ಲಿ ಒಂದು ನಿರ್ಣಯ ಇದರ ಬಗ್ಗೆ ಆಗುತ್ತದೆ. ಮರ್ಡರ್ ಕೇಸನ್ ಎಲ್ಲಾ ಯಾವಾಗಲೂ ಕೋರ್ಟಿಗೆ ಹೋಗುತ್ತವೆ. ಕೆಲವು ಮರ್ಡರ್ ಕೇಸುಗಳು ವಜಾ ಆಗಿರುವುದೂ ಗುಂಟು. ನಾನು ಹೇಳುವುದಿಷ್ಟೇ. ಇವತ್ತು ಅಲ್ಲಿ ನಡೆದಿರತಕ್ಕ ನಿಜಾಂಶವನ್ನು ವ್ಯಕ್ತಪಡಿಸುವುದಕ್ಕೆ ಒಂದು ನಿಸ್ಪಕ್ಷಪಾತವಾದ ವಿಚಾರಣೆಯಾಗಬೇಕು ಎಂಬುದು. ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ಎಫ್.ಐ.ಆರ್. ಕೋರ್ಟಿಗೆ ಹೋದ ಮೇಲೆ ಇವತ್ತು ಮತ್ತೆ ಪೋಲಿಸ್ ಕಾನ್‌ಸ್ಟೇಬಲ್ ಚಾರ್ಜ್‌ಷೀಟ್ ಕೊಡಬಹುದು.

ಶ್ರೀ ಡಿ. ದೇವರಾಜ್ ಅರಸ್.—ಇವತ್ತು ಇದರಲ್ಲಿ ಇನ್‌ವಾಲ್ವ್ ಆಗಿರುವವರನ್ನು ಬಿಟ್ಟು ಬೇರೆಯವರನ್ನು ಕಳುಹಿಸೋಣ. ಅದರಲ್ಲಿ ನಮಗೇನು ಅನುಮಾನ? If the local police has got some prejudice, I say we will send some other person.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರಲ್ಲಿ ಅವರು ಜುಡಿಷಿಯಲ್ ಪ್ರೋಬ್ ಮಾಡಬೇಕೇ, ಮ್ಯಾಜಿಸ್ಟೀರಿಯಲ್ ಪ್ರೋಬ್ ಮಾಡಬೇಕೇ ಅಥವಾ ಪೋಲೀಸ್ ಅಧಿಕಾರಿಗಳಿಂದಲೇ ಪ್ರೋಬ್ ಮಾಡಬೇಕೇ ಎಂಬ ಬಗ್ಗೆ ಅವರಲ್ಲಿ ಸಾಕಷ್ಟು ಅಂಕಿ ಅಂಶಗಳು ಇಲ್ಲ ಎಂದು ಗೊತ್ತಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಹಾಗಾದರೆ ಹೈಕೋರ್ಟ್ ಜಡ್ಜರನ್ನು ಈ ಕೇಸಿನ ಇನ್‌ವೆಸ್ಟಿಗೇಷನ್ನಿಗೆ ಹಾಕಲೇ ?

ಶ್ರೀ ಕಾಗೋಡು ತಿಮ್ಮಪ್ಪ.—ಏಕೆ ಹಾಕಬಾರದು ?

ಶ್ರೀ ದೇವರಾಜ್ ಅರಸ್.—ಮಾನ್ಯ ಸದಸ್ಯರು ಇಷ್ಟು ಲಘುವಾಗಿ ಮಾತನಾಡಬಾರದು.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಯಾರು ತಪ್ಪಿತಸ್ಥರಾಗಿ ಆ ತಪ್ಪಿಗೆ ಒಳಗಾಗುತ್ತಾರೋ ಅವರಿಗೆ ಶಿಕ್ಷೆ ಕೊಡಬೇಕು. ಗುಲ್ಬರ್ಗಾದಿಂದ ನನಗೂ ಟೆಲಗ್ರಾಂಗಳು ಬರುತ್ತಿವೆ. ಇದೇ ಪೋಲೀಸ್ ಸ್ಟೇಷನ್ನಿನಲ್ಲಿ 19 0ರಲ್ಲಿ ಗುಲ್ಬರ್ಗಾ ತಾಲ್ಲೂಕಿನ ಸಿಂಧಗಿ ಗ್ರಾಮದಲ್ಲಿ ಜೋಳದ ರಾಶಿ ಮಾಡುತ್ತಿರುವ ಕಾಲಕ್ಕೆ ಒಬ್ಬ ಸಾಹುಕಾರ ಸ್ಟೇಷನ್ನಿಗೆ ದೂರು ಕೊಟ್ಟನು. ಆಗ ಅವನನ್ನು ಅಲ್ಲಿನ ಸರ್ಕಲ್ ಇನ್‌ಸ್ಪೆಕ್ಟರ್ ಸತ್ಕುಹೋಗುವ ಹಾಗೆ ಹೊಡೆದಾಗ ಆ ಹೆಣ ಅಲ್ಲಿಯೇ ಇತ್ತು. ಅದರ ಬಗ್ಗೆ ನಾವೆಲ್ಲರೂ ಹಿಂದೆ ಡಿಮಾನ್‌ಸ್ಟ್ರೇಟ್ ಮಾಡಿದ್ದೇವೆ. ಆಗ ಮಾನ್ಯ ಶ್ರೀ ವೀರೇಂದ್ರ ಪಾಟೀಲ್ ಅವರೇ ಮುಖ್ಯಮಂತ್ರಿಯಾಗಿದ್ದರು. ಅದರ ಬಗ್ಗೆ ವರದಿ ಇನ್ನೂ ಇದುವರೆಗೆ ಬರಲಿಲ್ಲ,

ಶ್ರೀ ಕಾಗೋಡು ತಿಮ್ಮಪ್ಪ.—ಇದು ಪಾರ್ಟಿ ಅಫೇರ್ ಏನೂ ಅಲ್ಲ. ಇವತ್ತಿನ ದಿವಸ ಗುಲ್ಬರ್ಗಾದಲ್ಲಿ ಆದಂಥ ಕೇಸಿನ ಬಗ್ಗೆ ಪೋಲೀಸಿನವರು ಮಾಡಿರಂಥಾದ್ದು ಅನ್ಯಾಯ, ಅತ್ಯಾಚಾರವಾಗಿದೆ. ಇದರ ಬಗ್ಗೆ ಸರ್ಕಾರ ಪೆಟ್ಟಿನ ಗಮನ ಕೊಡಬೇಕು. ಆದರೆ ಹಿಂದಿನ ಸರ್ಕಾರದಲ್ಲಿಯೇ ಆಗಲೀ ಆಗ ನಡೆದಂಥ ಕೇಸಿನ ಬಗ್ಗೆ ತಪ್ಪಿತಸ್ಥರು ಯಾರೇ ಇದ್ದರೂ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಅವರನ್ನು ಶಿಕ್ಷೆಗೆ ಗುರಿಮಾಡಬೇಕು.

Sri D. DEVARAJ URS.—I have more than once stated that whatever might have happened in the past, I am not going to concern myself with that. In this particular case I am one with the hon. Members of the Opposition.

Sri C. M. ARUMUGAM.—We should not give a political twist but my friends on the other side are giving a political twist. Where is the need for my friends from Gulbarga to bring in the name of Sri Veerendra Patil ? We are not concerned with him, who was a Cheif Minister. If they bring in the name of Sri Veerendra Patil, then it means that the members from that side are trying to give a political twist.

Sri D. DEVARAJ URS.—I will never allow any political twist to be given to this matter.

Sri C. M. ARUMUGHAM.—Let us go to Gulbarga and let us see how they face the audience there.

(*There was uproar in the House*)

Sri D. B. KALMANKAR.—I take a challenge.

(*Again there was uproar*)

3-00 P.M.

Sri D. DEVARAJ URS.—Madam, let us not take these challenges here. There are other fields where we can speak. This is a matter over which we must seriously pounder. Whether 'x' can go to Gulbarga or 'Y' cannot go, is a matter which we can discuss on other occasions.

Sri C. M. ARUMUGHAM.—On this issue, let us face the people.

Sri D. DEVARAJ URS.—What is the issue here? I cannot understand how the hon. member suggests like this. Murder cases are to be investigated. How can we go to public platform to decide murder cases? I beg of him not to make such suggestions. There are other issues on which we can go to public platforms. This issues cannot be decided on public platforms. This is a criminal case which has to be decided in courts of law. If courts of law are not there and we take these things to streets, how will they be decided? Certain issues are decided in war fields. There it is not a question of deciding whether murder is correct or not There murders are murders. That is only in the battle fields. In the courts of law it is totally different. This is an issue to be decided in courts of law.

ಶ್ರೀ ಕೆ.ಎಚ್. ಹನುಮೇಗೌಡ.—ಯಾರು ತಪ್ಪು ಮಾಡಿದ್ದಾರೋ ಅದೇ ಇರಾಖೆಗೆ ವಿಚಾರಣೆ ಮಾಡುವುದಕ್ಕೆ ಅವಕಾಶ ಕೊಡುವುದು ಸರಿಯೇ ?

ಶ್ರೀ ಡಿ. ದೇವರಾಜ ಅರಸ್.—ಯಾರು ತಪ್ಪು ಮಾಡಿದ್ದಾರೆ, ಇದಕ್ಕೆ ಸಂಬಂಧಪಟ್ಟವರು ಯಾರು ಎಂಬುದು ನಿಮಗೆ ಗೊತ್ತಿದೆಯೇ !

ಶ್ರೀ ಕೆ. ಎಚ್. ಹನುಮೇಗೌಡ.—ಪೋಲೀಸಿನವರು ತಪ್ಪು ಮಾಡಿದ್ದಾಗ ಸಾಮಾನ್ಯವಾಗಿ ಅವರ ಮೇಲ್ಪಟ್ಟವರು ಅದರ ಬಗ್ಗೆ ವಿಚಾರಣೆ ನಡೆಸತಕ್ಕ ಕಾಲದಲ್ಲಿ ಅವರ ಬಗ್ಗೆ ಒಂದು ಅನುಕಂಪ ಇಟ್ಟುಕೊಂಡೇ ಇರುತ್ತಾರೆಂಬ ಅಂಶ ತಮಗೆ ಗೊತ್ತಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ನೀವು ಅದನ್ನು ಹೇಳಬಹುದು. ಆದರೆ ಅದನ್ನು ಒಪ್ಪುವುದಿಲ್ಲ. ತಾವು ಹೇಳುತ್ತಿರುವಂಥ ಒಂದು ಪದ್ಧತಿ ಯಾವ ರಾಜ್ಯದಲ್ಲೂ ಇಲ್ಲ. ಯಾರೋ ಒಬ್ಬ ಕಾನ್‌ಸ್ಟೇಬಲ್ ತಪ್ಪು ಮಾಡಿದ್ದರೆ ಇಡೀ ಪೋಲೀಸ್ ಇಲಾಖೆಯೇ ತಪ್ಪು ಮಾಡಿದೆ ಅನ್ನುವುದು ನ್ಯಾಯಾಂಗದ ಶಾಖೆಯಲ್ಲಿ ಒಬ್ಬ ಜುಡಿಷಿಯಲ್ ಅಧಿಕಾರಿ ಒಂದು ಜಡ್ಜ್‌ಮೆಂಟನ್ನು ತಪ್ಪು ತಿಳುವಳಿಕೆಯಿಂದ ಬರೆದಿದ್ದರೆ ಇಡೀ ಜುಡಿಷಿಯಲ್ ಇಲಾಖೆಯೇ ತಪ್ಪಾಗಿ ತೀರ್ಮಾನ ಕೊಡುತ್ತದೆ ಎಂದು ಹೇಳುತ್ತಿರುವುದು ಸರಿಯಲ್ಲ.....

ಶ್ರೀ ಎಸ್. ಬಂಗಾರಪ್ಪ.—ತಾವು ಇಂಥಾ ಒಂದು ನೀತಿಯನ್ನು ನಿರ್ಧಾರ ಮಾಡಿದ್ದಕ್ಕಾಗಿ ತಮಗೆ ಒಂದು ಗೋಲ್ಡ್ ಮೆಡಲನ್ನು ಕೊಡಬೇಕಾಗಿದೆ.....

ಶ್ರೀ ಡಿ. ದೇವರಾಜ ಅರಸ್.—ನಾನು ಅದನ್ನು ಕೇಳಿದ ಕಾಲಕ್ಕೆ ತಾವು ಕೊಡಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಹೋಗಲಿ ಮಾನ್ಯ ಮುಖ್ಯಮಂತ್ರಿಗಳು ಯಾವ ಯಾವ ಸಂದರ್ಭಗಳಲ್ಲಿ ಜುಡಿಷಿಯಲ್ ಎನ್‌ಕ್ವೈರಿ ನಡೆಸಬಹುದೆಂಬುದಕ್ಕೆ ಒಂದು ಮಾರ್ಗದರ್ಶನ ಮಾಡುತ್ತಾರೆಯೇ !

Sri D. DEVARAJ URS.—That will be looked into. I say on behalf of the Government that these things will be looked into impartially without any prejudice or political twist or turn. ಹಾಗೂ ಅವರಿಗೆ ಸಮಾಧಾನ ವಾಗದಿದ್ದರೆ I cannot help it.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರದವರು ತಾಳಿರತಕ್ಕ ಹುಬ್ಬೂರಿತನಕ್ಕೆ ನಮ್ಮ ಧಿಕ್ಕಾರವನ್ನು ಸೂಚಿಸಲು ನಾವು ಸಭೆಯಿಂದ ವಾಕ್‌ಔಟ್ ಮಾಡುತ್ತೇವೆ.

(ವಿರೋಧ ಪಕ್ಷದಲ್ಲಿದ್ದ ಸದಸ್ಯರು ಸಭೆಯಿಂದ ಹೊರಗೆ ಹೋದರು)

Sri D. DEVARAJ URS.—I knew your mind. You want to give a political twist like this. I know what you are doing. I know your feelings behind this.

Motion of Thanks to the Governor's Address

(Debate Continued)

MADAM SPEAKER.—We will go to next item. Sri Vatal Nagaraj to speak. The hon. member is absent. Next Sri Gundu Rao.

ಶ್ರೀ ಆರ್. ಗುಂಡೂರಾವ್ (ಸೋಮವಾರಪೇಟೆ).—ಸನ್ಮಾನ್ಯ.....

(ಶ್ರೀ ವಾಟಾಳ್ ನಾಗರಾಜ್ ಅವರು ಸಭೆಯೊಳಗೆ ಬಂದರು)

ಶ್ರೀ ಎಚ್. ಎನ್. ನಂಜೇಗೌಡ.—ಅಧ್ಯಕ್ಷರೇ ಸಭೆಯಿಂದ ವಾಕ್‌ಔಟ್ ಮಾಡತಕ್ಕ ಸಂದರ್ಭದಲ್ಲಿ ಅವರು ಎಷ್ಟು ಕಾಲ ಸಭೆಯಿಂದ ಹೊರಗಡೆ ಇರಬೇಕು ಎಂಬುದನ್ನು ನಿಗದಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ಇದೊಂದು ಸ್ಕೂಲನಲ್ಲಿ ಮಕ್ಕಳಾಟವಾಡಿದಂತೆ ಆಗುತ್ತದೆ. ಇದು ಹಾಗಾಗಬಾರದು.

Motion of thanks to the Governor's Address

(Debate Continued)

ಶ್ರೀ ಆರ್. ಗುಂಡೂರ್ (ಸೋಮವಾರಪೇಟೆ).—ಸನ್ಮಾನ್ಯ ಸಭಾಧ್ಯಕ್ಷರೇ : ರಾಜ್ಯಪಾಲರು ಅಪ್ಪಣೆ ಕೊಡಿಸಿರತಕ್ಕ ಭಾಷಣಕ್ಕೆ ವಂದನೆಯನ್ನು ಸಲ್ಲಿಸುತ್ತ ಅದನ್ನು ನಾನು ಹೃತ್ಪೂರ್ವಕವಾಗಿ ಅನುಮೋದಿಸುತ್ತಾ ಕೆಲವು ಮಾತುಗಳನ್ನು ಆಡಬಯಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ನಮ್ಮ ಮೈಸೂರು ರಾಜ್ಯದಲ್ಲಿ ಹಿಂದೆ ಒಂದು ವರ್ಷದಲ್ಲಿ ಮಾಡದೆ ಇದ್ದಂಥ ಅಭಿವೃದ್ಧಿ ಕಾರ್ಯಗಳನ್ನು ನಮ್ಮ ಈ ಸರ್ಕಾರ ಕೇವಲ ಹನ್ನೊಂದು ತಿಂಗಳಲ್ಲಿ ಸಾಧಿಸಿರುತ್ತೆಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ ಯಾವ ಯಾವ ಇರಾಖೆಯಲ್ಲಿ ಏನೇನು ಕೆಲಸ ಕಾರ್ಯಗಳು ನಡೆಯುತ್ತಿವೆ ಎಂಬುದನ್ನೂ ಕೂಡ ಅವರು ವಿಶದವಾಗಿ ಹೇಳಿದ್ದಾರೆ. ನಮ್ಮ ಸರ್ಕಾರ ಕಳೆದ 11 ತಿಂಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದೆ. ಹಿಂದೆ ನಮ್ಮ ಸರ್ಕಾರ ರಾಜ್ಯದ ಆಡಳಿತವನ್ನು ವಹಿಸಿಕೊಳ್ಳತಕ್ಕ ಕಾಲದಲ್ಲಿ ಈ ಸರ್ಕಾರಕ್ಕೆ ಹಣಕಾಸಿನ ವಿಚಾರದಲ್ಲಿ ಬಹಳ ತೊಂದರೆ ಇತ್ತು. ಆಗ ಇದಕ್ಕೆ ಅರವತ್ತು ಕೋಟಿ ಓವರ್ ಡ್ರಾಫ್ಟ್ ಇತ್ತು. ಇದರ ಆಡಳಿತವನ್ನು ನಮ್ಮ ಸರ್ಕಾರ ವಹಿಸಿಕೊಂಡ ಕೂಡಲೆ ಈ ಸರ್ಕಾರವನ್ನು ಇವರು ಹೇಗೆ ನಡೆಸುತ್ತಾರೆಂದು ಜನರು ಅನುಮಾನ ಪಡುತ್ತಿದ್ದಾಗ ನಮ್ಮ ಮುಖ್ಯ ಮಂತ್ರಿಗಳ ಹಾಗೂ ಇನ್ನುಳಿದ ಇತರೆ ಮಂತ್ರಿಗಳೆಲ್ಲರ ದಕ್ಷತೆಯಿಂದ ಆ ಹಣಕಾಸಿನ ಕೊರತೆಯನ್ನೂ ನಿಭಾಯಿಸಿಕೊಂಡು ಕಳೆದ 10 ವರ್ಷಗಳಲ್ಲಿ ಸಾಧಿಸದಿದ್ದ ಅಭಿವೃದ್ಧಿಕಾರ್ಯಗಳನ್ನು ನಮ್ಮ ಸರ್ಕಾರ 10 ತಿಂಗಳಲ್ಲಿ ಸಾಧಿಸಿ ಜನರ ಮೆಚ್ಚುಗೆಯನ್ನು ಗಳಿಸಿದೆ ಎಂದು ನಾನು ಧೈರ್ಯವಾಗಿ ಹೇಳುತ್ತೇನೆ.

ನಮ್ಮ ಸರ್ಕಾರದವರು ಬಹು ಮುಖ್ಯವಾದ ಬರಗಾಲವನ್ನು ಎದುರಿಸುವುದಕ್ಕೆ ಬಹಳ ಪ್ರಯತ್ನ ಮಾಡಿದ್ದಾರೆ. ಅನೇಕ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಅನೇಕ ಜನರಿಗೆ ಅಲ್ಲಿ ಸಹಾಯ ಕಲ್ಪಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ... ನಮ್ಮ ವಿರೋಧ ಪಕ್ಷದವರು

ಅನೇಕ ಅಪವಾದನೆಗಳನ್ನು ಮಾಡಿದ್ದಾರೆ, ಸರಕಾರ ವಿಫಲವಾಗಿದೆ, ಯಾವುದೇ ರೀತಿಯಲ್ಲಿ ಅಭಾವ ಪರಿಸ್ಥಿತಿಯಲ್ಲರುವ ಜನರಿಗೆ ಸಹಾಯವಾಡಲು ಮುಂದೆ ಬಂದಿಲ್ಲ ಎಂಬುದಾಗಿ ಬಹಳವಾಗಿ ಅಪವಾದನೆ ಮಾಡಿದ್ದಾರೆ. ಆದರೆ ಈ ಹತ್ತು ವರ್ಷಗಳ ಕಾಲ ಅವೇ ಭಾಗದಿಂದ ಬಂದವರೇ ಮುಖ್ಯ ಮಂತ್ರಿಯಾಗಿದ್ದರು, ಬರಗಾಲ ಪ್ರದೇಶದಿಂದ ಬಂದವರೇ ಮಂತ್ರಿಯಾಗಿದ್ದರು ಮತ್ತು ಯಾರು ಈ ದಿವಸ ಅಪವಾದನೆ ಮಾಡುತ್ತಿದ್ದಾರೋ ಅವರೇ ಹಣಕಾಸಿನ ಮಂತ್ರಿಯಾಗಿದ್ದರು. ಇವರೆಲ್ಲರೂ ಸೇರಿ ಯಾವುದೇ ಕಾರ್ಯಕ್ರಮ ಕೈಕೊಳ್ಳದೆ ಈಗಿನ ಸರಕಾರಕ್ಕೆ ಇಷ್ಟು ತೊಂದರೆಯಾಗಿದೆ. ಅದನ್ನು ಒಂದೇ ಸಾರಿ ಹೋಗರಾಡಿಸುವುದಕ್ಕಾಗುವುದಿಲ್ಲ. ಏಕೆಂದರೆ ಇದು ಬರೀ ದೊಡ್ಡ ದೊಡ್ಡ ಕಟ್ಟಡ ಕಟ್ಟುವುದಲ್ಲ, ಮತ್ತು ದೊಡ್ಡ ದೊಡ್ಡ ರಸ್ತೆ ಮಾಡುವುದಲ್ಲ. ನಾವಿರಾರು ಬಾವಿಗಳನ್ನು ತೆಗೆಸಬೇಕು, ಲಕ್ಷಾಂತರ ಜನರಿಗೆ ಕೆಲಸ ಒದಗಿಸಬೇಕು, ಲಕ್ಷಾಂತರ ದನಗಳಿಗೆ ಮೇವನ್ನೊದಗಿಸಬೇಕು. ಇವೆಲ್ಲಾ ಇರುವಾಗ 60 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಮೊಬಲಗಿನ ಓವರ್‌ಡ್ರಾಫ್ಟ್ ಬಿಟ್ಟು ರಾಜಕೀಯ ಉದ್ದೇಶದಿಂದ ಈ ಸರಕಾರ ವಿಫಲವಾಗಿದೆ, ಏನೂ ಮಾಡಿಲ್ಲ ಎಂಬುದಾಗಿ ಈ ಸಭೆಯೊಳಗೆ ಮತ್ತು ಹೊರಗೆ ಹೇಳಿಕೆ ಕೊಡುತ್ತಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.—60 ಕೋಟಿ ರೂಪಾಯಿ ಓವರ್‌ಡ್ರಾಫ್ಟ್ ಬಿಟ್ಟು ಹೋಗಿಲ್ಲ, ವೀರೇಂದ್ರ ಪಾಟೀಲರ ಸರಕಾರ ಬಿಟ್ಟಿರುವುದು 20 ಕೋಟಿ ರೂಪಾಯಿಗಳ ಓವರ್‌ಡ್ರಾಫ್ಟ್. 40 ಕೋಟಿ ರೂಪಾಯಿಗಳ ಓವರ್‌ಡ್ರಾಫ್ಟ್ ಧರ್ಮವೀರರು ಬಿಟ್ಟುಹೋಗರುವುದು.

ಶ್ರೀ ಡಿ. ದೇವರಾಜ ಅರಸ್.—ನೀವು ಹೇಳುವುದಕ್ಕೆ ಅವಕಾಶವಿದೆ, ಈಗ ಅವರು ಹೇಳುವುದಕ್ಕೆ ಅವಕಾಶ ಕೊಡಿ. ನೀವು ಬಾಯಿಗೆ ಬಂದಿದ್ದನ್ನು ಹೇಳಿದ್ದೀರಿ. ಅವರು ಹೇಳುವುದನ್ನು ಕೇಳಿ. ಅವರು ಹೇಳಿದಮೇಲೆ ಇಲ್ಲ ಎಂದು ಹೇಳಿ.

ಶ್ರೀ ಆರ್. ಗುಂಡೂರಾವ್.—ಸ್ವಲ್ಪ ಸಮಾಧಾನದಿಂದ ಹೇಳಿ. ಜೋರಾಗಿ ಹೇಳುವುದಕ್ಕೆ ನಮಗೂ ಬರುತ್ತದೆ. ಹತ್ತು ವರ್ಷದಿಂದೆಲೂ ಮುರಿದು ಹೋಗಿರುವ ಬಸ್ಸು ಕೊಟ್ಟರು, ಟೈರು ಸ್ಟೀಯರಿಂಗ್ ಇಲ್ಲದಿರುವ ಬಸ್ಸುಗಳನ್ನು ಹಾಕಿದರು, ಸರಕಾರದ ಹಣವನ್ನು ಕಟ್ಟಡ ಮತ್ತು ರಸ್ತೆಗಳ ಮೇಲೆ ಹಾಕಿದರು, ಸರಕಾರ ಪಾಪರ್ ಮಾಡಿದ್ದರಿಂದ ಈಗ ಬರಗಾಲ ಬಂದಿದೆ. ದೇಶದಲ್ಲಿ ಬಾವಿಗಳಾಗಿಲ್ಲ, ಕೆರೆಗಳಾಗಿಲ್ಲ. ಹೀಗೆ ಮಾಡಿ ಈಗ ಏನೂ ಮಾಡಿಲ್ಲವೆಂದು ಹೇಳಲು ನಾಚಿಕೆಯಾಗುವುದಿಲ್ಲವೇ ?

[*Sri K. H. Hanume Gowda Rose*]

Sri D. DEVARAJ URS.—We have every right to rebut and criticise them as they have to criticise us. Let them have some patience and listen.

ಶ್ರೀ ಆರ್. ಗುಂಡೂರಾವ್.—ನಾವು ನೀವು ಹೇಳುವುದನ್ನು ಕೇಳುತ್ತಿದ್ದೆವು, ನೀವು ಥಾಲೆಂಜ್ ಮಾಡುವಾಗ ನಾವು ಕೇಳುತ್ತಿದ್ದೆವು. ನಿಮಗೆ ಸಮಾಧಾನವಿರಲಿ, ನಾವು ಹೇಳುವುದನ್ನು ಸಮಾಧಾನದಿಂದ ಕೇಳಿ. ಹತ್ತು ವರ್ಷದಲ್ಲಿ ಏನೇನಾಗಿದೆ ಎಂಬುದನ್ನು ನೋಡಬಹುದು. ಟೈರಿಲ್ಲದ, ಸ್ಟೀಯರಿಂಗ್ ಇಲ್ಲದ, ಕಂಡೆಮ್ ಆದ ಬಸ್ಸುಗಳನ್ನು, ಮೋಟಾರು ಕಾರುಗಳನ್ನು ಬಿಟ್ಟು ಹೋದರು. ವೀರೇಂದ್ರ ಪಾಟೀಲರ ಸರಕಾರ ಅವಕ್ಕಿಂತ ಹೆಚ್ಚು ಏನು ಮಾಡಿದೆ ? ನಿಜಲಿಂಗಪ್ಪನವರ ಸರಕಾರ, ಮತ್ತು ವೀರೇಂದ್ರ ಪಾಟೀಲರ ಸರಕಾರ ಮಾಡಿದ ಪಾಪದ ಫಲ ಈ ದಿವಸ ಅನುಭವಿಸುತ್ತಿದ್ದೇವೆ. ಏಂದೆ ಹಣಕಾಸು ಕಂಟ್ರಾಕ್ಟರುಗಳಿಗೆಷ್ಟು ಹಂಚಿಕೆಯಾಯಿತು. ವಿದೇಶಿ ಬ್ಯಾಂಕುಗಳಲ್ಲಿ ಎಷ್ಟು ಹಣ ಯಾರ್ಯಾರು ಇಟ್ಟಿದ್ದಾರೆ ಇದೆಲ್ಲಾ ಪರಿಶೀಲನೆಯಾಗಲಿ.

Sri H. D. DEVE GOWDA.—Who is to hold the enquiry ? Tell your Chief Minister to hold an enquiry.

Sri R. GUNDU RAO.—Don't threaten Mr. Deve Gowda. I am on my legs, I am not yielding, please sit down. You behave properly.

Sri H. D. DEVE GOWDA.—I know how to behave. There is nothing to learn from Mr. Gundu Rao. You cannot question my behaviour. I can release the whole matter to the House. Mind it Mr.

(*Several Members rose to speak*)

Sri R. GUNDU RAO.—Madam Speaker, we have been watching for the last so many days.....

ಶ್ರೀ ಡಿ. ದೇವರಾಜ ಅರಸ್.—ಅಧ್ಯಕ್ಷರೇ, ಶ್ರೀ ದೇವೇಗೌಡರು ಇಷ್ಟು ಕೋಪ ಮಾಡಿಕೊಳ್ಳುವ ಅಗತ್ಯವಿಲ್ಲ. ಅವರು ಸಮಾಧಾನದಿಂದ ಇರಬೇಕೆಂದು ಕೇಳಿಕೊಳ್ಳುತ್ತೇನೆ. ವಿರೋಧ ಪಕ್ಷದ ನಾಯಕರು ಕ್ರಿಟಿಸೈಜ್ ಮಾಡಿದಾಗ ನಾವು ಸಹಿಸಿಕೊಳ್ಳಲಿಲ್ಲವೇ ?

[*Sri S. Bangarappa Rose*]

Sri H. D. DEVE GOWDA.—Let him criticise to the maximum extent. I welcome that. But he cannot question my behaviour. I am prepared to go out from politics, if I were to take a certificate from Mr. Gundu Rao. In fifteen years of politics nobody has questioned my behaviour. Madam Speaker, I protest and ask you to direct the hon. Member to withdraw those words.

ಶ್ರೀ ವಾಟಾಳ್ ನಾಗರಾಜ್.—ಇಂದಿನ ಸರ್ಕಾರದ ಬಗ್ಗೆ ಎನೇನೋ ಹೇಳುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್,—ವಿರೋಧಿಂದ್ದ ಪಾಟೀಲರ ಸರ್ಕಾರವನ್ನು ಕ್ರಿಟಿಸೈಜ್ ಮಾಡಿದರು,

Sri H. D. DEVE GOWDA.—Let him criticise. You hold an enquiry and hang him. But you cannot question my integrity.

ಶ್ರೀ ಡಿ. ದೇವರಾಜ ಅರಸ್,—Behaviour ಎಂದು ಅವರು ಹೇಳಿದ್ದು personal behaviour ಅಲ್ಲ, political behaviour ವಿಚಾರ,

Sri H. D. DEVE GOWDA.—You are intelligent enough to twist that. I am sorry.

Sri DEVARAJ URS,—Madam Speaker, individuals behaviour is in so many fields: He is also a political being, Mr. Gundu Roa is also one and all of us are- Politically I said we have a right to criticse.

Sri H. D. DEVE GOWDA,—I have no objection for his critising, But the way in which the hon. member Sri Gundu Rao went on questioning my behaviour, is not correct. As a member of this House for the last twelve years people know my behaviour very well.

Sri R. GUNDU RAO—Don't threate. I wll te'l you what I said

ಮಾನ್ಯ ಸಭಾಧ್ಯಕ್ಷಣಿಯವರೇ, ರಾಜ್ಯಪಾಲರ ಭಾಷಣದ ಮೇಲೆ ವಿರೋಧ ಪಕ್ಷದ ನಾಯಕರು ಮಾತನಾಡಿದಂಥ ಧಾಟಿ ಅವರು ಉಪಯೋಗಿಸಿದಂಥ ಪದ ಅವರು ಸರ್ಕಾರದ ಮೇಲೆ ಮಾಡಿದ ಟೀಕೆ ಇಡೀ ರಾಜ್ಯದಲ್ಲಿ ಯಾವ ವಿರೋಧ ಪಕ್ಷದ ನಾಯಕರು ಮಾಡಿಲ್ಲ ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಇನ್ನು ಕೆಲವು ಪದಗಳನ್ನು ಉಪಯೋಗಿಸಿದ್ದಾರೆ, ಸರ್ಕಾರಕ್ಕೆ ಕಿವಿ ಇಲ್ಲ, ಸರ್ಕಾರಕ್ಕೆ ಬುದ್ಧಿ ಇಲ್ಲ, ಸರ್ಕಾರಕ್ಕೆ ಯೋಚನೆ ಇಪೆಯೇ, ಸರ್ಕಾರಕ್ಕೆ ತಲೆ ಇದೆಯೇ, ಎಂದು. ಯಾರ ಸರ್ಕಾರ ? 10 ತಿಂಗಳಲ್ಲಿ ಅಧಿಕಾರಕ್ಕೆ ಬಂದ ಸರ್ಕಾರ 60 ಕೋಟಿ ರೂಪಾಯಿ ಓವರ್ ಡ್ರಾಫ್ಟನ್ನು, ಒಂದು ಟಾವಿ ತೋಡದೆ ಬರಗಾಲದ ಪ್ರದೇಶದ ಜನಗಳಿಗೆ ಯಾವ ಸೌಲಭ್ಯವನ್ನೂ ಮಾಡದೆ, ಬರೀ ಕಂಟ್ರಾಕ್ಟರುಗಳಿಗೆ ಲಾಭ ಮಾಡುವುದಕ್ಕೋಸ್ಕರ ರಸ್ತೆಗಳನ್ನು ನಿರ್ಮಾಣ ಮಾಡಿದ ಸರ್ಕಾರದ 10 ವರ್ಷಗಳ ಪಾಪದ ಫಲವನ್ನು 10 ತಿಂಗಳಿಂದ ಅನುಭವಿಸುತ್ತಿದ್ದೇವೆ. ನಾವು ಏನೂ ಮಾಡಿಲ್ಲ, ದೇಶದಲ್ಲಿ ಏನೂ ಆಗಿಲ್ಲ ಎಂದು ರಾಜ್ಯದ ಜನರಲ್ಲಿ ಅತ್ಯೋಲ ಕಲ್ಪೋಲ ಉಂಟುಮಾಡುವ ಪರಿಸ್ಥಿತಿಯನ್ನು ನಾನು ಈ ನಡೆಯಲ್ಲಿ ಖಂಡಿತವಾಗಿಯೂ ಖಂಡಿಸುತ್ತೇನೆ. ಹತ್ತು ವರ್ಷಗಳಲ್ಲಿ ಯಾರು ಸರ್ಕಾರವನ್ನು ನಡೆಸಿದರು.....

(ಒಟ್ಟಿಗೆ ನಾಲ್ಕೈದು ಜನ ಸದಸ್ಯರು ಎದ್ದು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರು—ಗಲಭೆ)

ಶ್ರೀ ಕೆ. ಎಚ್. ಹನುಮೇಗೌಡ.—ಮುಖ್ಯಮಂತ್ರಿಗಳು ಏತಕ್ಕೆ ಅವರಿಗೆ ಬುದ್ಧಿ ಹೇಳಬಾರದು ?

ಅಧ್ಯಕ್ಷರು.—ಹೀಗೆ ತುಂಬಾ ಟಚ್ ಆದರೆ ಕಷ್ಟ, ಅಸೆಂಬ್ಲಿ ನದಸ್ಯರಿಗೆ ಸ್ಪೋರ್ಟ್‌ಮನ್‌ಷಿಪ್ ಇರಬೇಕು. ಬೇರೆಯವರು ಹೊಡೆಯುತ್ತಾರೆ, ತಿರುಗಿ ಹೊಡೆಯುವುದಕ್ಕೆ ತಯಾರಾಗಬೇಕು. ನನಗೂ 10-15 ವರ್ಷಗಳ ಅನುಭವ ಇದೆ. ಯಾವಾಗಲೂ ಚೆನ್ನಾಗಿ ಹೊಡೆಯುವೆ, ಹೊಡೆದಾಗ ಹೊಡೆಸಿಕೊಳ್ಳುವೆ. ಇದು ಬಿಟ್ಟು ಇಷ್ಟು ಟಚೀ (touchy) ಆಗಿದ್ದರೆ ಹೇಗೆ? ನನ್ನದನ್ನು ಎಲ್ಲರೂ ಚೆನ್ನಾಗಿಕೇಳಬೇಕು, ಇನ್ನೊಬ್ಬರು ಅಂದದ್ದನ್ನು ಕೇಳಬಾರದು ಎಂದರೆ ಹೇಗೆ ? ದಯಮಾಡಿ ಯಾರು ಏನು ಮಾತನಾಡಿದರೂ ಕೇಳಿ, ಗುರುತು ಹಾಕಿಕೊಳ್ಳಿ, ನಿಮ್ಮ ಕಡೆಯವರು ಮಾತನಾಡಿದಾಗ ಜವಾಬು ಹೇಳಿ, ಈ ರೀತಿ ಹೊಡೆದಾಡಿದರೆ ಇದು ಅಸೆಂಬ್ಲಿಯ ಲಕ್ಷಣವೇ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಗುಂಡೂರಾಯರು ವೀರೇಂದ್ರ ಪಾಟೀಲರನ್ನು ನಿಜಲಿಂಗಪ್ಪನವರನ್ನು ಅವರ ಸರ್ಕಾರವನ್ನು ಯಾವ ಮಟ್ಟದಲ್ಲಿ ಕ್ರಿಟಿಸೈಸ್ ಮಾಡಲಿ ನಾನು ಬೇಡ ಎಂದು ಹೇಳುವುದಿಲ್ಲ. ಆವರು ನನ್ನ ಬಿಹೇವಿಯರ್ ಬಗ್ಗೆ ಹೇಳಿದರು... ....

MADAM SPEAKER,—I will have it verified.

Sri D. DEVARAJ URS.—Madam Speaker, with due respect, I submit that personally I have nothing against Sri Deve Gowda ; I have my friendship with him and I am not prepared to question his personal behaviour or character—I have never questioned. When Sri Gundu Rao was speaking, he has never questioned the personal behaviour of Sri Deve Gowda. If it is mistaken that he has questioned his personal behaviour, it is not correct. Supposing even assuming there is some questioning, let it be looked into. Either he stands by it or he will withdraw it. One thing I want to make it very clear. It is parliamentary procedure to use parliamentary language. Since it is within the ambit of using parliamentary language, nobody need withdraw his words unless it is unparliamentary. Supposing I make a personal remark, either I must substantiate and stand by it or I must take the consequences. If Sri Gundu Rao has made any remarks about the personal behaviour of Sri Deve Gowda, let it be looked into. You are here Madam to direct us. I would appeal to my friend the Leader of the Opposition not to get excited. I am not going to support anybody when personal aspersions are cast. Again, I want to say one thing. We are all public men including my friend Sri Deve Gowda.

Sri H. D. DEVE GOWDA.—I know that.

Sri D. DEVARAJ URS.—He is as much a public men as I am as Chief Minister and our conduct as public men can be questioned on the floor of the House. Our conduct in relation to the affairs in which we are involved, *viz*, politically and administratively, may be questioned. Supposing my personal behaviour is also wrong somewhere, they may question—there are many who have questioned even that. I do not know how Sri Deve Gowda can take exception to it, When they questioned the conduct of some Ministers Sri Deve Gowda did not object to it, I cannot understand why today he is so much agitated.

Sri B. BASAVALINGAPPA.—(Minister for Municipal Administration).—Because it touches him.

ಶ್ರೀ ಎಚ್ ಡಿ. ದೇವೇಗೌಡ—ನನಗೆ tuch ಆಗು ವುದಕ್ಕೆನಾನು ಟಿ ಬಿ ಬಂಗಲೆಗೆ ಯಾರನ್ನು ಕರೆದುಕೊಂಡು ಹೋಗಲಿಲ್ಲ. I will go further.....

Sri D. DAVARAJ URS.—I would appeal to him again that let us not threaten people like that, In a debate, we can interfere only if the member yields. Sri Deve Gowda juts intervened when Sri Gundu Rao was speaking, and he also yielded. Let us not take offence to it. Madam, I am very glad you clarified the position that in a parliamentary debate when we are prepared to criticise others, throw hard words and remarks against others, we must also equally receive it when others hit us so hard. I thought Sri Deve Gowda has got that much sportsmanship to receive, hard words equally- I know he won't get offended. But there are others, especially Sri Bangarappa; who always wants to give it to others but does not want to recieve, may be because he is poor in health, Sri Deve Gowda is as strong as I am in these matters. I do not know why he is so much agitated to lay.

ಶ್ರೀ ಎಸ್. ಬಂಗಾರಪ್ಪ.—ತಮ್ಮ ಬಾಡಿ ದಪ್ಪಗೆ ಇರುವುದರಿಂದ ಗೊತ್ತಾಗುವುದಿಲ್ಲ.

ಶ್ರೀ ಆರ್. ಗುಂಡೂರಾವ್.—ನಭಾಧ್ಯಕ್ಷರಿಯವರೇ, ನಾನು ಬಹಳ ಸಂಯಮದಿಂದ, ಸಮಾಧಾನದಿಂದ, ಶಾಂತಿಯಿಂದ ಶ್ರೀದೇವಾನ್ ದೇವೇಗೌಡರು ಮಾತನಾಡುವಾಗ ಇದ್ದೆ. ಅವರು ಸರ್ಕಾರದ ಮೇಲೆ ಮಾತನಾಡಿದ ಸಮಯದಲ್ಲಿ ಒಂದು ವ್ಯಸನದ ಸಂಗತಿ ಏನೆಂದರೆ, ಮಂತ್ರಿಗಳ ಮೇಲೆ, ಮಂತ್ರಿಮಂಡಲದ ಮೇಲೆ, ಸರ್ಕಾರದ ಮೇಲೆ ಆರೋಪ ಮಾಡುವಸಮಯದಲ್ಲಿ ಜವಾಬ್ದಾರಿ ಸ್ಥಾನದ ವಿರೋಧಪಕ್ಷದ ನಾಯಕರಾಗಿ ಮಾತನಾಡಬೇಕಾದರೆ ಬಹಳ ಸಮಾಧಾನದಿಂದ ಮಾತನಾಡಬೇಕಾಗಿತ್ತು.

ಶ್ರೀ ಡಿ. ದೇವರಾಜ ಅರಸ್.—ಬಹಳ ಕಠಿಣವಾಗಿ ಮಾತನಾಡಲು ಬಿಡಿ.

ಶ್ರೀ ಆರ್. ಗುಂಡೂರಾವ್.—ಬರಗಾಲ ಪರಿಸ್ಥಿತಿಯನ್ನು ನಮ್ಮ ಸರ್ಕಾರ ಎದುರಿಸಿದ ರೀತಿಯಲ್ಲಿ ಹಿಂದೆ ಯಾವ ಸರ್ಕಾರವೂ ಎದುರಿಸಿರಲಿಲ್ಲ ಎಂದು ಹೇಳುತ್ತೇನೆ. ನಾವು ಖರ್ಚು ಮಾಡಿರುವಷ್ಟು ಹಣವನ್ನು ಹಿಂದಿನ 10 ವರ್ಷಗಳ ಕಾಲದಲ್ಲಿ, ಆ ಭಾಗದಲ್ಲಿ ಯಾವ ಸರ್ಕಾರವೂ ಖರ್ಚು ಮಾಡಿಲ್ಲ. ನಮ್ಮ ರಾಜ್ಯಪಾಲರು ಹೇಳಿದ ರೀತಿಯಲ್ಲಿ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ, ಮುಖ್ಯವಾಗಿ ಹರಿದು ಹಂಚಿ ಹೋದ ಐದು ಪ್ರಾಂತ್ಯಗಳನ್ನು ಒಟ್ಟುಗೂಡಿಸಿ ಕರ್ನಾಟಕ ಎಂದು ಹೆಸರಿಡಲಿಕ್ಕೆ ಇಲ್ಲಿಯವರೆಗೂ ಪ್ರಯತ್ನಪಟ್ಟರೂ ಆಗದೆ ಇದ್ದಾಗ, ನಮ್ಮ ಸರ್ಕಾರ ಬಂದ ಕೆಲವೇ ಸಮಯದಲ್ಲಿ ಕರ್ನಾಟಕ ಎಂದು ಹೆಸರಿಟ್ಟ ಕೀರ್ತಿ ನಮ್ಮ ಸರ್ಕಾರಕ್ಕೆ ಬಂದಿದೆಆ.ದ್ದರಿಂದ ನಮ್ಮ ಸರ್ಕಾರವನ್ನು ನಾನುಬಹಳವಾಗಿಅಭಿನಂದಿಸುತ್ತೇನೆ.ಕಾನೂನಿನ ಬಗ್ಗೆ, ಕಾನೂನು ಮತ್ತು ಶಿಸ್ತು ಪರಿಪಾಲನೆಯ ಬಗ್ಗೆ ಅನೇಕ ಮಾತುಗಳು ಕೇಳಿಬರುತ್ತಿವೆ. ಆದರೆ ನಮ್ಮ ಸರ್ಕಾರ 11 ತಿಂಗಳು ರಾಜ್ಯಭಾರ ಮಾಡಿದಾಗ ಯಾವುದೇ ರೀತಿಯ ಹೆಚ್ಚಿನ ಕಾನೂನು ಬಂಧಕ ಚಳುವಳಿಯಾಗಲಿ, ಯಾವ ತರಹದ ಸತ್ಯಾಗ್ರಹ ಮಾಡಲಿಕ್ಕೆ ಆಗಲಿ ಪ್ರಭಾವವನ್ನು ಉಪಯೋಗಿಸಿಲ್ಲ.

3-30 P. M.

[MR. DEPUTY SPEAKER in the Chair]

ಅದು ಅಲ್ಲದೆ ಹೆಚ್ಚಿನ ಆ ತರಹ ಅವಕಾಶ ಬಂದಿಲ್ಲ: ಮಧುಗಿರಿ ಪ್ರಕರಣದಲ್ಲಿ ನಡೆದಂಥ ಪೋಲೀಸ್ ಅತ್ಯಾಚಾರಕ್ಕೂ ಈಗ ನಡೆದಿರತಕ್ಕದ್ದಕ್ಕೂ ಹೋಲಿಸಿ ನೋಡಿ ಪರಾಮರ್ಶೆ ನಡೆಸಿದರೆ ನಿಜವಾಗಿ ಈಗಿನ ಸರ್ಕಾರ ಬಹಳಮಟ್ಟಿಗೆ ಪೋಲೀಸ್ ಇಲಾಖೆಯಲ್ಲಿ ತ್ವರಿತವಾಗಿ ನೂರಕ್ಕೆ ನೂರು ಪಾಲು ಆ ಇಲಾಖೆಯನ್ನು ಸುಧಾರಿಸಲು ಆಗದೆ ಇದ್ದರೂ; ಹಿಂದಿನ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಪೋಲೀಸ್ ಇಲಾಖೆ ಬಹಳಮಟ್ಟಿಗೆ ಸುಧಾರಿಸದೆ ಎನ್ನುವುದರಲ್ಲಿ ಸಂಶಯವಿಲ್ಲ. ಇನ್ನೂ ಹೆಚ್ಚಿಗೆ ಸುಧಾರಿಸಲಿಕ್ಕೆ ಪ್ರಯತ್ನಪಡಬೇಕು ಎಂದು ಈ ಸಮಯದಲ್ಲಿ ಸಲಹೆ ಕೊಡುತ್ತಿದ್ದೇನೆ. ಎರ್ಲಾ ನೀರಾವರಿ ಯೋಜನೆಗಳನ್ನು ಸರ್ಕಾರ ಕೈಕೊಂಡಿದೆ. ಕೇಂದ್ರಸರ್ಕಾರ ಸಹಾಯ ಮಾಡಲು ಮುಂದೆ ಬಂದಿದೆ. ಈಗಾಗಲೇ 10 ಲಕ್ಷ ರೂಪಾಯಿಗಳನ್ನು ನಮ್ಮ ಸರ್ಕಾರಕ್ಕೆ ಕೇಂದ್ರಸರ್ಕಾರ ನೆರವು ಕೊಟ್ಟಿದೆ. ಅದರ ಜೊತೆಗೆ ಬೇರೆ ಅಣೆಕಟ್ಟುಗಳನ್ನು ತೆಗೆದುಕೊಳ್ಳುವುದಕ್ಕೆ ಕೇಂದ್ರಸರ್ಕಾರ ಮುಂದೆ ಬಂದಿದೆ. ಇಷ್ಟೊಂದು ಬರಗಾಲ ಪರಿಸ್ಥಿತಿ ಇದ್ದರೂ ಸಹಿತ ಸರ್ಕಾರವು

ಯಾವುದೇ ನೀರಾವರಿ ಯೋಜನೆಯನ್ನು ಕೈಬಿಡಬೆ ಎಲ್ಲಾ ನೀರಾವರಿ ಯೋಜನೆಗಳನ್ನು ಕೈಕೊಳ್ಳುತ್ತಿಬೆ. ಮತ್ತು ಕೈಕೊಂಡು ಪೂರೈಸುತ್ತಿಬೆ ಎನ್ನುವ ಭರವಸೆಯನ್ನು ರಾಜ್ಯಪಾಲರ ಭಾಷಣದಲ್ಲಿ ತಿಳಿಸಿದ್ದಾರೆ. ಆದುದರಿಂದ ಸರ್ಕಾರದ ದೃಷ್ಟಿಯಿಂದ ಎಷ್ಟೂರಮಟ್ಟಿಗೆ ಬಡವರ ಮತ್ತು ರೈತರ ಹಾಗೂ ದೇಶದ ಜನರ ಏಳಿಗೆಗೆ ಪ್ರಯತ್ನ ಪಡುತ್ತಿದೆ ಎಂಬುದು ಇದರಿಂದ ಗೊತ್ತಾಗುತ್ತದೆ. ಆದುದರಿಂದ ಆದಷ್ಟು ಕೇಂದ್ರಸರ್ಕಾರದ ನೆರವನ್ನು ಇನ್ನು ಹೆಚ್ಚಿಗೆ ಪಡೆದು ದೇಶದಲ್ಲಿ ಉಂಟಾಗಿರುವ ತಕ್ಕ ವಿದ್ಯುಚ್ಛಕ್ತಿ ಅಭಾವ, ನೀರಾವರಿ ಅಭಾವ ಮುಖ್ಯವಾಗಿ ಬರಗಾಲ ದೇಶದಲ್ಲಿ ಉಂಟಾಗಿರುವ ತಕ್ಕ ಅಭಾವವನ್ನು ಹೋಗಲಾಡಿಸುವುದಕ್ಕೆ ಸರ್ಕಾರ ಪ್ರಯತ್ನ ಪಡಬೇಕು ಮತ್ತು ಅದರ ಬಗ್ಗೆ ಮುಖ್ಯಮಂತ್ರಿಗಳು ಹೆಚ್ಚಿನ ಪ್ರಭಾವವನ್ನು ಕೇಂದ್ರಸರ್ಕಾರದ ಮೇಲೆ ಬೀರಬೇಕು ಎಂದು ಈ ಸಮಯದಲ್ಲಿ ಮುಖ್ಯಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸಭಾಧ್ಯಕ್ಷರೇ ದೇಶದಲ್ಲಿ ಹರಿಜನ, ಗಿರಿಜನ ಮತ್ತು ಹಿಂದುಳಿದವರ್ಗದವರ ಅಭಿವೃದ್ಧಿ ಬಗ್ಗೆ ಬಾಯಿ ಮಾತಿನಲ್ಲಿ ಮಾಡಬೇಕು ಎಂದು ಇದ್ದರೇ ಹೊರತು ಇಷ್ಟು ಸಂಖ್ಯೆಯಲ್ಲಿ ಹರಿಜನ ಗಿರಿಜನ, ಮತ್ತು ಬಡವರು ಎಷ್ಟು ಹಿಂದುಳಿದಿದ್ದಾರೆ ಎಂದು ಪರಿಶೀಲನೆ ಮಾಡಲಿಕ್ಕೆ 22 ವರ್ಷಗಳ ಕಾಲ ಇವರು ಒಂದು ಆಯೋಗವನ್ನು ರಚನೆ ಮಾಡಿರಲಿಲ್ಲ. ಆದರೆ ಬಡವರನ್ನು ಉದ್ಧಾರಮಾಡಬೇಕು, ರೈತರ ಪ್ರಕ್ಕಳನ್ನು ಉದ್ಧಾರ ಮಾಡಬೇಕು, ಹಿಂದುಳಿದವರನ್ನು ಉದ್ಧಾರಮಾಡಬೇಕು ಎಂದು ಘೋಷಣೆ ಇಟ್ಟುಕೊಂಡು ಸರ್ಕಾರ ಬಂದ ತರುಣದಲ್ಲಿ ಒಂದು ಆಯೋಗವನ್ನು ರಚಿಸಿದ ಕೀರ್ತಿ ಸರ್ಕಾರಕ್ಕೆ ಬರುತ್ತದೆ ಎಂದು ಹೆಮ್ಮೆಯಿಂದ ಹೇಳುತ್ತೇನೆ. ವಿಕಕ್ಕೋಸ್ಕರ ಎಂದರೆ ರಾಜ್ಯಾಂಗದಲ್ಲಿ ಎಷ್ಟೇ ಅವಕಾಶವಿದ್ದರೂ ಕೇಂದ್ರಸರ್ಕಾರದಿಂದ ಎಷ್ಟು ಹಣ ಸಹಾಯ ಬಂದರೂ ಆ ಹಣ ಯಾರು ಹಿಂದುಳಿದಿದ್ದಾರೆ ಯಾರಿಗೆ ಸಿಗಬೇಕಿತ್ತೋ ಅವರಿಗೆ ದೊರಕದೆ ಆ ಹಣ ದುರುಪಯೋಗ ಆಗಿದೆ. ಅವರಿಗೆ ಸರಿಯಾದ ರೀತಿಯಲ್ಲಿ ಯಾವ ಭಾಗದಲ್ಲಿ ಅಭಿವೃದ್ಧಿ ಆಗಬೇಕೋ ಆ ಭಾಗದಲ್ಲಿ ಅಭಿವೃದ್ಧಿ ಆಗದೆ ಬೇರೆ ಯಾವುದೋ ಪ್ರಭಾವದಿಂದ ಕಾರ್ಯಗತ ಆಗದೆ ಅವರಿಗೆ ಹೆಚ್ಚಿನ ಪ್ರಗತಿಯಾಗಲಿಕ್ಕೆ ಪ್ರಯೋಜನವಾಗಿಲ್ಲ. ಆ ದಿಶೆಯಿಂದ ಆಯೋಗ ರಚಿಸಿ ಹಿಂದುಳಿದವರು ಎಷ್ಟುಜನ ಎಲ್ಲೆಲ್ಲಿ ಇದ್ದಾರೆ ಏನೇನು ಸಹಾಯ ಆಗಬೇಕು ಯಾವರೀತಿ ಸಹಾಯ ಆಗಬೇಕು ಎಂದು ಪರಿಶೀಲನೆಮಾಡಲು ಹಿಂದುಳಿದವರ್ಗಗಳ ಆಯೋಗ ರಚನೆ ಮಾಡಿರುವುದು ಬಹಳ ಸ್ವಾಗತಾರ್ಹ ಕಾರ್ಯ ಎಂದು ಈ ಸಭೆಯಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಅಧ್ಯಕ್ಷರೇ ಇನ್ನು ತಾಲ್ಲೂಕು ಬೋರ್ಡುಗಳು ಪಂಚಾಯತಿಗಳಾಗಲಿ ನಿರಿಯಾದ ವ್ಯವಸ್ಥಿತ ರೀತಿಯಲ್ಲಿ ಕೆಲಸಮಾಡುತ್ತಾ ಇಲ್ಲ. ತಾಲ್ಲೂಕು ಬೋರ್ಡ್ ಆಗಲಿ ಪಂಚಾಯತಿಗಳಿಗೆ ಆಗಲಿ ಸರಿಯಾದ ಕಾನೂನು ನಮ್ಮ ಸರ್ಕಾರದಲ್ಲಿ ಇಲ್ಲ. ಈ ಏನು ಪರಿಸ್ಥಿತಿ ಇದೆ ಎಂದರೆ ಪಂಚಾಯತಿಗಳಲ್ಲಿ ಹಣ ಇರುವುದಿಲ್ಲ. ಪಂಚಾಯತಿಗಳಿಂದ ಯಾವುದೇ ಅಭಿವೃದ್ಧಿ ಕಾರ್ಯಮಾಡಬೇಕು ಎಂದರೆ ತಾಲ್ಲೂಕು ಬೋರ್ಡುಗಳ ಕಡೆ ನೋಡಬೇಕು, ತಾಲ್ಲೂಕು ಬೋರ್ಡು ಏನು ಅಭಿವೃದ್ಧಿ ಕೆಲಸಮಾಡಬೇಕು ಎಂದರೆ ಜಿಲ್ಲಾ ಪರಿಷತ್ತು ಕಡೆ ನೋಡಬೇಕು ಜಿಲ್ಲಾ ಪರಿಷತ್ತು ಕೆಲಸ ಮಾಡಬೇಕು ಎಂದರೆ ರಾಜ್ಯಸರ್ಕಾರದ ಕಡೆ ನೋಡುತ್ತಿರುತ್ತಾರೆ. ರಾಜ್ಯ ಸರ್ಕಾರದಿಂದ ಎಷ್ಟು ಹಣ ಕೊಡುತ್ತಾರೆ ಆ ಹಣವಲ್ಲಿ ಜಿಲ್ಲೆಯಲ್ಲಿರುವ ಎಲ್ಲಾ ತಲೆಮ್ಲೊಕುಗಳಿಗೆ, ಪಂಚಾಯತಿಗಳಿಗೆ ಹಣ ತಲುಪುವ ಹೊತ್ತಿಗೆ ಅಲ್ಲಿ ಹಣ ಇರುವುದಿಲ್ಲ. ಸರ್ಕಾರ ಎಷ್ಟು ಹಣ ಕೊಡಬೇಕಾದರೆ ತಾಲ್ಲೂಕುಬೋರ್ಡು ಇಷ್ಟು ವಂತಿಗೆ ಕೊಡಬೇಕು ಎಂದು ಹೇಳುತ್ತಾರೆ. ಈ ಸರ್ಕಾರದ ನೀತಿಯಿಂದ ಮತ್ತು ಕಾನೂನಿನಿಂದ ಹಳ್ಳಿಗಳ ಅಭಿವೃದ್ಧಿಗೆ ಗ್ರಾಮಗಳ ಅಭಿವೃದ್ಧಿಗೆ ತಾಲ್ಲೂಕುಗಳ ಅಭಿವೃದ್ಧಿಗೆ ಬಹಳ ಅಡಚಣೆಯಾಗಿರುತ್ತದೆ ಎಂದು ಸರ್ಕಾರವನ್ನು ಒತ್ತಾಯಪೂರ್ವಕವಾಗಿ ಕೇಳುತ್ತೇನೆ. ಈ ಕಾನೂನನ್ನು ಬದಲಾವಣೆಮಾಡಿ ಹೊಸ ಕಾನೂನನ್ನು ತಂದು ನಿಜವಾಗಿ ತಾಲ್ಲೂಕು ಬೋರ್ಡುಗಳು ಪಂಚಾಯತಿಗಳು ತಮ್ಮ ಕಾಲನ ಮೇಲೆ ನಿಂತುಕೊಳ್ಳುವ ರೀತಿ ಅವರಿಗೆ ಸರ್ಕಾರದವರು ಸಹಾಯ ಮಾಡದೆ ಹೋದರೆ ಈಗಿನ ಕಾನೂನಿನ ಪ್ರಕಾರ ತಾಲ್ಲೂಕು ಬೋರ್ಡುಗಳು ಗ್ರಾಮಪಂಚಾಯತಿಗಳಿಂದ ನಮ್ಮ ರಾಜ್ಯಕ್ಕೆ ಯಾವುದೇ ತರಹ ಪ್ರಯೋಜನವಿಲ್ಲ. ಈಗ ಇರತಕ್ಕ ತಾಲ್ಲೂಕುಬೋರ್ಡುಗಳನ್ನು ರದ್ದುಮಾಡಿ, ಗ್ರಾಮಪಂಚಾಯತಿಗಳನ್ನು ರದ್ದುಮಾಡಿ ಹೊಸ ಕಾನೂನು ಜಾರಿಗೆ ತರುವುದರ ಮೂಲಕ ದೇಶದಲ್ಲಿ ಹೊಸ ಮಾದರಿ ಯೋಜನೆ ಜಾರಿಗೆ ಬರುವುದಕ್ಕೆ ಸಹಾಯಮಾಡಬೇಕು. ಈ ವಿಚಾರದಲ್ಲಿ ತಾವು ಬಹಳ ಕಳಕಳಿಯಿಂದ ಆಲೋಚನೆ ಮಾಡಬೇಕು. ಇಲ್ಲದೆ ಹೋದರೆ ತಾಲ್ಲೂಕು ಬೋರ್ಡುಗಳು ಮತ್ತು ಪಂಚಾಯತಿಗಳಿಂದ ಹೆಚ್ಚಿನ ಪ್ರಯೋಜನವಾಗುವುದಿಲ್ಲ ಎಂದು ಈ ಸಮಯದಲ್ಲಿ ಸ್ಪಷ್ಟಪಡಿಸುತ್ತೇನೆ.

ಸಮಾಜವಾದವನ್ನು ಜಾರಿಗೆ ತರಬೇಕು ಎಂದು ಎಷ್ಟು ಹೇಳುತ್ತಾ ಇದ್ದರೂ ಸಹ ಅನೇಕ ಸಂಘ ಸಂಸ್ಥೆಗಳಲ್ಲಿ ಸರ್ಕಾರ ಯೋಜನೆ ಮಾಡಿದ ತತ್ವಗಳನ್ನು ಇಂಟರ್‌ಮೀಡಿಯರಿ ಏನೆನ್ನಿ ಮುಖಾಂತರ ಮಾಡಿಸುತ್ತಾ ಇರುವುದರಿಂದ ಅನೇಕ ಹಣ ಖರ್ಚಾಗದೆ ಲ್ಯಾಪ್ಸ್ ಆಗಿರುವಂತಹ

(ಶ್ರೀ ಆರ್. ಗುಂಡೂರಾವ್)

ಅನೇಕ ಸಂದರ್ಭಗಳೂ ಇವೆ. ಆ ದಿಶೆಯಿಂದ ತಾವು ಸಹಕಾರ ಕಾನೂನನ್ನು ಸಹ ಬದಲಾವಣೆ ಮಾಡಿ ಸರ್ಕಾರ ನೇರವಾಗಿ ಹತೋಟಿ ಇಟ್ಟುಕೊಂಡು ರೈತರ ಅಭಿವೃದ್ಧಿಪಡಿಸುವುದಕ್ಕೆ ಆಲೋಚನೆ ಮಾಡಬೇಕೆಂದು ಸಲಹೆಯನ್ನು ಈ ಸಮಯದಲ್ಲಿ ಸರ್ಕಾರದಮುಂದೆ ಇಡುತ್ತಿದ್ದೇನೆ. ನಮ್ಮ ಸರ್ಕಾರ ಬಂದಮೇಲೆ ಸರ್ಕಾರದ ದಕ್ಷತೆ ಹೆಚ್ಚಿಸಲಿಕ್ಕೆ ಅನೇಕ ಪ್ರಯತ್ನ ಪಡುತ್ತಿದ್ದಾರೆ. ಮೊದಲೇ ಹೇಳಿದ ರೀತಿಯಲ್ಲಿ ನಮ್ಮ ಕೈಗೆ ಸಿಕ್ಕಿದ ಪರಿಸ್ಥಿತಿ ಯಾವರೀತಿ ಇವೆಯೆಂದರೆ ಯಾವ ತರಹ ರಿಪೇರಿಗೂ ಒಳಪಡದ ಬಸ್ಸಿನ ರೀತಿ ಇದೆ. ಟೈರ್ ಸರಿಮಾಡಿದರೆ ಸ್ಟೇರಿಂಗ್ ಹೋಗುತ್ತವೆ. ಸ್ಟೇರಿಂಗ್ ರಿಪೇರಿ ಮಾಡಿದರೆ ಹಾರನ್ ಕಟ್ಟುಹೋಗುತ್ತದೆ. ಈ ತರಹ ಕಷ್ಟದ ಪರಿಸ್ಥಿತಿಯಲ್ಲಿ ಇದೆ. ಈ ಎಲ್ಲವನ್ನೂ ಸರಿಪಡಿಸಿ ಮುಂದೆ ತೆಗೆದುಕೊಂಡು ಹೋಗಬೇಕಾಗಿದೆ.

ಇನ್ನು ಫಿಲಮ್ ಕಾರ್ಪೊರೇಷನ್ ಶ್ರೀಮಾನ್ ನಿಜಲಿಂಗಪ್ಪನವರ ಕಾಲದಲ್ಲಿ ಸ್ಥಾಪನೆಯಾಯಿತು. ಆ ಸಮಯದಲ್ಲಿ ಅಧಿಕೃ ಅಧ್ಯಕ್ಷರಾಗಿ ಶ್ರೀಮಾನ್ ದೇವರಾಜ ಅರಸ್‌ರವರನ್ನು ನೇಮಕ ಮಾಡಿದ್ದರು. ಆಗಲೂ ಸಹಿತ ಆ ಕಾರ್ಪೊರೇಷನ್ ಆಫೀಸಿನಲ್ಲಿ ಯಾವುದೇ ಚಟುವಟಿಕೆ ಇಲ್ಲದೆ, ಯಾವ ಗುರಿಗೋಸ್ಕರ ಕಾರ್ಪೊರೇಷನ್ ಸ್ಥಾಪನೆಯಾಯಿತೋ ಆ ಗುರಿಯನ್ನು ಸಾಧಿಸಲಿಕ್ಕೆ ಆಗಲಿಲ್ಲವೆಂದು ಶ್ರೀಮಾನ್ ವೀರೇಂದ್ರ ಪಾಟೀಲರು ರಾಜಕೀಯ ಕಾರಣದಿಂದ ದೇವರಾಜ ಅರಸ್ ಅವರನ್ನು ಬದಲಾವಣೆಮಾಡಿ ಶ್ರೀ ರಾಜಶೇಖರಮೂರ್ತಿ ಯವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಆದರೆ ಯಾವುದೇ ಕೀರ್ತಿಯನ್ನು ಸಂಪಾದನೆ ಮಾಡದೆ ವಿಫಲಗೊಂಡಂಥ ಆ ಕಾರ್ಪೊರೇಷನ್ ಈಗ ನಮ್ಮ ಸರ್ಕಾರ ಬಂದಮೇಲೆ ಭಾರತ ದೇಶದಲ್ಲಿ ಮಾದರಿ ಫಿಲಮ್ ಕಾರ್ಪೊರೇಷನ್ ಎಂದು ಹೆಸರು ಪಡೆದಿದೆ. ಪ್ರತಿ ತಾಲ್ಲೂಕುಗಳಲ್ಲಿಯೂ ಒಂದೊಂದು ಥಿಯೇಟರ್ ಮಾಡಬೇಕೆಂದು ಒಂದು ಯೋಜನೆ ಇಟ್ಟುಕೊಂಡಿದೆ. ಈಗ ನಗರಗಳಲ್ಲಿರುವ ಮನರಂಜನೆ ಕಾರ್ಯಕ್ರಮದ ಸೌಲಭ್ಯವನ್ನು ಹಳ್ಳಿಗಳಿಗೂ ಒದಗಿಸಬೇಕೆಂದು ನಮ್ಮ ಸರ್ಕಾರ ಬಂದಮೇಲೆ ಕಾರ್ಯಕ್ರಮ ಹಾಕಿಕೊಂಡಿದೆ. ಈ ನಮ್ಮ ಫಿಲಮ್ ಕಾರ್ಪೊರೇಷನ್ ಇಡೀ ದೇಶದಲ್ಲಿ ಮಾದರಿ ಕಾರ್ಪೊರೇಷನ್ ಆಗಿ ಗ್ರಾಮ ಗ್ರಾಮಗಳಲ್ಲಿ ಜನಗಳಿಗೆ ಮನರಂಜನೆ ಕಾರ್ಯಕ್ರಮ ಏರ್ಪಾಡು ಮಾಡುವಂತಹ ಯೋಜನೆ ಹಾಕಿಕೊಂಡಿದೆ. ಫಿಲಂ ಕಾರ್ಪೊರೇಷನ್ನಿನ ಡೈರೆಕ್ಟರಾಗಿ ಶ್ರೀ ಕೆ. ಕೆ. ಮಿರ್ತಿ ಅವರು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಆ ಕಾರ್ಪೊರೇಷನ್ ಅನೇಕ ವರ್ಷಗಳ ಕಾಲ ನಿದ್ರಾವಸ್ಥೆಯಲ್ಲಿತ್ತು. ಆಫೀಸಿನಲ್ಲಿ ಧೂಳು ಹೊಡೆಯುತಿದ್ದ ಪರಿಸ್ಥಿತಿಯಲ್ಲಿತ್ತು. ಅಂಥ ಕಾರ್ಪೊರೇಷನ್ ಭಾರತದ ಮಟ್ಟದಲ್ಲಿ ಒಳ್ಳೆಯ ಕಾರ್ಪೊರೇಷನ್ ಆಗಿರುವಾಗ, ಕನ್ನಡ ಚಿತ್ರಗಳು ತಯಾರಾಗಬೇಕು, ಅವು ಮ್ಯೂಸೂರಿನಲ್ಲಯೇ ತಯಾರಾಗಬೇಕು, ಇಲ್ಲಯೇ ಫಿಲಂ ಪ್ರೊಡ್ಯೂಸ್ ಆಗಬೇಕು ಎಂದು ಮುಂತಾಗಿ ಮಾನ್ಯ ಸದಸ್ಯರಾದ ನಾಗರಾಜ್ ಅವರೇ ಹೇಳುತ್ತ ಇರುವಾಗ, ನಮ್ಮಲ್ಲಿಯೇ ಒಂದು ಒಳ್ಳೆಯ ಸ್ಟುಡಿಯೋ ತಯಾರು ಮಾಡಿ ಚಿತ್ರರಂಗದಲ್ಲಿ ಬರುವ ನಟನಟಿಯರಿಗೆ ಅನುಕೂಲ ಮಾಡಿ ಇಲ್ಲಿಯೇ ಫಿಲಂ ಪ್ರಿಂಟ್ ಮಾಡಬೇಕು ಎಂದು ಯೋಜನೆಯನ್ನು ಕಾರ್ಪೊರೇಷನ್ ಹಾಕಿಕೊಂಡಿದೆ. ಆದಕ್ಕೆ ಸರ್ಕಾರದ ಪೂರ್ಣ ಬೆಂಬಲವಿದೆ. ಮಹಾ ಮಹಾ ವ್ಯಕ್ತಿಗಳು, ಕನ್ನಡ ಭಾಷೆಗೆ ಯಾರು ಬೆಂಬಲವನ್ನು ಕೊಡುತ್ತಿರಲಿಲ್ಲವೋ ಅಂಥ ಜನರು, ದಿಲೀಪ್ ಕುಮಾರ್‌ರವರಂಥವರು ಈ ಕಾರ್ಪೊರೇಷನ್ನಲ್ಲಿ ಸದಸ್ಯರಾಗಿದ್ದಾರೆ. ಕಾರ್ಪೊರೇಷನ್ ಮುಂದುವರಿಯಬೇಕು ಎಂದು ಲಕ್ಷಾಂತರರೂಪಾಯಿ ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಹೀಗಿರುವಾಗ ರಾಜ್ಯಪಾಲರು ಮಾಡಿರುವ ಭಾಷಣ ನಮ್ಮ ದೇಶದ ಪ್ರಗತಿಗೆ ಬಹಳ ಸಹಾಯಕವಾಗಿದೆ. ಈ ಸರ್ಕಾರ ಬಹಳ ಚೆನ್ನಾಗಿ ಬಡವರಿಗೆ ಸಹಾಯ ಮಾಡಲು ಕೆಲಸ ಮಾಡುತ್ತದೆ. ಈ ದಿಸೆಯಲ್ಲಿ ಹಿಂದಿನ ಸರ್ಕಾರ ಏನೇನು ವಿಫಲಗೊಂಡಿತ್ತು. ನಮ್ಮ ಸರ್ಕಾರ ಒಂದು ಹೆಜ್ಜೆ ಮುಂದೆ ಹೋಗಿ ಬಡಜನರಿಗೆ ಬೇಕಾದ ಸಹಾಯವನ್ನು ಮಾಡುತ್ತದೆ ಎಂದುಹೇಳಿ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕೆ ಅವರನ್ನು ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

[*Sri Vatal Nagaraj Rose*]

MR. DEPUTY SPEAKER.—Sri Vatal Nagaraj the Hon. Speaker had called for the hon. member. He was not there when his chance had come he had walked out of the House and he was not here. As a special case. He has been given a chance now for only 10 minites. But it should not be taken as a precedent.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಬಗ್ಗೆ ಈಗತಾನೇ ನನ್ನ ಮಿತ್ರರಾದ ಗುಂಡೂರಾವ್ ಅವರು ಬಹಳ ಸುದೀರ್ಘವಾಗಿ ಸರ್ಕಾರವನ್ನು ಹೊಗಳಿದ್ದಾರೆ. ಈ ಸರ್ಕಾರವನ್ನು ಹೊಗಳಿನ ತೂಲಕ್ಕೆ ಏರಿಸುವ ಜಾಲವೂ ಅವರಿಗೆ ಬರುತ್ತದೆ. ನಾನು ರಾಜ್ಯಪಾಲರ ಭಾಷಣದಲ್ಲಿ ಹೊಸದೇನೂ ಕಾಣುತ್ತಿಲ್ಲ. ಜನತೆಗೆ ಅನುಕೂಲವಾಗುವಂಥ ಯಾವುದೇ ಸಲಹೆಯನ್ನು ಕೂಡ ರಾಜ್ಯಪಾಲರು ಕೊಟ್ಟಿಲ್ಲ. ಪ್ರತಿವರ್ಷ ಮಾತಾದ ಹಾಗೆ ರಾಜ್ಯಪಾಲರು ಭಾಷಣ ಮಾಡಬೇಕು, ಎರಡು ನಭೆಗಳು ಸೇರಬೇಕು, ಅದಕ್ಕೆ ನಾವು ಒಂದನೆಯನ್ನು ನಲ್ಲಿಸಬೇಕು. ಈ ರೀತಿಯಾಗಿ ರಾಜ್ಯಪಾಲರು ಮಾಡಿರುವ ಭಾಷಣ ಸಂಪ್ರದಾಯ ಬದ್ಧವಾಗಿದೆ. ಉಪಯೋಗಿಸಿರುವ ಪದಗಳಲ್ಲಿ ಹೆಚ್ಚು ವ್ಯತ್ಯಾಸ ಕೂಡ ಇಲ್ಲ. ರಾಜ್ಯದ ಆಡಳಿತದ ಬಗ್ಗೆಯಾಗಲೀ, ಬರಗಾಲಪೀಡಿತ ಪ್ರದೇಶದ ಜನರ ಬಗ್ಗೆಯಾಗಲೀ ಸರಿಯಾದ ಮಾರ್ಗದರ್ಶನವನ್ನು ರಾಜ್ಯಪಾಲರ ಭಾಷಣದಲ್ಲಿ ನೋಡದೆ ಇರುವುದು ನನಗೆ ತೀವ್ರತರವಾದ ವ್ಯಥೆಯಾಗಿದೆ. ಅನೇಕ ಮಂತ್ರಿಗಳು ಭ್ರಷ್ಟಾಚಾರದ ಬಗ್ಗೆ ಜನಜನಿತವಾಗಿ ಇಡೀ ರಾಜ್ಯದಲ್ಲಿ ಪತ್ರಿಕೆಗಳಲ್ಲಿ ರತ್ನ ರತ್ನಯಲ್ಲಿ ಮಾತನಾಡಿರುವುದಕ್ಕೆ ಮಾತಾಗಿದ್ದರೂ ಕೂಡ ಇವು ಯಾವುದೂ ರಾಜ್ಯಪಾಲರ ಕಿವಿಯ ಮೇಲೆ ಬೀಳದೆ, ಅವರ ಭಾಷಣದಲ್ಲಿ ಬಾರದೆ ಇರುವುದು ನನಗೆ ಬಹಳ ತೀವ್ರ ಅಸಮಾಧಾನವನ್ನು ಉಂಟುಮಾಡಿದೆ. ವ್ಯಥೆಯನ್ನುಂಟು ಮಾಡಿದೆ ರಾಜ್ಯಪಾಲರನ್ನು ಮೈಯಕ್ಕಿಕವಾಗಿ ನಾನು ಗೌರವಿಸುತ್ತೇನೆ. ಆದರೆ ಅನೇಕ ಜನ ಮಂತ್ರಿಗಳ ಭ್ರಷ್ಟಾಚಾರದ ಬಗ್ಗೆ ಅವರು ಮಾತನಾಡದೆ ಇರತಕ್ಕದ್ದು ನನಗೆ ಬಹಳ ದುಃಖವಾಗಿದೆ. ಇದನ್ನೆಲ್ಲ ನೋಡಿದರೆ ಸರ್ಕಾರದವರು ತಯಾರು ಮಾಡಿ ಅವರ ಕೈಗೆ ಕೊಟ್ಟ ಭಾಷಣವೆಂದು ಕಾಣುತ್ತದೆ.

ಶ್ರೀಮಾನ್ ಗುಂಡೂರಾಯರು ಮಾತನಾಡುತ್ತಾ ಫಿಲಂ ಡೆವಪ್‌ಮೆಂಟ್ ಕಾರ್ಪೊರೇಷನ್ ಶ್ರೀಮಾನ್ ಕೆ. ಕೆ ಮೂರ್ತಿ ಅವರಿಂದ ಸ್ವಗತಿದಾಯಕವಾಗಿ ನಡೆಯತ್ತಿದೆ, ಇಂಡಿಯಾ ದೇಶದಲ್ಲಾ ಒಳ್ಳೆಯ ಕಾರ್ಪೊರೇಷನ್ ಎಂದು ಹೆಸರು ಗಳಿಸಿದೆ, ನಟನಟಿಯರನ್ನು ತಯಾರು ಮಾಡಬೇಕು, ಒಳ್ಳೆಯ ನಟ ನಟಿಯರಿಗೆ ಪುರಸ್ಕಾರ ಕೊಡಬೇಕು ಎಂದು ಹೇಳಿದರು. ಅಲ್ಲದೆ ಅಲ್ಲಿ ಮೊದಲು ಸುಣ್ಣ ಹೊಡೆದಿರಲಿಲ್ಲ, ಕಸ ಗುಡಿಸಿರಲಿಲ್ಲ ಎಂದು ಹೇಳಿದರು. ಈಗ ಆ ಸ್ಥಳ ನಟಿಯರು ಬರತಕ್ಕ ಸ್ಥಳವಾಗಿರುವುದರಿಂದ ಏರ್ ಕಂಡಿಷನ್ ರೂಂ ಆಗಿದೆ. ಒಳಗಡೆ ಹೋದವರನ್ನೆಲ್ಲ ಆಕರ್ಷಣೆ ಮಾಡತಕ್ಕ ಶಕ್ತಿಗಳು ಅಲ್ಲಿವೆ. ಆ ಶಕ್ತಿಯ ಜಾಲ ಇವರೆಲ್ಲರಿಗೂ ಬಿದ್ದಿದೆ. ಅಲ್ಲಿ ಬೀಸುವ ಮಾಯೆಯ ಜಾಲಕ್ಕೆ ಅನೇಕ ಜನ ಮರುಳಾಗಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಅಲ್ಲಿಗೆ ಹೋಗಿದ್ದರೋ?

ಶ್ರೀ ವಾಟಾಳ್ ನಾಗರಾಜ್.—ನಾನು ಹೋಗಿಲ್ಲ. ನಿನ್ನೆ ದಿವಸ ಮಾನ್ಯ ಮಂತ್ರಿಗಳ ಮನೆಯಿಂದ ನುಮಾರು ನಾಲ್ಕೂವರೆ ಗಂಟೆಯಲ್ಲಿ ಬರುತ್ತಿದ್ದುದನ್ನು ನೋಡಿದೆ. ಆದ್ದರಿಂದ ಬಸವಲಿಂಗಪ್ಪನವರೂ ಈ ಮಾಯಾಜಾಲದಲ್ಲಿ ಬಿದ್ದಿದ್ದಾರೆ ಅಂದುಕೊಂಡೆ.

ಶ್ರೀಮಾನ್ ಗುಂಡೂರಾಯರು ಮಾತನಾಡುತ್ತ ಫಿಲಂ ಕಾರ್ಪೊರೇಷನ್ನಿಗೆ ಶ್ರೀ ಕೆ. ಕೆ. ಮೂರ್ತಿ ಅವರನ್ನು ಮಾನ್ಯ ಧರ್ಮವೀರರು ರಾಜ್ಯಪಾಲರಾಗಿದ್ದಾಗ ನೇಮಕ ಮಾಡಿದರು ಎಂದು ಹೇಳಿದರು. ಶ್ರೀ ಧರ್ಮವೀರರ ಕಾಲದಲ್ಲಿ ನೇಮಕ ಮಾಡಬೇಕಾದರೆ ಅದಕ್ಕೆ ಶ್ರೀಮಾನ್ ದೇವರಾಜ ಅರಸು ಅವರೇ ಕಾರಣ. ಶ್ರೀ ದೇವರಾಜ ಅರಸು ಅವರು ಧರ್ಮವೀರರ ಹತ್ತಿರ ಹೋಗಿ ಶ್ರೀ ಕೆ. ಕೆ. ಮೂರ್ತಿ ಅವರನ್ನು ಫಿಲಂ ಕಾರ್ಪೊರೇಷನ್ ಚೇರ್‌ಮನ್ ಆಗಿ ಮಾಡಬೇಕೆಂದು ಹೇಳಿದರೆಂದು ನನಗೆ ಗೊತ್ತಿದೆ. ಆಗ ಇದ್ದಂಥ ಸರ್ಕಾರ ಉರುಳಿ ಬಿದ್ದಿದ್ದು ನಾವು ಶಾಸಕರ ಭವನಕ್ಕೆ ಬಂದಾಗ ಅಲ್ಲಿ ನಡೆಯುತ್ತಿದ್ದ ಮಾತುಕತೆಗಳಿಂದ ಈ ನೇಮಕವನ್ನು ಶ್ರೀ ದೇವರಾಜ ಅರಸು ಅವರೇ ಮಾಡಿಸಿದರು ಎಂದು ಹೇಳುತ್ತೇನೆ.

ಶ್ರೀ ಆರ್. ಗುಂಡೂ ರಾವ್.—ಟೇಪ್ ರಿಕಾರ್ಡ್ ಮಾಡಿಸಿದ್ದೀರಾ?

ಶ್ರೀ ವಾಟಾಳ್ ನಾಗರಾಜ.—ನತ್ಯ ಹೇಳುವುದಕ್ಕೆ ಟೇಪ್ ರಿಕಾರ್ಡ್ ಬೇಕೇ? ನಾನು ಇದಕ್ಕೆ ಒಂದೇ ಒಂದು ನಿದರ್ಶನವನ್ನು ಕೊಡುತ್ತೇನೆ. ಮಾನ್ಯ ಬಸವಲಿಂಗಪ್ಪನವರು ರಾಜ್ಯದಲ್ಲಿರುವ ಬಡವರಿಗೆಲ್ಲ ನಿವೇಶನಗಳನ್ನು ಮೂರು ನಾಲ್ಕು ಲಕ್ಷ ಹಂಚಿದ್ದಾರೆ. ಕಂಠೀರವ ಸ್ಟೇಡಿಯಂನಲ್ಲಿ ನಾಲ್ಕು ಸಾವಿರ ಜನಗಳಿಗೆ ಹಂಚಿಕೆ ಚೀಟಿಯನ್ನು ಕೊಟ್ಟಿದ್ದು, ಫೋಜೋ ಕೂಡ ಪತ್ರಿಕೆಗಳಲ್ಲಿ ಬಂತು. ಬಡವರಿಗೆಲ್ಲ ಮನೆ ನಿವೇಶನಗಳನ್ನು ಕೊಡುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಅದೇ ಬಸವಲಿಂಗಪ್ಪನವರ ಮೇಲೆ ನಾನು ಒಂದು ಗುರುತರವಾದ ಆಪಾದನೆಯನ್ನು ಈ ಸಭೆಯಲ್ಲಿ ಮಾಡುತ್ತೇನೆ. ಮಾನ್ಯ ಮಂತ್ರಿಗಳ ಬಗ್ಗೆ ನನಗೆ ಗೌರವವಿದೆ. ಆದರೆ

(ಶ್ರೀ ವಾಟಾಳ್ ನಾಗರಾಜ್)

ಅವರು ಮಾಡುತ್ತಿರುವ ಇಂಥ ಕೆಲಸದಿಂದ ಅವರ ಗೌರವ ಉಳಿಯಬೇಕೇ ಬೇಡವೇ ಎನ್ನುವುದನ್ನು ಪ್ರಶ್ನೆ ಮಾಡಬೇಕಾಗಿದೆ. ಶ್ರೀ ಕೆ. ಕೆ. ಮೂರ್ತಿ ಅವರ ಹೆಸರಿನಲ್ಲಿ ರಾಜಮಹಲ್ ಬಡಾವಣೆಯಲ್ಲಿ 72½×80' ಇರುವ ದೊಡ್ಡ ಸೈಟು.....

Mr. DEPUTY SPEAKER.—Names of persons who are not here to defend should not be mentioned. I request the member to avoid mentioning the names.

ಶ್ರೀ ಎಚ್.ಡಿ. ದೇವೇ ಗೌಡ.—ಶ್ರೀ ಬಸವಲಿಂಗಪ್ಪನವರು ಅಧಿಕಾರ ದುರುಪಯೋಗ ಮಾಡಿ ಸೈಟು ಕೊಟ್ಟಿದ್ದಾರೆ ಎನ್ನುವಾಗ ಯಾರಿಗೆ ಕೊಟ್ಟಿದ್ದಾರೆ ಎಂದು ಅವರ ಹೆಸರು ಹೇಳದೆ ಇರುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? It is a very difficult to support facts and figures without mentioning the names concerned.

ಶ್ರೀ ವಾಟಾಳ್ ನಾಗರಾಜ್.—ಈಗ ಅವರಿಗೆ ಕೊಟ್ಟಿರತಕ್ಕದ್ದು ರಾಜಾಮಹಲ್ ಸೈಟಿನಲ್ಲಿ ಅಂದರೆ ದೊರೆಗಳು, ರಾಜರುಗಳು, ಮಂತ್ರಿಗಳು ಇರತಕ್ಕ ಮಹಲ್‌ನಲ್ಲಿ. ತಾವು ಬಡವರಿಗೆ ಕೊಟ್ಟಿರತಕ್ಕದ್ದು ತಿಪ್ಪಗೊಂಡನಹಳ್ಳಿಯಲ್ಲಿ!

ಶ್ರೀ ಬಿ. ಬಸವಲಿಂಗಪ್ಪ.—ಅದು ರೂರಲ್ ಏರಿಯಾ. ಇದು ಸಿಟಿ ಪ್ರದೇಶ.

ಶ್ರೀ ವಾಟಾಳ್ ನಾಗರಾಜ್.—ಒಬ್ಬರಿಗಾದರೂ ಸದಾಶಿವನಗರದಲ್ಲಿ ಸೈಟನ್ನು ಕೊಟ್ಟಿದ್ದಿರಾ? ಖಾಲಿ ಉಳಿದಿರತಕ್ಕ ಸೈಟನ್ನು ಸರಕಾರಿ ರೇಟ್ 36 ರೂಪಾಯಿನ ಪ್ರಕಾರ ಅವರಿಗೆ ಕೊಟ್ಟರೆ ಟೋಟಲ್ ರೇಟ್ 20 ಸಾವಿರ ರೂಪಾಯಿ ಆಗಬಹುದು. ಆಲ್ಲಿ ಹರಾಜು ಹಾಕಬೇಕಾದರೆ ಒಂದು ಸ್ಕ್ವೇಯರ್ ಯಾರ್ಡ್‌ಗೆ 196 ರೂಪಾಯಿ. ಹರಾಜು ಹಾಕಿರತಕ್ಕ ನೂರಾರು ಸೈಟುಗಳು ಇವೆ. ಸ್ಕ್ವೇಯರ್‌ಯಾರ್ಡಿಗೆ 196 ರೂಪಾಯಿನಂತೆ ಸೈಟುಗಳನ್ನು ಹರಾಜು ಮಾಡಿದ್ದಾರೆ ಎಂದು ನನಗೆ ಅನ್ನಿಸುತ್ತದೆ. ಅವರಿಗೆ ಕೊಟ್ಟಿರತಕ್ಕ ಸೈಟಿನ ಬೆಲೆ ಸುಮಾರು ಒಂದೂಮುಕ್ಕಾಲು ಲಕ್ಷ ರೂಪಾಯಿಗಳವರೆಗೆ ಆಗುತ್ತದೆ. ಒಂದೂಮುಕ್ಕಾಲು ಲಕ್ಷ ರೂಪಾಯಿನ ಬಿಲ್ಡೀ ಸೈಟನ್ನು ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಶ್ರೀಮಾನ್ ಕೆ. ಕೆ. ಮೂರ್ತಿಯವರಿಗೆ ಕೊಟ್ಟಿದ್ದಾರೆ. ಅವರಿಗೆ ಈ ರೀತಿ ಕೊಡದಿದ್ದರೆ ನನಗೆ ಬರುವ ಸಂಬಳದಲ್ಲಿ ಹೋಗಬಹುದು ನನಗೆ ಅಧಿಕಾರಹೋಗಬಹುದು. ಇನ್ನತಕ್ಕ ದೃಷ್ಟಿಯಿಂದ ಈ ಪಾಪದ ಕೆಲಸವನ್ನು ಅವರು ಮಾಡಿದ್ದಾರೆ ಎಂದು ನಾನು ತಮ್ಮ ಮೂಲಕ ಆರೋಪಣೆ ಮಾಡುತ್ತೇನೆ.

Sri K. PRABHAKAR.—Is it given by allotinement or public auction?

ಶ್ರೀ ವಾಟಾಳ್ ನಾಗರಾಜ್.—ಈಗ ಯಾರಿಗೆ ಕೊಟ್ಟಿದ್ದಾರೋ ಅದೆರ್ನಾ ಯಾರು ಯಾರೋ ಪ್ರಮುಖ ಮಂತ್ರಿಗಳಿಗೆ ಕೊಡುವ ಉದ್ದೇಶದಿಂದ ಕೊಟ್ಟಿರುವುದು. ಇವೊತ್ತು ಕೆ. ಕೆ. ಮೂರ್ತಿಯವರ ಮೇಲೆ ಎಷ್ಟು ಕೇಸುಗಳು ಇವೆ? ಈ ಸಭೆಯಲ್ಲಿ ಅವರ ಮೇಲೆ ಏನು ಗುರುತರವಾದ ಅಪಾದನೆ ಮಾಡಿದೆ?

Mr. DEPUTY SPEAKER.—Let their names not be mentioned repeatedly.

ಶ್ರೀ ವಾಟಾಳ್‌ನಾಗರಾಜ್.—ಸರಕಾರ ಉತ್ತರ ಕೊಡುವುದಕ್ಕೆ ಧೈರ್ಯ ಇದ್ದರೆ ಉತ್ತರವನ್ನು ಕೊಡಲಿ. ಫುಡ್ ಮಿನಿಸ್ಟರ್ ಇಲ್ಲಿ ಇದ್ದಾರೆ. ಇವರ ಮೇಲೆ ಹಾಕಿದ ಕೇಸುಗಳು ಏನಾದುವು? ಇವೊತ್ತು ನೀಮೆ ಎಣ್ಣೆಗೆ ಸ್ಕೇರ್‌ಸಿಟಿ ಬಂದಿದೆ. ಜನ ಬೀದಿಬೀದಿಯಲ್ಲಿ ಡಬ್ಬ ಹಿಡಿದುಕೊಂಡು ಅಲೆಯುವ ಹಾಗಾಗಿದೆ. ಹಿಂದೆ ನಡೆದ ಪ್ರಕರಣದ ಬಗ್ಗೆ ಏನು ತನಿಖೆ ನಡೆಸಿದ್ದೀರಾ? ನೀವು ಅವರ ಪ್ರಭಾವಕ್ಕೆ ಒಳಗಾಗಿದ್ದೀರಾ! ಅವರ ಮೇಲೆ ಎಷ್ಟೊಂದು ಚಾರ್ಜಸ್ ಬಂದುವು? ಮೈಸೂರಿನಲ್ಲಿ ಪೋಲೀಸ್ ಇಲಾಖೆಯನ್ನು ಉಪಯೋಗಿಸಿಕೊಂಡು ನಡೆಸಿದಂತ ದುರಂತವನ್ನು ಮಾನ್ಯ ಮುಖ್ಯ ಮಂತ್ರಿಗಳು ಅವರ ಬಗ್ಗೆ ತನಿಖೆ ನಡೆಸಿ ಈ ಸಭೆಗೆ ಉತ್ತರ ಕೊಡುತ್ತೇನೆ ಎಂದು ಹೇಳಿದರು. ಅದು ಎಲ್ಲಿ ಹೋಯಿತು? ಮುಖ್ಯ ಮಂತ್ರಿಗಳು ಮೊದಲುಗೊಂಡು ಕೆ. ಕೆ. ಮೂರ್ತಿಯವರನ್ನು ಹೊರಗೆ ಹಾಕಲು ಯಾರಿಗೆ ಗದನು ಇನೆ? ಕೆ. ಕೆ. ಮೂರ್ತಿಯವರ ಅಸ್ತಿ ಎಷ್ಟು ಇದೆ? ಅವರ ಮೇಲೆ ಸಿ. ಬಿ. ಐ. ಎನ್‌ಕ್ವೈರಿ ಆಗಿ ಆಗಲೇ ಆ ರಿಪೋರ್ಟ್ ದೆಹಲಿಯವರೆಗೂ ಹೋಗಿದೆ. ಸರಕಾರ

ದವರು ಕಣ್ಣು ಮುಚ್ಚಿಕೊಂಡು ಕುಳಿತಿದ್ದಾರೆ. ಅಂತಹ ಮೂರ್ತಿಯವರನ್ನು ಇವರು ಬೆಳೆಸುವುದಕ್ಕೆ ಹೋಗಿದ್ದಾರೆ! ಸರಕಾರ ನನ್ನ ಕೈಯಲ್ಲಿ ಇದೆ, ಪಕ್ಷ ನನ್ನ ಕೈಯಲ್ಲಿ ಇದೆ, ಶಾನಕರು ನನ್ನ ಕೈಯಲ್ಲಿ ಇದ್ದಾರೆ, ಯಾರನ್ನು ಏನು ಬೇಕಾದರೂ ಮಾಡುತ್ತೇನೆ ಎಂಬ ಅಹಂಭಾವ ಕ.ಕೆ. ಮೂರ್ತಿಯವರಿಗೆ ಇದೆ. ಇಡೀ ಪೋಲೀಸ್ ಇಲಾಖೆ ಮತ್ತು ಮಿಕ್ಕ ಉನ್ನತ ಅಧಿಕಾರಿಗಳ ಬದಲಾವಣೆಗಳು ಮತ್ತು ಅಪಾಯಿಂಟ್‌ಮೆಂಟ್ಸ್ ಕೆ. ಕೆ. ಮೂರ್ತಿಯವರ ಮೂಲಕವೇ ಆಗಿವೆ. ಐ. ಜಿ. ಪಿ. ಅಪಾಯಿಂಟ್‌ಮೆಂಟ್, ಪೋಲೀಸ್ ಕಮಿಷನರ ಅಪಾಯಿಂಟ್‌ಮೆಂಟ್, ಫುಡ್ ಸೆರ್ ಅಫೀನರು ಶ್ರೀ ಬಾಗಲ್ವಾಯ ಅವರ ನೇಮಕಾತಿಯೂ ಸಹ ಕೆ. ಕೆ. ಮೂರ್ತಿಯವರ ಮೂಲಕವೇ ಆಗಿದೆ ಎಂದು ಹೇಳುತ್ತೇನೆ.

Mr. DEPUTY SPEAKER:—Once in a way if Mr. Nagaraj, mentions if is alright. If a person is not here to defend himself, he should not repeatedly mention his name.

ಶ್ರೀ ಹೆಚ್. ಎನ್. ನಂಜೇಗೌಡ.—ನನ್ನ ಪ್ರಾರ್ಥನೆ ಇಷ್ಟೇ. ಒಂದೇ ರೀತಿಯಲ್ಲಿ ಅವರ ಪ್ರಭಾವ ಹಾಗಿದೆ, ಹೀಗಿದೆ ಎಂದು ಹೇಳಿದರೆ, ರುಜುವಾತು ಕೊಡದೇ ಹೋದರೆ ಸರಕಾರದವರು ಅದನ್ನು ಗಣನೆಗೆ ತೆಗೆದುಕೊಂಡು ಉತ್ತರ ಕೊಡಬೇಕಾದ ಅವಶ್ಯಕತೆ ಇಲ್ಲ ಎಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

Mr. DEPUTY SPEAKER.—The Hon. Minister will please note. I would have precluded him and not allowed to mention his name repeatedly. Unfortunately, his name was introduced by Mr. Gundu Rao himself.

ಶ್ರೀ ವಾಟಾಳ್ ನಾಗರಾಜ್.—ಸರಕಾರ ಉತ್ತರ ಕೊಡುವುದು ಬಿಡುವುದು ಅವರಿಗೆ ಸೇರಿದ್ದು.

Mr. DEPUTY SPEAKER.—Sri Vatal Nagaraj, when a person is not present, to defend himself his name need not be mentioned again and again.

ಶ್ರೀ ಕೆ. ಎಂ. ನಾಗಣ್ಣ.—ಶ್ರೀ ವಾಟಾಳ್ ನಾಗರಾಜ್‌ರವರು ಭಾಷಣ ಮಾಡುವಾಗ ಕೆ. ಕೆ. ಮೂರ್ತಿಯವರಿಗೆ 1 ಲಕ್ಷ 90 ಸಾವಿರ ರೂಪಾಯಿಗಳ ಬೆಲೆಬಾಳುವ ಸೈಟನ್ನು ಬಸವಗಲಂಪ್ಪನವರು 20 ಸಾವಿರಕ್ಕೆ ಕೊಟ್ಟಿದ್ದಾರೆ ಎಂದು ಹೇಳಿದರು. ಇದಕ್ಕೆ ಬಸವಲಿಂಗಪ್ಪನವರು ಜವಾಬು ಕೊಡಲೇಬೇಕು ಎಂದು ಹೇಳುತ್ತೇನೆ.

ಉಪಾಧ್ಯಕ್ಷರು.—ಅದರ ಬಗ್ಗೆ ನಾವಾಗಿ ಜವಾಬು ಕೊಡಿ ಎಂದು ಹೇಳಿದೆ. ಈಗ ಬೇರೆ ವಿಷಯದ ಕಡೆಗೆ ಹೋಗೋಣ.

Sri B. B. SAYANAK.—Hundreds and thousands of sites are disposed of and that man is one of them.

Mr. DEPUTY SPEAKER.—Hon. Sri. Vatal Nagaraj, yielded? If he does so, he will be doing it at his risk.

ಶ್ರೀ ಕೆ. ಪ್ರಭಾಕರ್.—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಸಭೆಯಲ್ಲಿ ಚರ್ಚೆ ಆಗ ವಿಷಯಗಳೆಲ್ಲಾ ಬಹಳ ಗಹನವಾದ ವಿಚಾರಗಳು. ರಾಜ್ಯಪಾಲರ ಭಾಷಣದಲ್ಲಿ ಈ ವಿಚಾರಗಳನ್ನು ಎತ್ತಿಲ್ಲ, ಮಂತ್ರಿಗಳ ಅಡಳಿತ ದುರುಪಯೋಗದ ವಿಷಯದಲ್ಲಿ ಏನನ್ನೂ ಹೇಳಿಲ್ಲ ಎನ್ನತಕ್ಕದ್ದು ಮೊದಲನೆ ವಾಖ್ಯದಲ್ಲಿ ಹೇಳಿದರು. ಒಂದು ರೀತಿಯಲ್ಲಿ ಇದು ಛೇಷ್ ಎನ್ನುವ ಮಾತೇ ಎಂದು ತಮ್ಮನ್ನು ಕೇಳುತ್ತೇನೆ.

Mr. DEPUTY SPEAKER.—Is it a Point of Order? Why is he asking him to sit down? I would have directed him to resume his seat. I have followed that Point. The Rule is that the speech of the Governor can be discussed and criticised. It also follows that if something is not narrated by the Governor that can also be pin pointed. That hon. Members are perfectly within their right to point

(MR. DEPUTY SPEAKER)

out that such and such an omission exists and it ought to have been pointed out by the Governor. There is no Rule or any precedent to point out that because some things have not been mentioned, there cannot be a speech on these omissions in the Address of the Governor. Therefore, I hold that there is no Point of Order in that which has been made out.

Sri K. PRABHAKAR.—They are personal matters of Mr. K. K. Murthy and his personal matters cannot be discussed.

MR. DEPUTY SPEAKER.—I would have precluded him at the outset, had not Mr. Gundu Rao mentioned his name.

4-00 P. M.

ಶ್ರೀ ವಾಟಾಳ್ ನಾಗರಾಜ್.—ಇಲ್ಲಿ ಅನೇಕ ಸಾರಿ ಇವರ ಬಗ್ಗೆ ಹೇಳಿದ್ದೇನೆ. ಈ ಮನುಷ್ಯರು ಪ್ರಭಾವವನ್ನು ಬೆಳೆಸಿಕೊಂಡು ಸರಕಾರದ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಇದಕ್ಕಾಗಿ ನಾನು ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ದೇವರಾಜ ಅರಸ್‌ರವರ ಮೇಲೆ ಗುರುತರವಾದ ಆಪಾದನೆಗಳನ್ನು ಮಾಡುತ್ತಿದ್ದೇನೆ ಮತ್ತು ಶ್ರೀ ದೇವರಾಜ ಅರಸ್‌ರವರ ಹೆಸರಿನಲ್ಲಿ ರಾಜ್ಯದ ಒಟ್ಟು ಶಾಸಕರ ಕೈಯ್ಯಲ್ಲಿ ಆಗದೇ ಇರುವಂತಹ ಅಧಿಕಾರವನ್ನು ಈ ಮನುಷ್ಯರು ಚರಾಯಿಸಿ ಎಲ್ಲರಿಗಿಂತ ಮಿತಿ ಮೀರಿ ಹೋಗುತ್ತಿದ್ದಾರೆ. ಇದಕ್ಕಾಗಿ ಮುಖ್ಯ ಮಂತ್ರಿಗಳನ್ನು ನಾನು ಕೇಳುವುದು ಮಾನ್ಯ ಕೆ. ಕೆ. ಮೂರ್ತಿಯವರು ಸರಕಾರದೊಂದಿಗೆ ಶಾಮೀಲಾಗಿದ್ದಾರೆಯೇ? ಇಂತಹ ಮನುಷ್ಯರನ್ನು ಬೆಳಸಲು ಅವಕಾಶ ಕೊಡುವುದು ಸರಿಯಲ್ಲ ಮತ್ತು ಇದರ ಬಗ್ಗೆ ಕಳಕಳಿಯಿಂದ ಮನವಿ ಮಾಡುತ್ತೇನೆ ಇಂತಹವರ ಬಗ್ಗೆ ಎಚ್ಚರಿಕೆಯಿಂದಿರಬೇಕು ಎಂದು ನಾನು ಮುಖ್ಯ ಮಂತ್ರಿಗಳ ಗಮನಕ್ಕೆ ಇದನ್ನು ಇಲ್ಲಿ ತರುತ್ತಿದ್ದೇನೆ.

ಇನ್ನೊಂದು ದೊಡ್ಡ ಹೆಸರು ಇಲ್ಲಿ ಕೇಳಿಬರುತ್ತಿದೆ. ಅದು ಡಾಕ್ಟರ್ ನಟರಾಜ್ ಎನ್ನುವವರದು. ರಾಜ್ಯದ ಸ್ಕೇರ್ಸಿಟಿ ಕೌನ್ಸಿಲ್‌ನಲ್ಲಿ ಹಾಗೂ ಇನ್ನೂ ಕೆಲವು ಸಮಿತಿಗಳಲ್ಲಿ ಇವರು ಸದಸ್ಯರಾಗಿದ್ದಾರೆ. ಇವರು ಮುಖ್ಯ ಮಂತ್ರಿಗಳ ಅಳಿಯ ಎಂದು ಎಲ್ಲ ಕಡೆಯಲ್ಲೂ ಹೇಳುತ್ತಿದ್ದಾರೆ. ಮತ್ತು ಮುಖ್ಯ ಮಂತ್ರಿಗಳ ಹೆಸರಿನಲ್ಲಿ ಅಧಿಕಾರವನ್ನು ದುರುಪಯೋಗ ಮಾಡುತ್ತಿದ್ದಾರೆಂದು ಕೇಳುತ್ತೇವೆ. ಇವರು ಮಾನ್ಯ ಮುಖ್ಯಮಂತ್ರಿಗಳ ಅಳಿಯಂದಿರೇ ಅಲ್ಲವೇ ಎನ್ನುವುದನ್ನು ಅವರೇ ಇಲ್ಲಿ ರುಜುವಾತು ಮಾಡಿ ತಿಳಿಸಬೇಕು ಎಂದು ಕೇಳುತ್ತೇನೆ. ಈ ಸರಕಾರ ಬಂದಮೇಲೆ ಈಚೆಗೆ ಇವರ ಹೆಸರು ಕೇಳಿ ಬರುತ್ತಿದೆ. ಇದುವರೆಗೂ ನಮಗೆ ಇವರ ಹೆಸರು ಕೇಳುತ್ತಲೇ ಇರಲಿಲ್ಲ. ನಾವು ಕೂಡ ಅನೇಕ ತ್ಯಾಗ ಮಾಡಿದಂತಹ ಹಾಗೂ ದೊಡ್ಡ ದೊಡ್ಡ ಮಹಾನ್ ವ್ಯಕ್ತಿಗಳ ಹೆಸರುಗಳನ್ನು ಕೇಳಿದ್ದೇವೆ. ಡಾಕ್ಟರ್ ನಟರಾಜ್ ಎನ್ನುವವರ ಹೆಸರನ್ನೂ ನಾವು ಯಾರೂ ಇದುವರೆಗೆ ಕೇಳಿರಲಿಲ್ಲ. ಇವರು ಮಾನ್ಯ ಮಂತ್ರಿಗಳಾದ ಶ್ರೀಮಾನ್ ವಿಶ್ವೇಶ್ವರಯ್ಯನವರು ಹಾಗೂ ವೀರೇಂದ್ರ ಪಾಟೀಲರವರಿಗಿಂತ ಬಹಳ ಮುಂದೆ ಹೋಗಿದ್ದಾರೆ.

ಶ್ರೀ ಎ. ಎ. ದೇಸಾಯಿ.—ಅಳಿಯರೆಂದಾದರೆ ಅದು ಡಿಸ್‌ಕ್ವಾಲಿಫಿಕೇಷನ್ ಆಗುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್.—ಅಳಿಯ ಎನ್ನುವುದು ಕ್ವಾಲಿಫಿಕೇಷನ್. ಇದರಲ್ಲೇನೂ ಅಗೌರವವಾಗುವುದಿಲ್ಲ. ಆದರೆ ಇಂದು ಡಾಕ್ಟರ್ ನಟರಾಜ್ ಎನ್ನುವವರ ಹೆಸರಿನಿಂದ ಯಾರೂ ಉಳಿಯುವುದಿಲ್ಲ.

ಶ್ರೀ ಹೆಚ್. ಎನ್. ನಂಜೇಗೌಡ.—ಇಲ್ಲಿ ಹೆಸರುಗಳನ್ನು ಹೇಳುವುದು ಸರಿಯೇ?

Sri H. N. NANJE GOWDA.—If somebody is related to some Minister, what is to be done? Is it a disqualification?

Sri VATAL NAGARAJ.—It is a qualification. Not disqualification.

Sri H. N. NANJE GOWDA.—If there are any mistakes committed by such persons, let him tell us directly. Why should he attribute so many things ?

Mr. DEPUTY SPEAKER.—In a democracy, if one wants to hit, he must be prepared to take it also.

ಶ್ರೀ ವಾಟಾಳ್ ನಾಗರಾಜ್.—ಈಗ ಇಲ್ಲಿ ದೇವರಾಜ ಅರಸ್‌ರವರ ಮಂತ್ರಿಮಂಡಲದ ಹಾಗೆ ಇನ್ನೊಂದು ಪಾಡೋ ಕ್ಯಾಬಿನೆಟ್ ಇದೆ. ಇದರಲ್ಲಿ ಶ್ರೀ ಕೆ. ಕೆ. ಮೂರ್ತಿಗಳು ಮುಖ್ಯ ಮಂತ್ರಿಗಳು, ಡಾಕ್ಟರ್ ನಟರಾಜ್‌ರವರು, ಶ್ರೀ ಹೆಚ್. ಟಿ. ರೆಡ್ಡಿಯವರು ಹಾಗೂ ಶ್ರೀ ಗುಂಡೂ ರಾಯರು ಮಂತ್ರಿಗಳು ಮತ್ತು ಶ್ರೀಮಾನ್ ಮಾಗದಂರವರು ಚೀಫ್ ಸೆಕ್ರೆಟರಿಗಳು. .....

Mr. DEPUTY SPEAKER.—The hon. Member is mentioning names which under the rules he cannot. If he persists I will have to see that the names are expunged.

ಶ್ರೀ ವಾಟಾಳ್ ನಾಗರಾಜ್.—ಇವರ ಮೇಲೆ ಆರೋಪಣೆ ಮಾಡುತ್ತಿದ್ದಾಪುದು ತಗ ಇರುವ ಕ್ಯಾಬಿನೆಟ್‌ಗೆ ಪ್ರತಿಯಾಗಿ ಇವರನ್ನೇ ಒಂದು ಮಂತ್ರಿಮಂಡಲವಾಗಿ ಈಗಿನ ಮಂತ್ರಿಮಂಡಲಕ್ಕಿಂತ ಹೆಚ್ಚು ಕೆಲಸಗಳನ್ನು ಮಾಡುತ್ತಿದ್ದಾರೆಂದು ತಮ್ಮ ಗಮನಕ್ಕೆ ಇಲ್ಲಿ ತರಬೇಕಾಗಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ಇಲ್ಲಿ ಕೆಲವು ಹೆಸರುಗಳನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಹೀಗೆ ಹೆಸರುಗಳನ್ನು ಹೇಳಲು ತಪ್ಪು ಅಪ್ಪಣೆ ಕೊಟ್ಟಿದ್ದೀರಾ ಹೇಗೆ ?

Mr. DEPUTY SPEAKER.—I shall take serious notice if it is not a point of order and if he merely utilises this opportunity as an excuse for merely intervining in the debate.

ಶ್ರೀ ಎಸ್. ಎಮ್. ಶೀರನಾಳಿ ಚಂದ್ರಶೇಖರ್.—ಇದರಲ್ಲಿ ಇವರು ಹೇಳುವುದನ್ನು ನೋಡಿದರೆ ಅಲ್ಲಿ ಕಪ್ಪೊಡನೆ ಸರಿಮಾಡಿಕೊಂಡು ಬಂದು ಇಲ್ಲಿ ಹೇಳುತ್ತಿದ್ದಾರೆಯೇ ಹೇಗೆ ?

Sri. H. D. DEVE GOWDA.—You must withdraw this.

Sri S. M. SEERANALY CHANDRASEKAR.—I will not withdraw.

Mr. DEPUTY SPEAKER.—I have already told the hon. Member as to know him very well, because our association is very deep. I could see that he wanted an occasion to interrupt. As he could not avail of the occasion or chance to interrupt, you twisted it into a point of order. Obviously, it is not a point of order. He cannot be jumping in his seat. Further he is not the person to decide whether it is a point of order. He cannot be the judge. The Chair has to judge. I say it is not a point of order. Further he is not to make any imputation which is totally unjustified, Let him do not do it again. Let us not go on dragging things too long.

Now I will not give Mr. Vatal Nagaraj more than one minute to conclude.

ಶ್ರೀ ವಾಟಾಳ್ ನಾಗರಾಜ್.—ಬರಗಾಲದ ಬಗ್ಗೆ ಪ್ರಸ್ತಾಪ ಮಾಡಿ ಅಲ್ಲಿ ಎಲ್ಲ ಜನರಿಗೆ ಅನುಕೂಲ ಮಾಡಿದ್ದೇವೆಂದು, ಈಗಿನ ಕಂಟ್ರಾಕ್ಟ್ ಸಿಸ್ಟಮ್‌ಚೆನ್ನಾಗಿದೆ ಎಂದು ಹೇಳಿದ್ದಾರೆ. ಇದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ಪಾಣಿಕ್ಕಪ್ಪ ಪರಣಪ್ಪ ಎಂಬಾತ ತನ್ನ 70 ವರ್ಷದ ತಂದೆ ಮತ್ತು ತನ್ನ ಹೆಂಡತಿಯೊಡನೆ ಕಾರಂಜಿ ಪ್ರಾಜೆಕ್ಟ್‌ನಲ್ಲಿ 70 ಪೈಸೆ ದಿನಕೂಲಿಯ ಮೇಲೆ ಕೆಲಸ ಮಾಡುವುದಕ್ಕೆ ಹೋದರು. ಆತನ ಹೆಂಡತಿ ನಾಲ್ಕು ದಿನದ ಬಾಣಂತಿ. ಬೇರೆ, ನಾಲ್ಕು ದಿನದ ಮಗುವನ್ನು ಬೇಲಿ ಪಕ್ಕದಲ್ಲಿ ಮಲಗಿಸಿ ಹತ್ತು ದಿನಗಳವರೆಗೂ ಕೆಲಸ ಮಾಡಿದರೂ ಸಹ ದಿನಕೂಲಿ ಕೊಟ್ಟಿಲ್ಲ. ಈ ರೈತನಿಗೆ 36 ಎಕರೆ ಜಮೀನು ಇದ್ದರೂ ಸಹ ಮಳೆಬೆಳೆ ಇಲ್ಲದೆ

(ಶ್ರೀ ವಾಟಾಳ್ ನಾಗರಾಜ್)

ಮಾಡಲು ಕೆಲಸ ಇಲ್ಲವೆ, ಕಾರಂಜ ಪ್ರಾಜೆಕ್ಟ್‌ಗೆ ಹೋದರೆ ಅಲ್ಲಿಯೂ ಸಹ ಸರಿಯಾದ ಕೆಲಸ ಸಿಕ್ಕಿಲ್ಲ. ಕೆಲಸ ಸಿಕ್ಕಿದರೆ ಸರಿಯಾದ ಕೂಲಿ ಸಿಗುತ್ತಿಲ್ಲ. ಆದರೆ ಸರ್ಕಾರದವರು ಎಲ್ಲರಿಗೂ ಕೆಲಸ ಒದಗಿಸಿದ್ದೇವೆಂದು, ಜೆನ್ನಾಗಿ ಕೆಲಸ ಮಾಡುತ್ತಿದ್ದೇವೆಂದು ದೇಶಕ್ಕೆಲ್ಲಾ ಹೇಳುತ್ತಿದ್ದಾರೆ.

ಇನ್ನು ಬೆಳಗಾಂ ಬಗ್ಗೆ ಒಂದು ವಿಚಾರ ಹೇಳಬೇಕಾಗಿದೆ. ನಾನು ಅಲ್ಲಿ ಹೋಗಿದ್ದಾಗ ನಾನು ಮಾತನಾಡಿದಂತಹ ಸಭೆಯಲ್ಲಿ ಕೇವಲ 200 ಜನರು ಇದ್ದರು ಎಂದು ಶ್ರೀಮಾನ್ ಸೈನಿಕ್ ಅವರು ಹೇಳಿದ್ದಾರೆ. ಅವರು ಸತ್ಯಕ್ಕೆ ದೂರವಾದ ಮಾತನ್ನು ಹೇಳಿದ್ದಾರೆ. ಇವರ ಪ್ರಭಾವ ಬೆಳಗಾಂನಲ್ಲಿ ಸಂಪೂರ್ಣವಾಗಿ ಕಡಿಮೆಯಾಗಿದೆ. ನಾನು ಮಾತನಾಡಿದಂತಹ ಸಭೆಯಲ್ಲಿ ಅಂದರೆ ಲಿಂಗರಾಜ ಕಾಲೇಜ್ ಮೈದಾನದಲ್ಲಿ 15 ಸಾವಿರ ಜನರು ಸೇರಿದ್ದರು. ಅಂದು ಇದೇ ನಮಸ್ಯರು ಬೆಳಗಾಂ ಬಂದ್ ಮಾಡಬೇಕೆಂದು ತಿಳಿಸಿದ್ದರು. ಆದರೆ ಬಂದ್ ಆಗಲಿಲ್ಲ ಬಂದ್ ಮಾಡಿಸಲು 150 ಜನ ಹುಡುಗರು ಓಡಾಡುತ್ತಿದ್ದರು. ಆದರೆ ಆಗಲಿಲ್ಲ. ಆದ್ದರಿಂದ ಅವರು ಸತ್ಯಕ್ಕೆ ದೂರವಾದ ಮಾತನ್ನು ಹೇಳಿದ್ದಾರೆಂದು ಹೇಳುತ್ತೇನೆ.

ಈ ಸರ್ಕಾರಕ್ಕೆ ಒಂದು ಸವಾಲು ಹಾಕುತ್ತೇನೆ. ಏನೆಂದರೆ ಕೇಂದ್ರಸರ್ಕಾರದಲ್ಲಿ ಈ ಸರ್ಕಾರಕ್ಕೆ ನ್ಯಾಲ್ಪವೂ ಬೆಲೆ ಇಲ್ಲ. ತಮ್ಮ ಬೆರಿಯನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದೀರಿ. ಇದಕ್ಕೆ ಒಂದು ನಿದರ್ಶನ ಕೊಡುತ್ತೇವೆ ಏನೆಂದರೆ ಪ್ರಧಾನ ಮಂತ್ರಿಗಳು ನಮ್ಮ ರಾಜ್ಯಕ್ಕೆ ಬಂದಾಗ ಅವರನ್ನು ಬರಗಾಲ ಪೀಡಿತ ಪ್ರದೇಶಗಳಿಗೆ ಕರೆದುಕೊಂಡು ಹೋಗುವುದರಲ್ಲಿ ವಿಫಲರಾಗಿದ್ದು ಒಂದೇ ಒಂದು ಸಾಕ್ಷಿ. ನಿಮಗೆ ಆ ಒಂದು ಶಕ್ತಿ ಇಲ್ಲವಾಯಿತು. ನಾನು ನಿಮ್ಮ ಸರ್ಕಾರವನ್ನು ರಬ್ಬರ್‌ಸ್ಟಾಂಪ್ ಸರ್ಕಾರವೆಂದು ಕರೆಯುತ್ತೇನೆ. ಇಂದಿರಾಗಾಂಧಿಯವರು ಹೇಳಿದಂತೆ ರಬ್ಬರ್‌ಸ್ಟಾಂಪ್ ಒತ್ತುತ್ತಿರುವುದರಿಂದ ತಮ್ಮ ಸರ್ಕಾರವನ್ನು ಇಂದಿರಾಗಾಂಧಿ ರಬ್ಬರ್ ಸ್ಟಾಂಪ್ ಸರ್ಕಾರವೆಂದು ಕರೆಯುತ್ತೇನೆ. ಉಡುಪಿಗೆ ಬಂದಂತಹ ಪ್ರಧಾನಮಂತ್ರಿಗಳು ಬರಗಾಲ ಪೀಡಿತ ಪ್ರದೇಶಗಳಿಗೆ ಹೋಗಿ ಅಲ್ಲಿರುವ ಜನರನ್ನು ನೋಡುವುದಕ್ಕೆ ಸಾಧ್ಯವಾಗಲಿಲ್ಲ ಎಂದರೆ, ಅವರು ಕರ್ನಾಟಕ ರಾಜ್ಯವನ್ನು ಕಡೆಗಣಿಸಿದ್ದಾರೆಂದು ಅರ್ಥವಾಗುತ್ತದೆ.

ಇನ್ನು ಶ್ರೀಮಾನ್ ಬಸವಲಿಂಗಪ್ಪನವರ ಬಗ್ಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ಶ್ರೀಮಾನ್ ರಾಮಕೃಷ್ಣಹೆಗಡೆಯವರು ಅವರನ್ನು ಮಹಾತ್ಮಾ ಎಂದು ಕರೆದರು. ಆದರೆ ನಾನು ತಿಳಿದುಕೊಂಡಂತೆ ಅವರು ಮಹಾತ್ಮರಲ್ಲ, ಅವರು ಬುಚ್ಚೋ ಆಗಿದ್ದಾರೆ. ಜೊತೆಗೆ ಅವರು ಅಯೂಬ್‌ಖಾನ್, ಯಯ್ಯಾಖಾನ್ ಎಂದೂ ಕೂಡ ಅನ್ನಿಸಿಕೊಳ್ಳಬಹುದು, ಏಕೆಂದರೆ ಇವರುಗಳಲ್ಲಿರುವ ಒಂದು ಶಕ್ತಿ ಅವರಲ್ಲಿ ಇದೆ. ಕಾರಣ ಅವರು ಎಲ್ಲ ಸ್ಥಳೀಯ ಸಂಸ್ಥೆಗಳನ್ನು ರದ್ದು ಮಾಡಿದರು. ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರು ತಮ್ಮ ಮಾತನ್ನು ಕೇಳುತ್ತಿರಲಿಲ್ಲ ಎಂದುಕೊಂಡು ಅವುಗಳನ್ನೆಲ್ಲಾ ರದ್ದು ಮಾಡಿ ತಮ್ಮ ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳುತ್ತಿದ್ದಾರೆ, ಮತ್ತು ಈ ವಿಷಯದಲ್ಲಿ ಅವರು ಬುಚ್ಚೋ ದಾರಿಯಲ್ಲಿ ಹೋಗುತ್ತಿದ್ದಾರೆ. ಇದೇ ರೀತಿ ಅವರು ಮುಂದುವರೆದರೆ ಅವರು ಅಧಿಕಾರದಲ್ಲಿ ಹೆಚ್ಚು ಕಾಲ ಉಳಿಯುವುದಿಲ್ಲ. ಅವರು ಹೇಳಿಕೆಗಳನ್ನು ಕೊಡುವಾಗ ತಮ್ಮ ಮಾನಸ್ಸನ್ನು ಸ್ಥಿಮಿತದಲ್ಲಿಟ್ಟುಕೊಳ್ಳಬೇಕೆಂದು ನಾನು ಅವರ ಆತ್ಮೀಯನಾಗಿ ಹೇಳುತ್ತಿದ್ದೇನೆ. ಅವರ ಪಕ್ಕದಲ್ಲಿರುವ ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರನ್ನು ಯಾರೂ ಆರೋಪ ಮಾಡದೆ ಇವರನ್ನು ಮಾತ್ರ ಆರೋಪ ಮಾಡುವುದಕ್ಕೆ ಕಾರಣವೇನು ಎಂಬುದನ್ನು ಅವರು ತಿಳಿದುಕೊಳ್ಳಬೇಕೆಂದು ಅವರಿಗೆ ಒಂದು ಕಿವಿಮಾತನ್ನು ಹೇಳುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್,—ತಮ್ಮ ವಿಶ್ವಾಸವನ್ನು ಅವರು ಪಡೆದಿದ್ದರಿಂದ ಅವರಿಗೆ ಕಷ್ಟ ಬಂದಿರುವುದು.

ಶ್ರೀ ವಾಟಾಳ್ ನಾಗರಾಜ್.—ಇನ್ನು ಶ್ರೀ ಮುಗ್ದಂ ಅವರು ಬರಗಾಲ ಪೀಡಿತ ಪ್ರದೇಶದ ಅಧಿಕಾರಿಗಳನ್ನಾಗಿ ಮಾಡಿ ಅವರಿಗೆ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರದವರು ಕೊಟ್ಟ ಮೇಲೆ, ರವಿನ್ಯೂ ಇಲಾಖೆಯ ಐ. ಎ. ಎಸ್. ದರ್ಜೆಯ ಅಧಿಕಾರಿಗಳೆಲ್ಲಾ ಸೇರಿಕೊಂಡು ರಾಜೀನಾಮೆ ಕೊಡುತ್ತೇವೆಂದು ಹೇಳಿದಾಗ, ಮುಖ್ಯಮಂತ್ರಿಗಳು ಶ್ರೀ ಮುಗ್ದಂ ಅವರ ಅಧಿಕಾರದಲ್ಲಿ ಕೆಲವು ಬದಲಾವಣೆ ಮಾಡಿದರು. ಇಷ್ಟೊಂದು ದೊಡ್ಡ ಜವಾಬ್ದಾರಿಯನ್ನು ಶ್ರೀ ಮುಗ್ದಂ ಅವರಿಗೆ ವಹಿಸಲು ಅವರಿಗಿರತಕ್ಕಂಥ ಕ್ವಾಲಿಫಿಕೇಷನ್ ಏದರೂ ಏನು? ಮತ್ತು ಅವರಲ್ಲಿರ ತಕ್ಕಂಥ ಆಕರ್ಷಣೆಯಾದರೂ ಏನಿದೆಯೆಂದು ಕೇಳುತ್ತೇನೆ. ಇಂದು ರಾಜ್ಯವೇ ಅವರ ಮಯವಾಗಿ

ಬಿಟ್ಟಿದೆ. ಸೂಪರ್ ಇಂಜಿನಿಯರ್ ಪೋಸ್ಟ್ ಅವರಿಗೆ, ಬರಗಾಲ ಪ್ರದೇಶವನ್ನು ನೋಡಿ ಕೊಳ್ಳುವ ಅಧಿಕಾರವೂ ಸಹ ಅವರಿಗೆ, ಎಲ್ಲ ಅಧಿಕಾರವನ್ನು ಅವರಿಗೇ ಕೊಟ್ಟಿರುವುದರ ಅರ್ಥ ವಾದರೂ ಏನು ಎಂಬುದು ನನಗರ್ಥವಾಗುತ್ತಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಅದು ನಿಮಗೆ ಅರ್ಥವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನೀವು ಅಧಿಕಾರದಲ್ಲಿರುವವರೆಗೆ ನನಗೆ ಅರ್ಥವಾಗುವು ದಿಲ್ಲ. ರಾಜ್ಯಕ್ಕೆ ಕರ್ನಾಟಕ ಎಂದು ಹೆಸರು ಇಟ್ಟರು. ಮುಂದೆ ಇನ್ನೂ ಏನೇನೋ ಮಾಡುತ್ತಾರೆಂಬ ಆಶೆಯನ್ನು ಇಟ್ಟುಕೊಂಡಿದ್ದೆ. ಆದರೆ ತಾವು ಅಧಿಕಾರಕ್ಕೆ ಬರುವ ಮೊದಲು ಏನೇನು ಜನರ ಹತ್ತಿರ ಹೇಳಿದ್ದೀರಿ. ಅವೆಲ್ಲಾ ಹೇಳಿಕೆಗಳಾಗಿಯೇ ಉಳಿದಿವೆ. ತಾವು ಮಾಡುತ್ತಿರುವುದೇ ಬೇರೆಯಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಅವರಿಗೆ ಆ ಅಧಿಕಾರ ಕೊಟ್ಟಿರುವುದರಿಂದ ತಮಗೇನು ಕಷ್ಟವಾಗಿದೆ ?

ಶ್ರೀ ವಾಟಾಳ್ ನಾಗರಾಜ್.—ಆ ಕೆಲಸ ನೋಡಿಕೊಳ್ಳಲು ಬೇರೆ ಯಾರೂ ಇರಲಿಲ್ಲವೆ ? ಅವರ ಮೇರೆ ಆರೋಪಣೆಗಳು ಇದ್ದರೂ ಸಹ ಆ ಅಧಿಕಾರ ಕೊಡಲು. ಕಾರಣವೇನು ? ಶ್ರೀಮಾನ್ ಚೆನ್ನಬಸಪ್ಪನವರು ಅವರನ್ನು ಚೀಫ್—ಇಂಜಿನಿಯರ್ ಆಗಿ ಮಾಡಬಾರದು ಎಂದು ಫೈಲ್‌ನಲ್ಲಿ ಹಿಂದೆ ಬರೆದಿದ್ದರೂ ಸಹ ತಾವು ಅವರನ್ನು ಸೂಪರ್—ಚೀಫ್—ಇಂಜಿನಿಯರ್ ಆಗಿ ಮಾಡಿದ್ದೀರಿ.

ಇಂದು ಮುಂತ್ರಿಮಂಡಲದಲ್ಲಿಯೇ ಜಗಳ ಬಂದಿವೆ. ಶ್ರೀಮಾನ್ ಚೆನ್ನಬಸಪ್ಪನವರನ್ನು ಮಂತ್ರಿಮಂಡಲದಿಂದ ತೆಗೆಯುವ ಸನ್ನಾಹ ನಡೆದಿದೆ ಎಂದು ಕೇಳಿದ್ದೇನೆ. ಆ ಬಗ್ಗೆ ನಾನೇನು ಹೇಳುವುದಕ್ಕೆ ಹೋಗುವುದಿಲ್ಲ. ಆಡಳಿತ ಕಾಂಗ್ರೆಸ್ಸಿನ ಶ್ರೀರಾಮುಲು ಅವರು ತಮ್ಮ ಮನೆ ಮದುವೆ ಬಗ್ಗೆ ಇನ್‌ವಿಟೇಷನ್ ಪ್ರಿಂಟ್ ಮಾಡಿಸಿದ್ದಾರೆ. ಅದನ್ನು ತಮಗೆ ತೋರಿಸುತ್ತೇನೆ ; ಅದರ ಬೆಲೆ ಒಂದಕ್ಕೆ ಎರಡು ಆಥವಾ ಎರಡೂವರೆ ರೂಪಾಯಿಗಳಾಗಬಹುದು. ಶ್ರೀಮಾನ್ ಚೆನ್ನಬಸಪ್ಪನವರ ಮನೆ ಮದುವೆಯ ನಂದರ್ಭದಲ್ಲಿ ಚಳುವಳಿ ನಡೆಸಿದ ಶ್ರೀ ಗುಂಡೂರಾಯರ ಸೇನೆ ಈಗ ಎಲ್ಲಿ ಹೋಗಿದೆ ? ಒಟ್ಟಿನಲ್ಲಿ ಹೇಳುವುದಾದರೆ, ಈಗಿನ ಮಂತ್ರಿಮಂಡಲ ಸರಿಯಾಗಿ ಕೆಲಸ ಮಾಡದೆ ರಾಜ್ಯದ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಒಬ್ಬೊಬ್ಬರು ಒಂದೊಂದು ರೀತಿಯ ಹೇಳಿಕೆ ಕೊಡುತ್ತಿದ್ದಾರೆ. ಮತ್ತು ಶ್ರೀಮಾನ್ ಚೆನ್ನಬಸಪ್ಪನವರನ್ನು ಮಂತ್ರಿಮಂಡಲದಿಂದ ಹೊರಗೆ ಕಳಿಸುವುದರಲ್ಲಿ ಕೂಡ ಒಮ್ಮತ ಇಲ್ಲದೆ ಮತ್ತು ಇವರುಗಳ ಜಗಳದಲ್ಲಿ ರಾಜ್ಯದ ಆಡಳಿತ ಸಂಪೂರ್ಣ ಹಾಳಾಗಿದೆ ಎಂದು ಹೇಳಿ ನನ್ನ ಮಾತನ್ನು ಮುಂಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್.—ಮಾನ್ಯ ವಾಟಾಳ್‌ನಾಗರಾಜ್ ಅವರು ಮುಖ್ಯಮಂತ್ರಿಗಳು ಸಭೆಯಲ್ಲಿ ಇಲ್ಲದಿದ್ದಾಗ ಅವರ ಬಗ್ಗೆ ಕೆಲವು ಡೆರೋಗೇಟರಿ ಮಾತುಗಳನ್ನು ಹೇಳಿದ್ದಾರೆ. ಆ ಮಾತು ಗಳನ್ನು ರೆಕಾರ್ಡ್‌ನಿಂದ ತಾವು ಎಕ್ಸ್‌ಪಂಜ್ ಮಾಡಿಸಬೇಕು. ಇಲ್ಲವೇ ಈಗ ಮುಖ್ಯಮಂತ್ರಿಗಳು ಸಭೆಗೆ ಬಂದಿರುವುದರಿಂದ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಬೇಕು. ಶ್ರೀಮಾನ್ ಕೆ. ಕೆ. ಮೂರ್ತಿ ಅವರ ವಿಷಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಶ್ರೀಮಾನ್ ಕೆ. ಕೆ. ಮೂರ್ತಿಯವರ ಕೆಲಸಕಾರ್ಯಗಳಲ್ಲಿ ಮತ್ತು ಅವರ ಆಗುಹೋಗುಗಳಲ್ಲಿ ಮುಖ್ಯಮಂತ್ರಿಗಳಿಗೆ ಇಂಟರೆಸ್ಟ್ ಇರಬೇಕು ಮತ್ತು ಮುಖ್ಯಮಂತ್ರಿಗಳು ಅವರ ಕೆಲಸಕಾರ್ಯ ಗಳಲ್ಲಿ ಕೊಲ್ಯೂಡ್ ಆಗಿದ್ದಾರೆಂಬ ರೀತಿಯಲ್ಲಿ ಅವರು ಹೇಳಿದರು. ಅದನ್ನು ಮುಖ್ಯಮಂತ್ರಿ ಗಳು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಬೇಕು.

Mr. DEPUTY SPEAKER.— I would have taken care to see that names of persons who are not here to defend themselves are not mentioned. The hon. member mentioned the name of the person as the head of a corporation. Certain other names were mentioned who are connected with certain bodies or institutions of Government. In the content of things I had to give certain latitude, Even then I would call upon the hon. members not to frequently mention the names of those persons, even though there is something connected which hon.

(MR. DEPUTY SPEAKER)

Ministers can defend. The Government will have to defend then in the contex of things as they are connected with certian institutions. It is not possible to expunge those words.

Sri K. PRABHAKAR.— What about the ideas concerned ? It is most derogatory if it is understood in that context. It is not an ordinary thing which we can overlook.

MR. DEPUTY SPEAKER.— I have already told the hon. member. If there is anything unparlimentary or imputing motives or abuse, that can certainly be expunged.

† ಶ್ರೀ ಎಂ. ಎಂ. ಸಜ್ಜನ್ (ಮುದ್ದೇಬಿಹಾಳ) —ಮಾನ್ಯ ಉಪಾಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕೆ ವಂದನೆಯನ್ನು ಸಲ್ಲಿಸಲು ಮಾನ್ಯ ಸದಸ್ಯರಾದ ಶ್ರೀ ನುಬ್ಬಯ್ಯ ಶೆಟ್ಟಿ ಯವರು ಈ ಸಭೆಯಲ್ಲಿ ಮಂಡಿಸಿರತಕ್ಕ ನಿರ್ಣಯವನ್ನು ಬೆಂಬಲಿಸುತ್ತಾ ನಾನು ಕೆಲವೊಂದು ವಿಚಾರಗಳನ್ನು ಹೇಳಬಯಸುತ್ತೇನೆ. ಸರ್ಕಾರದವರು ಮಾನ್ಯ ಮುಖ್ಯ ಮಂತ್ರಿಗಳು ದೇಶದಲ್ಲಿ, ರತಕ್ಕ ಎಲ್ಲರ ಕಲ್ಯಾಣಕ್ಕೋಸ್ಕರ; ಜನಗಳ ಹಿತಸಾಧನೆಗಾಗಿ, ಅದರಲ್ಲೂ ಬಡಜನರ ಮತ್ತು ಹಿಂದುಳಿದ ವರ್ಗಗಳ, ಹರಿಜನ ಗಿರಿಜನರ ಉದ್ಧಾರಕ್ಕಾಗಿ ಹಲವಾರು ಯೋಜನೆಗಳನ್ನು ಹಾಕಿ ಕೊಂಡಿದ್ದಾರೆ. ಸರ್ಕಾರದವರು ಅದನ್ನು ಸಾಧಿಸಿ ಕೀರ್ತಿಯನ್ನು ಗಳಿಸಬೇಕಾದರೆ ಮುಖ್ಯವಾಗಿ ಸರ್ಕಾರದ ಆಡಳಿತದ ಅಧೀನುಗಳಲ್ಲಿ ಭ್ರಷ್ಟಾಚಾರ, ಅತ್ಯಾಚಾರ, ಅನಾಚಾರ ಹೋಗಬೇಕು, ಲಂಚ ನಿರ್ಮೂಲನವಾಗಬೇಕು. ಆಡಳಿತದಲ್ಲಿ ಸುಧಾರಣೆಯಾಗಬೇಕು. ಜೂಜಾಟ, ಮತ್ತು ಮಜಾ ಮಾಡುವ ಸಂಸ್ಥೆಗಳನ್ನು ತೆಗೆದುಹಾಕಬೇಕು. ಆನ್‌ಟಚ್‌ಬಿಲಿಟಿ ಕಾಯಿದೆಯನ್ನು ವಿಶೇಷವಾಗಿ ಪ್ರಯೋಗಮಾಡಿ ಹರಿಜನ ಗಿರಿಜನರಿಗೆ ಆಗತಕ್ಕಂಥಾ ಅನ್ಯಾಯವನ್ನು ಹೋಗಲಾಡಿಸಬೇಕು. ಇವುಗಳನ್ನು ಏಕಕಾಲದಲ್ಲಿ ಮಾಡುವುದಕ್ಕೆ ಕೆಲವು ಯೋಜನೆಗಳನ್ನು ಸರ್ಕಾರದವರು ಕೈಗೊಳ್ಳಬೇಕು. ಆ ರೀತಿ ಮಾಡುವುದಾದರೆ ಅದರಿಂದ ಎಲ್ಲರಿಗೂ ಕಲ್ಯಾಣವಾಗುತ್ತದೆ. ಬಡಜನಗಳ ಮತ್ತು ಹಿಂದುಳಿದ ವರ್ಗದವರ ಹಿತಸಾಧನೆಯ ದೃಷ್ಟಿಯಿಂದ ಸರ್ಕಾರದವರು ಕೆಲವು ಯೋಜನೆಗಳನ್ನು ಕೈಗೊಳ್ಳುವುದು ಅವಶ್ಯಕ. ಇದರ ಜೊತೆಗೆ ಈಗ ನಮ್ಮ ರಾಜ್ಯದಲ್ಲಿ ಒಂದು ಹೆಡಂಭೂತವಾಗಿರುವ ರೋಕಲ್ ಕ್ಯಾಂಡಿಡೇಟ್‌ಗಳ ಸಮಸ್ಯೆಯನ್ನು ಬಗೆಹರಿಸಿ ಅವರುಗಳನ್ನು ಖಾಯಂ ಮಾಡುವ ಬಗ್ಗೆ ಒಂದು ಕ್ರಮವನ್ನು ಕೈಗೊಳ್ಳಬೇಕು. ಸೀನಿಯಾರಿಟಿ ಲಿಸ್ಟ್ ಮತ್ತು ಪ್ರಮೋಷನ್ ಬಗ್ಗೆ ಸರ್ಕಾರದವರು ಯೋಗ್ಯ ತೀರ್ಮಾನವನ್ನು ಕೈಗೊಂಡು ಅದನ್ನು ಕ್ರಮಗೊಳಿಸುವುದಕ್ಕೆ ಪ್ರಯತ್ನ ಮಾಡಿದರೆ ಮಾತ್ರ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಮತ್ತು ಕೀರ್ತಿ ಬರುತ್ತದೆಂದು ತಾನು ಹೇಳಬಯಸುತ್ತೇನೆ.

ಭ್ರಷ್ಟಾಚಾರ, ಅತ್ಯಾಚಾರ, ಅನಾಚಾರ ಹೋಗಬೇಕಾದರೆ ಪ್ರತಿಯೊಬ್ಬರು ಪರಿವರ್ತನೆಯಾಗಬೇಕು. ನೌಕರರು ತಾವಾಗಿಯೇ ತಮ್ಮ ಮನಸ್ಸನ್ನು ಪರಿವರ್ತನೆ ಮಾಡಿಕೊಂಡು ದೇಶದ ಹಿತದೃಷ್ಟಿಯಿಂದ ಜನತೆಯ ಹಿತದೃಷ್ಟಿಯಿಂದ ಕೆಲಸ ಮಾಡಿದರೆ ಭ್ರಷ್ಟಾಚಾರ, ಅನಾಚಾರ ಹೋಗುತ್ತದೆ. ಈಗ ನಮ್ಮ ರಾಜ್ಯದಲ್ಲಿ ಲಂಚನಿರ್ಮೂಲನಾ ಖಾತೆ ಇದೆ. ಈ ಲಂಚನಿರ್ಮೂಲನಾ ಖಾತೆ ಎಷ್ಟು ಕೆಲಸವನ್ನು ಸಾಧಿಸಿದೆ ಎಂದು ಪರಿಶೀಲನೆ ಮಾಡಿ ನೋಡಿದರೆ ಈ ಲಂಚನಿರ್ಮೂಲನಾ ಖಾತೆಯಲ್ಲರು ಲಂಚವನ್ನು ತೆಗೆದುಹಾಕುವುದಕ್ಕೆ ಮತ್ತೊಂದು ಲಂಚಭ್ರಷ್ಟಸಂಸ್ಥೆ ಇರಾಜೆಯನ್ನು ಮಾಡಬೇಕಾದೀತೋ ಏನೋ ಎನ್ನುವ ವಿಚಾರ ಬಂದಿದೆ. ಲಂಚನಿರ್ಮೂಲನಾದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ, ಆದ್ದರಿಂದ ಆ ಬಗ್ಗೆ ಸರ್ಕಾರದವರು ಕ್ರಮವನ್ನು ತೆಗೆದುಕೊಳ್ಳಬೇಕು. ಲಂಚ ಕೊಡುವವರನ್ನು ಮತ್ತು ಲಂಚವನ್ನು ತೆಗೆದುಕೊಳ್ಳುವವರನ್ನು ಶಿಕ್ಷೆಗೆ ಗುರಿಮಾಡಿದರೆ ಈ ಲಂಚದ ಪರಿಪಾಠ ನಿಲ್ಲುತ್ತದೆ ಎಂದು ನನ್ನ ಭಾವನೆ. ಲಂಚ ನಿಲ್ಲಬೇಕಾದರೆ ನೌಕರರ ಜೀವನ ಮಟ್ಟಕ್ಕೆ ತಕ್ಕಂಥ ನೌಕರರಿಗೆ ಪಗಾರನನ್ನು ಕೊಡಬೇಕೆಂದು ನನ್ನ ಅಭಿಪ್ರಾಯ. ಇದರ ಜೊತೆಗೆ ಲಂಚವನ್ನು ಕೊಡುವವರನ್ನು ಮತ್ತು ಲಂಚವನ್ನು ತೆಗೆದುಕೊಳ್ಳುವವರನ್ನು ಹಿಡಿದುಕೊಟ್ಟವರಿಗೆ ಬಹುಮಾನ ಕೊಟ್ಟರೆ ಲಂಚದ ಪರಿಪಾಠ ತಪ್ಪುತ್ತದೆ ಎಂದು ನನ್ನ ಅಭಿಪ್ರಾಯ. ಲಂಚವನ್ನು ತೆಗೆದುಕೊಡೆ, ಶ್ರದ್ಧೆಯಿಂದ ಮತ್ತು ನಿಷ್ಠೆಯಿಂದ ಕೆಲಸ ಮಾಡತಕ್ಕ ನೌಕರರಿಗೆ ಬಡ್ತಿ ಕೊಟ್ಟರೆ

ಮತ್ತು ಬಹುಮಾನವನ್ನು ಕೊಟ್ಟರೆ ಲಂಚವನ್ನು ತಿನ್ನತಕ್ಕ ಪದ್ಧತಿಯನ್ನು ಬಿಡುತ್ತಾರೆ ಎಂದು ನಾನು ಅಭಿಪ್ರಾಯ ಪಡುತ್ತೇನೆ. ಈ ರೀತಿಯಾಗಿ ಸರ್ಕಾರದವರು ಲಂಚವನ್ನು ನಿರ್ಮೂಲನ ಮಾಡತಕ್ಕ ಅನೇಕ ಕ್ರಮಗಳನ್ನು ಸರ್ಕಾರದವರು ಕೈಗೊಳ್ಳಬೇಕು ಎಂದು ನಾನು ಸೂಚನೆ ಮಾಡುತ್ತೇನೆ. ಇದರ ಜೊತೆಗೆ ಆಡಳಿತದಲ್ಲಿ ಅನೇಕ ಸುಧಾರಣೆಗಳು ಆಗುವುದು ಅವಶ್ಯಕ ಇದೆ. ಆಫೀಸುಗಳಲ್ಲಿ ನಡೆಯತಕ್ಕ ಕೆಲಸ ನಿಧಾನವಾಗಿ ಬಹಳ ತೊಡಕಿನಲ್ಲಿ ನಡೆಯುತ್ತಿದೆ. ಅದು ಹೋಗಬೇಕಾದರೆ ಆಡಳಿತದಲ್ಲಿ ಸುಧಾರಣೆ ಆಗಬೇಕು. ಆಡಳಿತ ಸುಧಾರಣೆ ಆಗಬೇಕಾದರೆ ಪ್ರತಿಯೊಬ್ಬ ನೌಕರರೂ ಅದು ನನ್ನ ಕರ್ತವ್ಯ, ದೇಶದ ಕರ್ತವ್ಯ ಎಂದು ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡಬೇಕು. ಮುಖ್ಯವಾಗಿ ನಾವು ದೇಶಕ್ಕಾಗಿ ಸೇವೆ ಮಾಡುತ್ತೇವೆ ಎನ್ನುವ ಪ್ರಜ್ಞೆ ಪ್ರತಿಯೊಬ್ಬರಲ್ಲಿಯೂ ಬೆಳೆದು ಬಂದರೆ ಆಗ ಆಡಳಿತದಲ್ಲಿ ಸುಧಾರಣೆಯಾಗುತ್ತದೆ. ಆಗತಕ್ಕಂಥಾ ಕೆಲಸ ಆಗುವಂತೆ ತ್ವರಿತವಾಗಿ ಆಗುತ್ತದೆ ಎಂದು ನನ್ನ ಭಾವನೆ. ಆ ತರ ಕೆಲಸ ಆಗುವಂತೆ ಸರ್ಕಾರದವರು ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ನಾನು ಸೂಚನೆ ಮಾಡುತ್ತೇನೆ.

ಜೂಜು ಆಟ ಮತ್ತು ವ್ಯೋಜನ ಸಂಸ್ಥೆಗಳನ್ನು ತೆಗೆದುಹಾಕಬೇಕು. ಏತಕ್ಕೆಂದರೆ ಇವುಗಳಿಂದ ಅನೇಕ ಯುವಕರು, ಬಡವರು ಹಾಳಿ ತಪ್ಪಿ ಹೋಗುತ್ತಾರೆ. ಆದ್ದರಿಂದ ಇಂಥಾ ಸಂಸ್ಥೆಗಳನ್ನು ಮುಚ್ಚಬೇಕು ಎಂದು ನನ್ನ ಅಭಿಪ್ರಾಯ. ಯಾವ ಊರಿನಲ್ಲೇ ಆಗಲೀ ಕೆಟ್ಟ ಚಟುವಟಿಕೆಗಳನ್ನು ಮಾತಕ್ಕ ಸಂಸ್ಥೆಗಳಿಗೆ ಅವಕಾಶವನ್ನು ಮಾಡಿಕೊಡಕೂಡದು ನಾನು ಎಂದು ಹೇಳಬಯಸುತ್ತೇನೆ. ಕೆಟ್ಟ ಚಟಗಳಂತಹ ಜೂಜಾಟ ಇತ್ಯಾದಿ ಆಟಗಳನ್ನು ಆಡುವುದಕ್ಕೆ ಅವುಗಳನ್ನು ನಗರದಿಂದ ಬಹಂ ದೂರ ಇಡುವುದಕ್ಕೆ ಬೇರೆ ದೇಶಗಳಲ್ಲಿ ಅವಕಾಶ ಇದೆ. ಅದೇ ರೀತಿ ಇಲ್ಲಿಯೂ ಮಾಡಬೇಕಲ್ಲದೆ ನಗರಗಳಲ್ಲಿ ಇವುಗಳನ್ನು ನಡೆಸುವುದಕ್ಕೆ ಅವಕಾಶ ಕೊಡದಿರಲು ಎಂದು ನನ್ನ ಅಭಿಪ್ರಾಯ.

4-30 P.M.

ಇನ್ನು ನಮ್ಮ ಸರ್ಕಾರಕ್ಕೆ ನ್ಯಾಯವಾಗಿ ಬರಬೇಕಾದಂತಹ ಅನೇಕ ತರದ ಹುಟ್ಟುವಳಿಯು ಕಡಿಮೆಯಾಗುತ್ತಿದೆ. ಏಕೆಂದರೆ ಈಗ ಲಾಭಕ್ಕೆ ಕೊಡುವವರು ಅದನ್ನು ತಪ್ಪಿಸಿಕೊಳ್ಳುವುದರಿಂದ ಸರ್ಕಾರಕ್ಕೆ ಬರುವ ಆದಾಯ ಕಡಿಮೆಯಾಗುತ್ತದೆ. ಆದ್ದರಿಂದ ಕರ ಕಾಯಿದೆಯಲ್ಲಿ ಯಾರೂ ಕರ ಕೊಡದೆ ತಪ್ಪಿಸಿಕೊಳ್ಳುತ್ತಾರೋ, ಅಂಥವರಿಗೆ ಶಿಕ್ಷೆ ಕೊಡುವಂತಹ ಒಂದು ಪ್ರೊವಿಜನನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಹರಿಜನರ ಬಗ್ಗೆ ಮಾತನಾಡಬೇಕಾದರೆ, ಬಹಳ ವ್ಯಥೆಯಿಂದ ಬೇರು ವಿಚಾರವನ್ನು ಹೇಳಬೇಕಾಗಿದೆ. ಇವತ್ತಿನ ದಿವಸ ಹರಿಜನ ಶಿಕ್ಷಕ ಶಿಕ್ಷಕಿಯರಿಗೆ ಹಳ್ಳಿಗಳಲ್ಲಿ ಮನೆಗಳು ಸಿಗುವುದಿಲ್ಲ. ಮನೆ ಬಾಡಿಗೆ ಕುಡಿಯುವುದಕ್ಕೆ ನೀರು ಸಹ ಸಿಗುವುದಿಲ್ಲ. ಅವರನ್ನು ಬಾವಿಯಿಂದ ನೀರು ತೆಗೆಯಲು ಸಹ ಜನರು ಬಿಡುತ್ತಾ ಇಲ್ಲ. ಇಂತಹ ಪರಿಸ್ಥಿತಿ ಹಳ್ಳಿಗಳಲ್ಲಿ ಇನ್ನೂ ಇದೆ. ನಮಗೆ ಸ್ವಾತಂತ್ರ್ಯ ಸಿಕ್ಕಿ ೨೫ ವರ್ಷಗಳಾದರೂ ಸಹ ಇನ್ನೂ ಹರಿಜನರಿಗೋಳು ತಪ್ಪಿಲ್ಲ. ಆದ್ದರಿಂದ ಹರಿಜನರಿಗೆ ಹಳ್ಳಿಗಳಲ್ಲಿ ಹೋದರೆ ಮನೆಗಳು ಸಿಗುವಂತೆ ಮತ್ತು ಬಾವಿಯಿಂದ ನೀರು ತೆಗೆಯುವುದಕ್ಕೆ ಅವಕಾಶ ಮಾಡುವಂತೆ ಸರ್ಕಾರದವರು ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದನ್ನು ನಾನು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಸಹ ಹಳ್ಳಿಗಳಲ್ಲಿ ಹರಿಜನರಿಗೆ ಬಾವಿಯನ್ನು ಮುಟ್ಟುವಂತೆ ಮಾಡುವ ಜನರನ್ನು ನೋಡಿದ್ದೇನೆ.

ಇನ್ನು ಸರ್ಕಾರೀ ಅಧಿಕಾರಿಗಳ ಮನೋಪ್ರವೃತ್ತಿ ಬದಲಾಗಬೇಕು. ನಾವು ಇವತ್ತು ಸಂಬಳಕ್ಕಾಗಿ ದುಡಿಯುತ್ತಿದ್ದೇವೆ, ನಮಾಜ ಸೇವೆಗೋಸ್ಕರ ದುಡಿಯುತ್ತಿದ್ದೇವೆ, ಮತ್ತು ಸರ್ಕಾರ ನಮ್ಮದು, ದೇಶ ನಮ್ಮದು, ನಾವು ದೇಶಕ್ಕಾಗಿ ದುಡಿಯಬೇಕು-ಇತ್ಯಾದಿ ಮನೋಭಾವಗಳನ್ನು ಇಟ್ಟುಕೊಂಡು ದೇಶದ ಜನತೆಗಾಗಿ ದುಡಿಯಬೇಕು. ಆಗ ಮಾತ್ರ ನಮ್ಮ ನಮಾಜ ಉದ್ಧಾರವಾಗುತ್ತದೆ. ಅದು ಬಿಟ್ಟು ಕೇವಲ ನಮಾಜ ಸೇವಕರೆಂದು ಬೋಧನೆ ಮಾಡಿದರೆ ಇದು ಆಗುವುದಿಲ್ಲ. ಆದ್ದರಿಂದ ಸರ್ಕಾರೀ ನೌಕರರ ಮತ್ತು ಅಧಿಕಾರಿ ವರ್ಗದವರ ಮನೋವೃತ್ತಿಯನ್ನು ಬದಲಾಗುವಂತೆ ಮಾಡಲು ಬೇಕಾದಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಪ್ರಜಾಪ್ರಭುತ್ವದ ಬಗ್ಗೆ ನಮ್ಮ ಹಳ್ಳಿಗಳಲ್ಲಿರುವ ಜನರಿಗೆ ಯಾವ ಒಂದು ಸೂತ್ರವೂ ಸಹ ಗೊತ್ತಿಲ್ಲ. ಆದ್ದರಿಂದಲೇ ಅನೇಕ ಸಂಘ ಸಂಸ್ಥೆಗಳಿಗೆ ಚುನಾವಣೆಯಾಗುವಾಗ ಅವರಿಗೆ ಒಳ್ಳೆಯವರನ್ನು ಆರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದಕ್ಕೆ ಜನರಲ್ಲಿ ಇರುವ ತಿಳುವಳಿಕೆಯ ಅಭಾವವೇ

(ಶ್ರೀ ಎಂ. ಎಂ. ನಜ್ಜನ್)

ಕಾರಣ ಎಂದು ಕಾಣುತ್ತದೆ. ನನ್ನ ಮತ ಕ್ಷೇತ್ರದಲ್ಲಿಯೂ ಸಹ ಜನರು ಗುಲಾಮರಾಗಿದ್ದಾರೆ. ಅಂಥ ಜನರಿಗೆ ಪ್ರಜ್ಞೆ ಮತ್ತು ತಿಳಿವಳಿಕೆಯನ್ನು ಮೂಡಿಸುವಂತಹ ಕಾರ್ಯಕ್ರಮಗಳನ್ನು ಸರ್ಕಾರದವರು ಕೈಗೊಳ್ಳಬೇಕೆಂದು ಸೂಚನೆ ಮಾಡುತ್ತೇನೆ.

ಇನ್ನು ಶಿಕ್ಷಣದ ವಿಚಾರದಲ್ಲಿ ಹೇಳುವುದಾದರೆ, ನಮ್ಮಲ್ಲಿ ಒಂದು ಏಕರೂಪತೆಯ ಶಿಕ್ಷಣ ಪದ್ಧತಿ ಜಾರಿಯಲ್ಲಿ ಬರಬೇಕು. ಈಗ ಒಂದೊಂದು ವಿಶ್ವವಿದ್ಯಾನಿಲಯದವರು ಒಂದೊಂದು ರೀತಿಯಲ್ಲಿ ಪರೀಕ್ಷೆಗಳನ್ನು ನಡೆಸುತ್ತಿದ್ದಾರೆ. ಇದರಿಂದ ಬಹಳ ಜನರಿಗೆ ಅನ್ಯಾಯವಾಗುತ್ತದೆ. ಮುಖ್ಯವಾಗಿ ಸಣ್ಣ ಪ್ರಶ್ನೆಗಳಿಗೆ ಸಣ್ಣ ಉತ್ತರ ಕೊಟ್ಟರೆ ಪೆಂಟ್ ಪರ್‌ಸೆಂಟ್ ಕೆಲವು ಕಡೆ ಕೊಡುತ್ತಾರೆ. ಆದರೆ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಉದ್ದವಾದ ಪ್ರಶ್ನೆಯಿರುವುದರಿಂದ ಅದಕ್ಕೆ ಉದ್ದವಾದ ಉತ್ತರವನ್ನು ಬರೆಯಬೇಕಾಗುತ್ತದೆ. ಇಲ್ಲದಿದ್ದರೆ ಅದಕ್ಕೆ ಸರಿಯಾದ ಅಂಕಗಳನ್ನು ಕೊಡುವುದಿಲ್ಲ ಹಾಗೆ ಉದ್ದವಾದ ಉತ್ತರವನ್ನು ಬರೆಯಲು ಕಾಲ ಸಹ ಇರುವುದಿಲ್ಲ. ಈ ರೀತಿಯಾಗಿರುವುದರಿಂದ ಕರ್ನಾಟಕ ವಿಶ್ವವಿದ್ಯಾನಿಲಯದ ಹೆಚ್ಚಿನ ವಿದ್ಯಾರ್ಥಿಗಳಿಗೆ ಅಂಕಗಳು ಕಡಿಮೆ ಬಂದು ಮುಂದೆ ಅವರಿಗೆ ಯಾವುದಾದರೂ ನೇಮಕಾತಿಗಳಿಗೆ ಹೋಗಬೇಕಾದರೆ ಬಹಳ ಕಷ್ಟಪಡಬೇಕಾಗುತ್ತದೆ. ಆದ್ದರಿಂದ ಎಲ್ಲಾ ವಿಶ್ವವಿದ್ಯಾನಿಲಯದಲ್ಲಿಯೂ ಒಂದೇ ರೀತಿಯ ಪರಿಕ್ಷಾಪದ್ಧತಿ ಮತ್ತು ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ.

ಇನ್ನು ಮುಖ್ಯವಾದ ಇನ್ನೊಂದು ವಿಚಾರವೇನೆಂದರೆ, ನಾವು ಹಳ್ಳಿಗಳ ಬೆಳವಣಿಗೆಗೆ ಹೆಚ್ಚಿನ ಪ್ರಾತಿನಿಧ್ಯ ಕೊಡಬೇಕೆಂದು ಹೇಳುತ್ತೇನೆ. ಏಕೆಂದರೆ ಹಳ್ಳಿಗಳಲ್ಲಿ ಜನರು ಹಾಗೂ ಅಲ್ಲಿನ ಸ್ಥಿತಿಗತಿಗಳು ಬಹಳ ಹಿಂದುಳಿದಿರುತ್ತವೆ. ಅದಕ್ಕೋಸ್ಕರ ಸರ್ಕಾರದವರು ಇವರ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡು ಹಳ್ಳಿಗಳಿಗೆ ಹೆಚ್ಚು ಹಣ ಖರ್ಚು ಮಾಡಿ ಅಭಿವೃದ್ಧಿ ಮಾಡಬೇಕೆಂದು ಹೇಳುತ್ತೇನೆ. ಅದರ ಬದಲು ಕೇವಲ ನಗರಗಳಿಗೆ ಖರ್ಚು ಮಾಡಬಾರದು ಎಂದು ಹೇಳಿಲ್ಲ. ಆದರೆ ಹಳ್ಳಿಗಳಿಗೂ ಹೆಚ್ಚು ಪ್ರಾತಿನಿಧ್ಯ ಕೊಡಬೇಕೆಂದು ಸೂಚನೆ ಮಾಡುತ್ತೇನೆ.

ಇನ್ನು ಬರಗಾಲ ಪ್ರದೇಶಗಳಾದ ಬಿಜಾಪುರ, ಗುಲ್ಬರ್ಗ, ಮತ್ತು ಬೀದರ್ ಇತ್ಯಾದಿ ಜಿಲ್ಲೆಗಳಲ್ಲಿ ಪ್ರತಿಯೊಂದು ಹೊಲಗಳಿಗೂ ಬಾವಿಗಳನ್ನು ತೆಗೆದು ನೀರಿನ ಆಶ್ರಯ ಸಿಗುವ ಹಾಗೆ ಮಾಡಿದರೆ, ಅಲ್ಲಿರತಕ್ಕಂತಹ ಜನರು ಸಾಧ್ಯವಾದಷ್ಟು ಕಾಳನ್ನು ಬೆಳೆದು ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಇವತ್ತು ಚಂದ್ರನಿಗೆ ರಾಹು ಕೇತು ಗಂಟುಬಿದ್ದ ಹಾಗೆ ನಮ್ಮ ಸರ್ಕಾರಕ್ಕೆ ಇವತ್ತು ಏನು ಒಳ್ಳೆಯ ಕೆಲಸ ಮಾಡಿದರೂ ಟೀಕೆ ಟಿಪ್ಪಣಿಗಳು ತಪ್ಪಿದ್ದಲ್ಲ. ನಮ್ಮ ರಾಜ್ಯದಲ್ಲಿ ಅನೇಕ ಸಮಸ್ಯೆಗಳು ಇವೆ. ಅದರ ಜೊತೆಗೆ ಈ ಬರಗಾಲ ಸಮಸ್ಯೆಯು ಸಹ ತೀವ್ರವಾಗಿದೆ. ನಮ್ಮ ಬಿಜಾಪುರದಲ್ಲಿ 1296ನೇ ಇಸವಿಯಿಂದ 10 ವರ್ಷ ಕ್ಕೊಮ್ಮೆ 15ವರ್ಷಗಳಿಗೊಮ್ಮೆ ಬರಗಾಲ ಬಂದೇ ಬರುತ್ತಿದೆ. ಆದರೆ ಇದರಬಗ್ಗೆ ಯಾರೂ ಇಲ್ಲಿಯವರೆಗೆ ಒಂದು ಶಾಶ್ವತ ಪರಿಹಾರವನ್ನು ಕಂಡುಹಿಡಿದು ಮಾಡಿಲ್ಲ. ಅದಕ್ಕೋಸ್ಕರ ನನ್ನ ಸಲಹೆ ಏನೆಂದರೆ, ಬಿಜಾಪುರ ಜಿಲ್ಲೆಯ ಬರಗಾಲ ದೂರ ಹೋಗಬೇಕಾದರೆ ಅಲ್ಲಿರತಕ್ಕಂತಹ ಆಲಮಟ್ಟಿ ಯೋಜನೆಯನ್ನು ಕಾರ್ಯಗತಗೊಳಿಸಬೇಕು. ಇದಕ್ಕೆ ಒಂದು 5 ಕೋಟಿ ರೂಪಾಯಿ ಖರ್ಚು ಮಾಡಿದರೆ, ಅಲ್ಲಿ 50 ಸಾವಿರ ಎಕರೆ ಭೂಮಿಗೆ ನೀರಾವರಿಯಾಗುತ್ತದೆ. ಅದಲ್ಲದೆ ಇದರಿಂದ ಅದರ ಅಕ್ಕಪಕ್ಕದಲ್ಲಿರುವ ತಾಲ್ಲೂಕುಗಳಿಗೂ ಅನುಕೂಲವಾಗುತ್ತದೆ; ಮತ್ತು ಅಲ್ಲಿ ಬೆಳೆದಂತಹ ಕಾಳುಗಳನ್ನು ಇತರ ಪ್ರದೇಶಗಳಿಗೂ ಒದಗಿಸಲು ಅನುಕೂಲವಾಗುತ್ತದೆ.

ಅದೇ ರೀತಿ ತಾಳಿಕೋಟೆಯಲ್ಲಿ ಒಂದು ಸಿಮೆಂಟ್ ಕಾರ್ಖಾನೆಯನ್ನು ಮಾಡಬೇಕೆಂದು ಹೇಳಿದಾಗ ಮೊನ್ನೆ ಬಂದ ಧಾರ್‌ವರು ಮತ್ತು ಟಿ ಎ ಪೈಯವರು ಅದಕ್ಕೆ ಆಶ್ವಾಸನೆಯನ್ನು ಕೊಟ್ಟು ಫೆಬ್ರುವರಿ 5-6 ನೇ ತಾರೀಕಿಗೆ ಒಂದು ತಜ್ಞರ ಸಮಿತಿಯನ್ನು ಅಲ್ಲಿಗೆ ಕಳಿಸುತ್ತೇವೆಂದು ಹೇಳಿದ್ದಾರೆ. ಈ ಒಂದು ಕಾರ್ಖಾನೆಯನ್ನು ಮಾಡುವುದರಿಂದ ಸುಮಾರು 10 ಸಾವಿರ ಜನರಿಗೆ ಅಲ್ಲಿ ಉದ್ಯೋಗ ಸಿಗುತ್ತದೆ. ಅಲ್ಲವೆ ಅಲ್ಲಿಗೆ ಒಂದು ರೈಲ್ವೆ ಲೈನ್ ಸಹ ಹಾಕಿದರೆ ಜನರಿಗೂ ಕೆಲಸ ಸಿಗುತ್ತದೆ ಮತ್ತು ಅದರಿಂದ ಆ ಜಾಗಕ್ಕೆ ಟ್ರಾನ್ಸ್‌ಪೋರ್ಟು ಸಂಪರ್ಕವೂ ಒದಗಿಸಿದಹಾಗೆ ಆಗುತ್ತದೆ. ಆದ್ದರಿಂದ ಸರ್ಕಾರದವರು ತಾಳಿಕೋಟೆ ಸಿಮೆಂಟ್ ಕಾರ್ಖಾನೆಗಳ ಅಲ್ಲಿಗೆ ರೈಲ್ವೆ ಲೈನ್, ಮತ್ತು ಬರಗಾಲ ಪ್ರದೇಶಕ್ಕೆ ಒಂದು ಶಾಶ್ವತ ಪರಿಹಾರ ಇತ್ಯಾದಿ ಇವನ್ನು ಮಾಡುವುದಕ್ಕೆ ಆದ್ಯತೆ ಕೊಟ್ಟು ಇದರಿಂದ ಒಂದು ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕೆಂದು ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಕಡೆಯಾದಾಗಿ ಒಂದು ಮಾತನ್ನು ಹೇಳುತ್ತೇನೆ. ಹೊಸದಾಗಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುತ್ತೇವೆಂದು ಹೇಳುತ್ತಿದ್ದಾರೆ ಗ್ರಾಮಾಂತರ ಸಂಪರ್ಕಸಾಧನೆಗಳಲ್ಲಿ ಬಹಳ ಹೆಚ್ಚಿನ ಕೆಲಸಗಳನ್ನು ಮಾಡಿ ತೋರಿಸಿದ್ದಾರೆ. ಅದೂ ಅಲ್ಲದೆ ನಣ್ಣ ನೀರಾವರಿ ಯೋಜನೆಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟು ನಮ್ಮ ಸರ್ಕಾರದವರು ಹಿಂದಿನಸರ್ಕಾರದವರು ಮಾಡದೇ ಇರುವ ಹೊಸ ಯೋಜನೆಗಳನ್ನು ಮಾಡಿದ್ದಾರೆ. ಅವಕ್ಕಾಗಿ ನಾನು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳನ್ನು ಹಾಗೂ ಸರ್ಕಾರದವರನ್ನು ಅಭಿನಂದಿಸಬೇಕಾಗಿದೆ. ಒಂದು ಶೋಚನೀಯ ವಿಚಾರವೇನೆಂದರೆ, ಮಾನ್ವೇಬಹಾದ್ದಲ್ಲಿ ಯಾವ ರಸ್ಕೂಲಾಗಲೀ ಒಂದು ಸರ್ಕಾರಿ ಸ್ಕೂಲು ಇಲ್ಲ, ಖಾಸಗೀ ಸ್ಕೂಲು ಇಲ್ಲ. ಇದಕ್ಕೆ ಸರ್ಕಾರದವರು ಸೂಕ್ತ ವ್ಯವಸ್ಥೆಯನ್ನು ಮಾಡಬೇಕು.

ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನು ಮುಗಿಸುತ್ತೇನೆ.

†ಶ್ರೀ ಬಿ. ವಿ. ಕಕ್ಕಿರಾಯ (ಬಂಟ್ವಾಳ).— ಮಾನ್ಯ ಸಭಾಪತಿಗಳೇ ತಾವು ಮೊದಲೇ ಹೇಳಿದಿರಿ. ಬಹಳ ಸೂಕ್ಷ್ಮವಾಗಿ ಪಾಲಿಸಿ ಬಗ್ಗೆ ಮಾತ್ರ ಮಾತನಾಡಬೇಕೆಂದು. ಕಾಲ ಹೆಚ್ಚಿಗೆ ಇಲ್ಲ. ಒಂದೇ ಮಾತಿನಲ್ಲಿ ಹೇಳಬೇಕಾಗಿದ್ದರೆ, ಸರ್ಕಾರ ನಮ್ಮ ರಾಜ್ಯದ ಪರಿಸ್ಥಿತಿಯನ್ನು ಯಾವರೀತಿ ಅರಿತು ಕೊಂಡಿದೆ, ಇವತ್ತು ನಮ್ಮ ಮುಂದಿರುವ ಸಮಸ್ಯೆಗಳೇನು, ಅವುಗಳಿಗೆ ಸರ್ಕಾರ ಏನೇನು ಪರಿಹಾರ ಮಾಡಿದೆ ಎಂಬುದನ್ನು ರಾಜ್ಯಪಾಲರ ಭಾಷಣದಲ್ಲಿ ತಿಳಿಸುವುದು ಯಾವಾಗಲೂ ಮಾಡಿಕೆ. ಅಂಥಾದ್ದು ಏನೂ ಇವರ ಭಾಷಣದಲ್ಲಿ ಕಾಣುತ್ತಾ ಇಲ್ಲ. ನಾವು ಸಾಮಾನ್ಯವಾಗಿ ಬೇರೆ ಇರಾಜೆಗಳ ವರದಿಗಳನ್ನು ಓದಿದರೆ, ಎನೇನು ಅಂಶಗಳನ್ನು ತಿಳಿದುಕೊಳ್ಳಬಹುದೋ ಅವನ್ನು ಮಾತ್ರ ರಾಜ್ಯಪಾಲರ ಭಾಷಣದಲ್ಲಿ ಸೇರಿಸಿದ್ದಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಒಂದು ನವ್ಯ ಕಾವ್ಯವನ್ನು ಬರೆದ ಹಾಗೆ ಈ ಭಾಷಣ ಇದೆ. ಅಂದರೆ ದೊಡ್ಡ ಸೊನ್ನೆ ಸುತ್ತಿ ಭ್ರಹ್ಮಾಂಡವನ್ನೆ ಚಿತ್ರಿಸಿದ ಹಾಗೆ ಹೇಳಬೇಕಾದ ವಿಚಾರಗಳನ್ನು ಇದರಲ್ಲಿ ಹೇಳದೆ ಅನೇಕ ಮುಖ್ಯ ವಿಚಾರಗಳನ್ನು ಬಿಟ್ಟುಬಿಟ್ಟಿದ್ದಾರೆ. ಅವರು ಹೇಳಿರುವುದು ಅಷ್ಟು ಏನೂ ಮುಖ್ಯವಾದುದಲ್ಲ, ಒಂದು ವಿಚಾರದ ಬಗ್ಗೆ ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ನಮ್ಮ ರಾಜ್ಯಕ್ಕೆ ಕರ್ನಾಟಕವೆಂದು ಹೆಸರಿಟ್ಟಿರುವ ಬಗ್ಗೆ ಪಾರ್ಲಮೆಂಟಿನಲ್ಲಿ ಕಾನೂನು ಮಾಡಿ ಅಧಿಕೃತವಾಗಿ ಈ ರಾಜ್ಯಕ್ಕೆ ಕರ್ನಾಟಕವೆಂಬ ನಾಮಧೇಯ ಬರುವ ಹಾಗೆ ಮಾಡುತ್ತೇವೆಂದು ಹೇಳಿದ್ದಾರೆ ಆದರೆ ಈ ನಂದರ್ಭದಲ್ಲಿ ನಮ್ಮ ಸರ್ಕಾರದವರು ನಮಗೆ ಹೇಳಬೇಕಾದ ಮಾತು ಏನೆಂದರೆ, ಕರ್ನಾಟಕ ರಾಜ್ಯ ನಿಜವಾಗಿ ಒಂದಾಗಿ ಉಳಿಯುತ್ತದೆಯೇ ಇಲ್ಲವೇ ಎಂಬುದು' ಇವತ್ತು ಭಾಷಾ ಪ್ರಾಂತಗಳು ಆಗಿರುವ ಹಿನ್ನೆಲೆಯಲ್ಲಿ ಭಾಷವಾರು ಪ್ರಾಂತಗಳನ್ನು ಪುನಃ ವಿಭಜನೆ ಮಾಡಬೇಕಾಗುತ್ತದೆಯೆನೋ ಎಂಬ ಭೀತಿ ಹೆಚ್ಚಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಅದರಲ್ಲಿಯೂ ಆಂಧ್ರರಾಜ್ಯದಲ್ಲಿ ಯಾವ ರೀತಿಯಾಗಿ ಚಳುವಳಿ ನಡೆಯುತ್ತಿದೆಂಬ ಹಿನ್ನೆಲೆಯನ್ನು ನಾವು ಈಗಾಗಲೇ ನೋಡುತ್ತಿದ್ದೇವೆ. ಇಂಥದರಿಂದ ನಮ್ಮ ಕರ್ನಾಟಕದ ಮೇಲೆ ಆಗುವಂಥ ಅಪಾಯವನ್ನು ನಾವು ಈಗಾಗಲೇ ಕಾಣಬಹುದು. ಅಂಥಾದ್ದನ್ನು ತಡೆಗಟ್ಟುವುದಕ್ಕೆ ಬೇಕಾದಂಥ ಕ್ರಮಗಳನ್ನು ಸರ್ಕಾರದವರು ಹಾಗೂ ಜನತೆ ತೆಗೆದುಕೊಳ್ಳಬೇಕಾಗಿದೆ. ಆಂಧ್ರದಲ್ಲಿ ಈಗ ನಡೆಯುತ್ತಿರುವಂತಹ ಚಳುವಳಿ ಒನ್ನೆರೆ ನೋಡಿದರೆ ಸರ್ಕಾರದವರು ಜುನಾವಣೆಗಳ ಕಾಲದಲ್ಲಿ ಏನೇನು ವಾಗ್ದಾನಗಳನ್ನು ಮಾಡಿದ್ದರೋ ಆ ವಾಗ್ದಾನಗಳ ಪ್ರಕಾರ ನಡೆಯಬೇಕಾದುದು ಬಹಳ ಮುಖ್ಯವಾಗಿದೆ. ಪುರೋಗಾಮಿ ರೈತರಿಗೆ ಭೂಸುಧಾರಣೆಗಳಿಂದ ಅನುಕೂಲಗಳನ್ನು, ಕಲ್ಪಿಸುವುದು. ಕಾರ್ಮಿಕರ ಹಿತರಕ್ಷಣೆ ಹಾಗೂ ನಂರಕ್ಷಣೆ ಮಾಡುವ ಕ್ರಮಗಳನ್ನು ಜಾರಿಗೆ ತರುವಂಥಾದ್ದು ನಿರುದ್ಯೋಗ ನಿವಾರಣೆ ಜನರಿಗೆ ಆಗಬೇಕು ವಿಧ್ಯಾರ್ಥಿಗಳ, ಅಧ್ಯಾಪಕರ ಹಾಗೂ ಇತರ ನೌಕರರ ಅಶಾಕಾಂಕ್ಷೆಗಳನ್ನು ಈಡೇರಿಸಿ ದೇಶವನ್ನು ಪುರೋಗಾಮಿ ದಿಕ್ಕಿಗೆ ಸರ್ಕಾರ ಒಯ್ಯುತ್ತದೆ ಎಂಬ ಭರವಸೆ ನಮ್ಮ ಜನತೆಗೆ ಬಂದರೆ ಹಿಂದಿನ ಜುನಾವಣೆ ಕಾಲದಲ್ಲಿ ಯಾವ ರೀತಿ ನಮ್ಮ ಪಕ್ಷದ ಹಿಂದೆ ನಿಂತಿದ್ದರೋ ಆ ರೀತಿಯಾಗಿ ಈಗಲೂ ನಿಲ್ಲುತ್ತಾರೆ. ಹಾಗೆ ಆದರೆ ಮಾತ್ರ ವಿಭಜನೆಕಾರರಿಗೆ ಈ ದೇಶದಲ್ಲಿ ಪ್ರೋತ್ಸಾಹ ಸಿಗುವುದಿಲ್ಲ. ಸರ್ಕಾರ ಈ ಕಾರ್ಯವನ್ನು ಮಾಡುವುದಕ್ಕೆ ವಿಫಲವಾಗಿರುವುದರಿಂದ, ಅವರು ಈ ಕಾರ್ಯವನ್ನು ಮಾಡ ವುದಿಲ್ಲವೆಂಬ ನಿರಾಶೆಯ ವಾತಾವರಣ ಸಾಮಾನ್ಯ ಜನಗಳಿಗೆ ಬಂದಿರುತ್ತದೆ ಇವಕ್ಕು ಪ್ರತಿಗಾಮಿ ಶಕ್ತಿಗಳು ಜನತೆಯ ಮನಸ್ಸನ್ನು ಬೇರೆ ಕಡೆ ತಿರುಗಿಸುವುದಕ್ಕೋಸ್ಕರ ಪ್ರಯತ್ನಮಾಡುತ್ತಿದ್ದಾರೆ. ನಮ್ಮ ರಾಜ್ಯಕ್ಕೆ ಕರ್ನಾಟಕವೆಂದು ಹೆಸರನ್ನು ಇಟ್ಟಮೇಲೆ ಅಂತಹ ಅಪಾಯ ಯಾವಾಗಲೂ ಬರಬಾರದು. ಯಾವಾಗಲೂ ಒಂದೇ ಕರ್ನಾಟಕವಾಗಿ ಉಳಿಯಬೇಕು ಅದಕ್ಕೆ ರಾಜ್ಯದ ಪಂಚಾಂಗವನು ದೃಢೀಕರಿಸಬೇಕು ಅದಕ್ಕೆ ಬರೀ ಪುರೋಗಾಮಿಯಾದ

(ಶ್ರೀ ಬಿ. ವಿ. ಕಕ್ಕಿಲಾಯ)

ಮಾತನ್ನು ಹೇಳಿದರೆ ಆಗುವುದಿಲ್ಲ. ಅದಕ್ಕೆ ಬೇಕಾದಂಥ ಕ್ರಮಗಳನ್ನು ಎಲ್ಲಾ ಕ್ಷೇತ್ರಗಳಲ್ಲಿಯೂ ಸರ್ಕಾರ ಕೈಗೊಂಡು ನಡೆಸಬೇಕು. ಅದಕ್ಕಾಗಿ ಸರ್ಕಾರ ಹೆಚ್ಚು ಗಮನವನ್ನು ಕೊಡಬೇಕು. ರಾಜ್ಯಪಾಲರ ಭಾಷಣವನ್ನು ನಾನು ಪೂರ್ತಿಯಾಗಿ ನೋಡಿದರೆ ಅದರಲ್ಲಿ ಪ್ಲಾಮಿಲಿ ಪ್ಲಾನಿಂಗ್ ನಿಂದ ಹಿಡಿದು ಎಲ್ಲ ವಿಚಾರಗಳನ್ನೂ ಹೇಳಿದ್ದಾರೆ. ಆದರೆ ಸಮಾಜವಾದೀ ಸಮಾಜವನ್ನು ನಿರ್ಮಾಣಮಾಡುವುದಕ್ಕೆ ಹೊರಟಿರುವ ಈ ಒಂದು ಸರ್ಕಾರಕ್ಕೆ ಯಾರಿಗೋಸ್ಕರ ಸಮಾಜವಾದೀ ಸಮಾಜ ಇರಬೇಕೋ ಅಂತಹ ಕಾರ್ಮಿಕರ ಬಗ್ಗೆ ಒಂದ ಮಾತನ್ನು ಸಹ ಇದರಲ್ಲಿ ಹೇಳದೇ ಇರುವುದನ್ನು ನೋಡಿದರೆ, ಇವರ ಒಂದು ಸಮಾಜವಾದ ಯಾವ ರೀತಿಯಾದಂಥ ಸಮಾಜವೆಂಬುದು ನನಗಂತೂ ಅರ್ಥವಾಗುತ್ತಾ ಇಲ್ಲ. ಇನ್ನು ಅದರಲ್ಲಿ ಇಂಡಸ್ಟ್ರೀಸ್ ಯೂನಿವರ್ಸಿಟಿ. ಮುಂತಾದ ವಿಚಾರಗಳನ್ನು ಹೇಳಿದ್ದಾರೆ. ಆದರೆ ಇವೆಲ್ಲವನ್ನೂ ಹೇಳುವುದರ ಜೊತೆಗೆ ಕಾರ್ಮಿಕವರ್ಗದವರು ಇವತ್ತು ನಮ್ಮ ರಾಜ್ಯದಲ್ಲಿ ಏನು ದುಡಿಯುತ್ತಿದ್ದಾರೆ ಅವರ ಸಮಸ್ಯೆಗಳ ಪರಿಹಾರದ ಬಗ್ಗೆ ಏನು ಪರಿಹಾರಮಾರ್ಗವನ್ನು ಕಂಡುಹಿಡಿದಿದ್ದೀರಿ ಎಂಬುದನ್ನು ಹೇಳಲಿಲ್ಲ. ದಿನದಿನಕ್ಕೂ ಆಹಾರಧಾನ್ಯಗಳ ಬೆಲೆಯಂತೂ ಏರುತ್ತಿದೆ. ಅದರ ಜೊತೆಗೆ ನಿತ್ಯೋಪಯೋಗಕ್ಕೆ ಬೇಕಾದಂಥ ವಸ್ತುಗಳ ಅಭಾವ ಅವರನ್ನು ತೀವ್ರವಾಗಿ ಪೀಡಿಸುತ್ತಿದೆ. ನಮ್ಮ ದಕ್ಷಿಣ ಕನ್ನಡಜಿಲ್ಲೆಯಲ್ಲಿ ಆಹಾರ ಪದಾರ್ಥಗಳ ಬೆಲೆ ವಿಪರೀತವಾಗಿ ಏರಿದೆ. ಬೇರೆ ಕಡೆಗಳಿಂದ ಆಕಾರ ಬರಬಾರದೆಂದು ತಡೆಯಾಜ್ಞೆ ಬೇರೆ ಮಾಡಿದ್ದಾರೆ. ಇದರಿಂದ ಆಹಾರದ ಬೆಲೆ ಏರಿಕೆಯಾಗುವುದಕ್ಕೂ ಮತ್ತು ಆಕಾರ ಪದಾರ್ಥಗಳ ಅಭಾವ ಆಗುವುದಕ್ಕೂ ಕಾರಣವಾಗಿದೆ. ಅಲ್ಲಿ ಇಂತಹ ಧೋರಣೆಯನ್ನು ಅನುಸರಿಸುತ್ತಿದ್ದಾರೆ. ಇಂತಹ ಒಂದು ಸನ್ನಿವೇಶದಲ್ಲಿ ನಮ್ಮ ರಾಜ್ಯದಲ್ಲಿರುವ ಕಾರ್ಮಿಕರು ಇನ್ನೊಂದು ದೊಡ್ಡ ಗಂಡಾಂತರವನ್ನು ಎದುರಿಸುತ್ತಿದ್ದಾರೆ. ಆಮ ಏಮ್ಯುಚ್ಚಕ್ಕೆ ಜೋತಾ. ಅನೇಕ ಕಾರ್ಖಾನೆಗಳಲ್ಲಿ ಮೂರು ಷಿಫ್ಟ್ ನಾಡುತ್ತಿದ್ದರು. ಈಗ ಎರಡು ಷಿಫ್ಟ್ ಆಗುತ್ತಿದೆ. ಅನೇಕ ಕಾರ್ಖಾನೆಗಳಲ್ಲಿ ವಾರಕ್ಕೆ ಎರಡು ಮೂರು ದಿನಗಳ ಕೆಲಸ ಸಹ ನಡೆಯುತ್ತಾ ಇಲ್ಲ. ಇದರಿಂದ ನಿರುದ್ಯೋಗ ಸಮಸ್ಯೆ ಉಂಟಾಗಿದೆ. ಇಂತಹ ಸಮಸ್ಯೆಗಳನ್ನು ಯಾವ ರೀತಿಯಲ್ಲಿ ಬಗೆಹರಿಸಬೇಕೆಂಬ ಬಗ್ಗೆ ಯಾವ ಪರಿಹಾರ ಮಾರ್ಗಗಳನ್ನು ಸೂಚಿಸುವ ಆಶ್ವಾಸನೆಯನ್ನು ತಾವು ಕಾರ್ಮಿಕರಿಗೆ ಸೂಚಿಸಿಲ್ಲವೆಂದು ನಾನು ಹೇಳುತ್ತೇನೆ. ಇದು ಬಹಳ ಶೋಚನೀಯವಾದ ವಿಚಾರ. ಇನ್ನೊಂದು ವಿಷಯ. ನಮ್ಮಲ್ಲಿ ಪಿ. ಡಬ್ಲ್ಯೂ. ಡಿ. ಇಲಾಖೆ ಇದೆ. ಇದರಲ್ಲಿ ಸಾವಿರ ಮಂದಿ ಕಾರ್ಮಿಕರು ಕೆಲಸಮಾಡುತ್ತಿದ್ದಾರೆ. ಅವರನ್ನು ಹಿಂದಿನಿಂದ ಯಾವುದೋ ಒಂದು ರೀತಿಯಲ್ಲಿ ಕಂಟ್ರಾಕ್ಟ್‌ದಾರರಾದವರು ಕೆಲಸಕ್ಕೆ ಸೇರಿಸಿಕೊಂಡು ಅವರಿಗೆ ಸಂಬಳ ಕೊಡುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಕಾರ್ಮಿಕವರ್ಗದವರನ್ನು ಕಂಟ್ರಾಕ್ಟ್‌ದಾರರು ನುಲಿಗೆಮಾಡುತ್ತಿದ್ದರು. ಇದನ್ನು ಕಂಡು ಸರ್ಕಾರದವರು ನೇರವಾಗಿ ಕಾರ್ಮಿಕರನ್ನು ಅಲ್ಲಿ ಕೆಲಸಕ್ಕೆ ಇಟ್ಟುಕೊಂಡಿದ್ದರೂ ಕೂಡ ಅವರಿಗೆ ಇವತ್ತು ಯಾವುದೇ ರೀತಿಯಾಗಿ ದಿನಕೂಲಿ ೩-75 ರೂಪಾಯಿ ಸಂಬಳವೆಂದು ನಿಗದಿಮಾಡಿದ್ದರೂ, ಅದು ಅವರಿಗೆ ಈಗ ಸಿಗುತ್ತಾ ಇಲ್ಲ, ಪಿ. ಡಬ್ಲ್ಯೂ. ಡಿ. ಯಲ್ಲಿ ಕೆಲಸಮಾಡುವ ಕಾರ್ಮಿಕರಿಗೆ ಉದ್ಯೋಗ, ಬಡ್ತಿ ನೀಡುವ ಬಗ್ಗೆ ರಕ್ಷಣೆ ಇಲ್ಲ. ಅವರಿಗೆ ಕಾರ್ಮಿಕರಿಗೆ ಸಂಬಂಧಪಟ್ಟ ಕಾಯಿದೆಗಳ ಮೂಲಕ ಯಾವುದಾದರೂ ರಕ್ಷಣೆಯನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನವಾಡೋಣವೆಂದರೆ ಈಗಿನ ಕಾಯಿದೆಗಳು ಈ ಇಲಾಖೆಗೆ ಅಗತ್ಯವಾಗುವುದಿಲ್ಲ. ಇವರಿಗೆ ಕಾಯಿದೆಗಳ ರಕ್ಷಣೆ ಸಿಗಬಾರದೆನ್ನುವ ರೀತಿಯಲ್ಲಿ ಸರ್ಕಾರ ಇವತ್ತು ಒಂದು ಧೋರಣೆಯನ್ನು ಅನುಸರಿಸಿಕೊಂಡು ಬರುತ್ತಿದೆ. ಪಿ. ಡಬ್ಲ್ಯೂ. ಡಿ. ಇಲಾಖೆಯಲ್ಲಿರುವ ಕಾರ್ಮಿಕರಿಗೆ ನಿಜವಾಗಿ ರಕ್ಷಣೆ ಇಲ್ಲವೆಂಬುದು ನಿಜ. ಈ ಇಲಾಖೆಯ ಹಾಗೆ ಬೆಂಗಳೂರು ವಾಟರ್ ಸಪ್ಲೈ ಸ್ಯುಯರೇಜ್ ಬೋರ್ಡ್, ಹೌಸಿಂಗ್ ಬೋರ್ಡ್ ಸಿಟಿ ಇಂಪ್ರೂವ್‌ಮೆಂಟ್ ಬೋರ್ಡ್—ಮುಂತಾದ ಸಂಸ್ಥೆಗಳಿವೆ. ಆ ಸಂಸ್ಥೆಗಳಲ್ಲಿಯೂ ಅನೇಕ ಮಂದಿ ಕಾರ್ಮಿಕರು ಕೆಲಸಮಾಡುತ್ತಿದ್ದಾರೆ. ಅಲ್ಲೆಲ್ಲಾ ಕೆಲಸಮಾಡುವ ನೌಕರರಿಗೂ ಇತರ ಕಾರ್ಮಿಕರಿಗೆ ಅನ್ವಯಿಸುವ ಕಾಯಿದೆಗಳು ಅನ್ವಯವಾಗುವುದಿಲ್ಲ ಇವರಿಗೆ ಕಾರ್ಮಿಕ ಶಾಸನಗಳು ಅನ್ವಯಿಸುತ್ತದೆ. ಎಂಬುದಾಗಿ ಸುಪ್ರೀಂ ಕೋರ್ಟಿನಲ್ಲಿ ತೀರ್ಪು ಆಗಿದ್ದರೂ, ಬೆಂಗಳೂರು ಲೇಬರ್ ಕೋರ್ಟಿನಲ್ಲಿ ತೀರ್ಪು ಆಗಿದ್ದರೂ ಅವರ ಮೇಲೆ ಇನ್ನೂ ಎಷ್ಟೋ ಅನ್ಯಾಯಗಳು ನಡೆಯುತ್ತಲೇ ಇವೆ. ಅಧಿಕಾರಿಗಳ ಅನ್ಯಾಯಗಳಿಂದ ರಕ್ಷಣೆಯನ್ನು ಅವರಿಗೆ ಕೊಡುವುದಕ್ಕೆ ಈ ಸರ್ಕಾರ ತಯಾರಾಗಿಲ್ಲವೆಂದು ಹೇಳಿದರೆ ನನಗೆ ಬಹಳ ಶೋಚನೀಯ ಅನ್ನಿಸುತ್ತದೆ.

ಕೋ-ಆಪರೇಟೀವ್ ಸರ್ಕಾರಿನಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಕಾರ್ಮಿಕ ಶಾಸನಗಳು ಲಾಗೂ ಆಗಬಾರದೆಂದು ನಮ್ಮ ಸಹಕಾರ ಖಾತೆಯ ಸಚಿವರು ಒಂದು ಅಭಿಪ್ರಾಯಕ್ಕೆ ಬಂದಿದ್ದಾರೆ.

ಹಿಂದೆ ಒಂದಾವರ್ತಿ ಒಂದು ಖಾಸಗಿ ಮಸೂದೆಯನ್ನು ಈ ಬಗ್ಗೆ ಶ್ರೀ ಎಂ.ಎಸ್. ಕೃಷ್ಣನ್‌ರವರು ಈ ಸಭೆಯ ಮುಂದೆ ಮಂಡಿಸುವುದಕ್ಕೆ ಇವರು ಆಕ್ಷೇಪಣೆ ಎತ್ತಿದ ಅಂಶವನ್ನು ನಾನೀಗ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಈ ಕಾನೂನು ರೀತ್ಯ ಅವರಿಗೆ ರಕ್ಷಣೆ ಕೊಡುವುದಕ್ಕೆ ನಮ್ಮ ಸರ್ಕಾರ ತಯಾರಿಲ್ಲ. ಆದಷ್ಟು ಬೇಗ ಸರ್ಕಾರ ತನ್ನ ಈ ಧೋರಣೆಯನ್ನು ಬದಲಿಸಬೇಕು.

ಶ್ರೀ ಡಿ. ದೇವರಾಜ ಅರಸ್.—ತಾವು ಏಕೆ ಹಾಗೆ ಹೇಳುತ್ತಿದ್ದೀರಿ ?

ಶ್ರೀ ಬಿ. ಬಿ. ಕಕ್ಕಿಲಾಯ.—ಈ ದಿವಸ ನೂತನರು ಕಾರ್ಮಿಕರು ಎಲಕ್ಟ್ರಿಸಿಟಿ ಬೋರ್ಡ್ ಟ್ರಾನ್ಸ್‌ಪೋರ್ಟ್‌ಸರ್ವಿಸ್, ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ವಾಟರ್ ವರ್ಕ್ಸ್ ಮತ್ತು ವಾಟರ್ ಆಂಡ್ ಸಿವರೇಜ್ ಬೋರ್ಡ್‌ಗಳಲ್ಲಿ ದುಡಿಯುತ್ತಿದ್ದಾರೆ. ಕಾನೂನು ಪ್ರಕಾರ ಅವರಿಗೆ ರಕ್ಷಣೆ ಕೊಡುವುದಕ್ಕೆ ಸರ್ಕಾರ ತಯಾರಿಲ್ಲ ಅಂದರೆ ಏನು ಹೇಳಬೇಕು ? ಮಾನ್ಯ ಮಂತ್ರಿಗಳು ಇದೇ ವಿಚಾರದಲ್ಲಿ ತಮ್ಮ ಕೈಕೆಳಗಿರತಕ್ಕ ಅಧಿಕಾರಿಗಳಿಗೆ ಬರೆದಿರತಕ್ಕ ಕಾಗದದಲ್ಲಿ ಈ ವಿಚಾರವನ್ನು ತಿಳಿಸಿದ್ದಾರೆ. ಬೇಕೆಂದರೆ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಆದರ ನಕಲನ್ನು ತೋರಿಸಬಲ್ಲೆ. ಹೀಗೆ ಅನ್ಯಥಾ ಪ್ರಚೋದನೆಯನ್ನು ಮಾಡುವುದು ಸರಿಯಲ್ಲ. ನಾನು ಈಗ ಈ ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅವರು ಈ ಅಪಾಯದ ಪರಿಹಾರದ ಬಗ್ಗೆ ಒಂದು ಸೂಕ್ತ ಪರಿಹಾರವನ್ನು ಕಂಡುಹಿಡಿದು ಇದನ್ನು ಬೇಗ ತೀರ್ಮಾನ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† Smt. SUMATHI B. MADIMAN (Dharwar Rural).—Mr. Deputy Speaker, Sir, I support the motion of thanks on the Governor's address. I would like to place before this House a few suggestions. First of all I would like to say something about the unpredictable natural calamities and the drought which have been faced by some of the Districts of our State. Surely these are the challenges which our Government have to face them and they have faced them ably. We have been patiently hearing a lot of criticism from the opposition. I do not say that opposition members should not criticise; but while criticising one should always give constructive and healthy criticisms so as to help the other people to be on the right path if they have gone wrong. But sometimes we hear so much that one would feel that we have not done anything at all. I can surely say that Government has taken steps to mitigate the hardship of people who have become the victims of drought; and the way the individuals and instititutions that have participated in the relief fund is enough proof to show that the Government has surely taken all measures to help the scarcity and drought-hit areas. We will welcome the criticism from the Opposition but we would also be happy to hear once a while a little appreciation of what good has been done. I do not say that whatever they have done is good because a human being may be bad but he is not so as is made out. So far we have never heard of piece of appreciation from the opposition members. But I do feel that a little appreciation on your part would help us a great deal in meeting the situation. After all, we have to work with co-operation. This unpredictable natural calamity has over taken us. We have spent much of our time in criticising each other on the floor of this House. Instead of indulging in criticism, we can really do something conrete to afford relief to the people. That is what I earnestly feel about it. I am sure the other hon. Members will also agree with me.

(SMT. SUMATHI B. MADIMAN)

We hear day in and day out that the Government has not done this or done that ; but why don't you tell the Government what they should do. I am sorry to observe that today morning some members were shouting at each other. This has pained me very much. I think I am not using any unparliamentary language. I think I am not trying the patience of others.

SRI H. D. DEVE GOWDA.—Your language is quite sweet and we would like to hear you.

SMT. SUMATHI B. MADIMAN.—I am glad that the Opposition Leader is prepared to listen to me. First of all, I would like to say that the change of the name of our State as Karnataka has helped us to come nearer. By this change, even a common man is very happy about it. We will no longer be called as Bombay-Karnatak people. Hereafter we all feel one. Some hon. Member while speaking gave an example of Andhra and stated that the incidents of Andhra might happen in our State also. I may tell him that we will never lose the sense of loyalty to our State and we will not follow the example of Andhra Pradesh. The Andhras are marching towards their own destruction. You are all seasoned politicians. The common sense tells that whatever is going on in Andhra it is nothing but a power-politics. Do not think for a moment that since we have not implemented our policies, the people are aganist us. We are doing our best and trying to implement our policies and programmes. In the implementations of some of our policies, we find some obstacles. I take this opportunity to appeal to the members of the opposition to be co-operative with us.

In the annual plan of our State for 1973-74, the allocations of funds to agricultural programmes, co-operation, major irrigation, for the welfare of the people and more so for the backward classes are more than what was allocated in 1972-73. This is surely a sign of progress. The approach of the State to the Five Year Plan has been finalished and priority has been given to irrigation and power. Priorities have also been given to increase agricultural and industrial production in the State. In order to increase and to preserve the agricultural production, I would like to suggest that marketting facilities should be provided to the farmers who grow vegetables. They should also be directed to grow varieties of vegetables because if the market is flooded with the same kind of vegetables, it is disadvantageous to the farmers. At the same time, these farmers in towns and citie must be provided with preservatives so that the fruits which they grow could be preserved. By this way, we do not waste the food which is so badly needed in our country.

5-00 P. M.

At the same time I feel training in horticulture should be given to women so that they can encourage kitchen gardens. The House wives should take interest in growing vegetables and fruits. I am sure the women will take more interest and sincerely co-operate in growing more food because they always deal with the food from morning to night. The idea of substantial support from the Government for starting the Milk Dairy at Mysore and for the procurement of milk programme is a very good one. This will help the smaller dairies and the people who want the supply of good milk. I would further suggest that technical and Poytechnic Schools should be started for men and women and they should be trained in plumbing, backery, electronics etc. Now-a-days the bread forms the major part of the food and even the villagers have cultivated the habit of using the Modern Bread. The private people are not preparing bread in a hygeinic way. Therefore hygeinic bread-making should be taken up. If our boys are trained in this, they will take up this bread-making in a scientific way.

It makes us happy to say that construction of cheap housesu has been taken up on 3 lakh sites distributed to landless rural agricoltu-rists. It is a big project which is going to help lakhs of pesple. It would certainly go a long way to help the poorer section of the people and the Government deserves congratulations in this regard. This is a wise plan, and I am sure the Government will definitely succeed in its attempt. I thank the Hon. Speaker for having given me an opportunity to speak for a few minutes on the motion of thanks.

† SRI P. A. PAWASHE (Uchagaon).—I am on my legs to speak on the motion of thanks. At the very outset I would like to say that certain matters agitating the minds of the people of the border areas have not been referred to in the Governor's Address. My first griev-ance is that His Excellency the Governor ought to have taken into consideration the feelings of the Marathi speaking people in the border areas and ought to have referred the same in his address. As a result of the S.R.C. report the marathi speaking areas of Bombay and Hyderabad State have been included in the Mysore State. Though these areas are contiguous to the State of Maharastra they are included in this State and injustice has been done to the people of these areas. The people of these areas are agitating and fighting for their rights to get this problem solved for the last 17 years. But no Government has taken into consideration their difficulties and no Government is prepared to solve their problems sympathetically. No Government has come forward to solve this problem. Both in Maha-rastra and in Mysore the Congress 'R' is in power at present. I therefore suggest that the Chief Ministers of both these States to come together and solve this problem on the basis of Patasker formula taking into consideration the village as a unit, the geographical

(SRI P. A. PAWASHE)

contiguity, relative majority and wishes of the people, so that injustice may not be caused to the people of these States.

I would like to say that the previous Governments have completely neglected these areas. There are no roads, no drinking water wells and no sufficient number of schools for children. Even the minor irrigation works have not been taken up. This is one of the important items of works which ought to have been taken up by the Government. If these minor irrigation works are not taken up and completed, you can just imagine the plight of the people of these areas. You can very well understand the mind of the Government about taking care of the people of these areas. I would therefore request this Government to change its attitude in this regard and meet the immediate requirements of the people so long as we are here in the Mysore State. We are entitled for developmental works in these areas just as in any other parts of the State. It is our legitimate right to demand the Government to take up developmental works in our area.

The second point I would like to bring to the notice of the Government is about the drought conditions. Due to the failureof rains in several parts of the State there is drought and the Government is trying its best to fight the famine conditions. Taking into consideration the intensity of the problem I would like to submit that the measures taken by the Government are not sufficient and adequate. The Governor's address does not contain any reference of measures of permanent nature. The Government will have to fact this grave problem in a more befitting manner. One more thing I would like to bring to the notice of the Hon. House is about the appointment of One-Man Commission. This House during the asth sitting has appointed One-Man Commission to survey the conditionls in the drought affected areas. Sri Arumugam was appointe l as One-Man Commission to have a survey of the areas and to submit a report to the House. He had surveyed some of the areas which are affected and made some recommedations. I do not know why the Government has not made any reference about these recommendations of the Commission in the Governor's Address. In the drought affected areas Gov ernment is spending a lot of money to give relief to the affected people. I want to suggest that they must see that the money spent in these areas is utilized properly and no scope is given to corrupt officers and anti-social elements to exploit the situation.

Then one more point I would like to say is that his Excellency the Governor has not made any reference or has not mentioned anything about the rising prices of essential commodities. These are commodities which are required by the common man and their prices are shooting up every day. The Government say that the drought condition is the main reason for spiralling of prices. In my opinion it is not the only reason. There are black marketeers, smugglers,

and hoarders responsible for the rising of prices. It is they who are sucking the blood of the poor people. The Government should take coercive measures against such people and see that they are punished. The Government must also see that a certain price level is maintained so that the common man is not affected in getting the essential commodities at reasonable prices.

As regards corruption no reference has been made in the Address of the Governor. It is a well known fact that corruption is rampant in almost all the Departments. When the Government is anxious to implement its policies and programmes for the benefit of the poor, the corrupt officials may not allow the people to have the fruits of the programmes to the extent desired. Therefore the Government must see that corruption in eradicated from all the Departments of the Government.

I would like to make one more suggestion regarding the developmental works. Construction of School Buildings and N.R.W.S. works are being taken up only when the village contribution is paid. It should not be made applicable to the villages where poor people live. Whenever certain works are taken up in cities like building of universities or colleges, there is no local contribution by the people. When that is the case why should the poor population living in the villages be taxed ? Government should see that these school buildings, drinking water wells and N.R.W.S. Schemes are taken up at the full cost of the Government.

I thank the Chair for giving me time to say these few words.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ನಾನು ಒಂದು ಕೋಚನೀಯ ಸ್ಥಿತಿಯನ್ನು ಹೇಳಿಕೊಳ್ಳದಿದ್ದರೆ ಬೇರೆ ಮಾರ್ಗವಿಲ್ಲ. ಏನೆಂದರೆ, ಮಾನ್ಯ ಸದಸ್ಯರುಗಳು ಭಾಷಣ ಮಾಡತಕ್ಕಂಥ ಸಮಯದಲ್ಲಿ ಸರ್ಕಾರದ ಪರವಾಗಿ ಯಾರೂ ಕೂತುಕೊಂಡು ಆಲಿಸದೆ ಇದ್ದರೆ ಯಾರಿಗೆ ನಾವು ಹೇಳಬೇಕು ? ಮೂಕರಿಗೆ ಹೇಳಬೇಕೋ, ಖುರ್ಚಿಗೆ ಹೇಳಬೇಕೋ, ಯಾರಿಗೆ ಹೇಳಬೇಕೋ ಗೊತ್ತಿಲ್ಲ. ಇದಕ್ಕಿಂತ ಅನಹ್ಯ, ನಾಚಿಕೆ ಪಡತಕ್ಕಂಥಾದ್ದು ಎಲ್ಲಯೂ ಇಲ್ಲ. ಪ್ರಜಾಪ್ರಭುತ್ವದಲ್ಲಿ ನಾವು ಚುನಾಯಿತರಾಗಿ ಬಂದಿದ್ದೇವೆ, ನಾವು ಹೇಳತಕ್ಕ ಮಾತಿಗೆ ಜವಾಬ್ದಾರಿ ಇದೆಯೆಂದು ಸರ್ಕಾರದ ವತಿಯಿಂದ ಯಾರೂ ಕೂತುಕೊಂಡು ಕೇಳುವುದಕ್ಕೆ ಸಿದ್ಧರಿಲ್ಲ ಎಂದರೆ ಸರ್ಕಾರವನ್ನು ಬಿಟ್ಟು ಹೋಗಬೇಕು. ಈ ಸದನಕ್ಕೆ ಎಷ್ಟು ಹಣ ಖರ್ಚಾಗುತ್ತಾ ಇದೆ, ಎಷ್ಟು ಸಮಯವನ್ನು ಹಾಳ ಮಾಡುತ್ತಾ ಇದ್ದೇವೆ, ನಾವು ಏನೇನು ಹೇಳುತ್ತಿದ್ದೇವೆ ಅದನ್ನು ಬರೆದುಕೊಂಡು ಅದಕ್ಕೆ ಸಂಬಂಧಿಸಿದ ಉತ್ತರವನ್ನು ಹೇಳದಿದ್ದರೆ ಏತಕ್ಕೋಸ್ಕರ ನಾವು ಇಲ್ಲಿ ಕೆಲಸ ಮಾಡಬೇಕು ? ಅವರಿಗೆ ಬೇರೆ ಕೆಲಸ ಇದ್ದರೆ ಮಾಡಿಕೊಳ್ಳಲಿ, ಈ ಸದನವನ್ನು ಏತಕ್ಕೆ ಕರೆಯಬೇಕು ? ಸನ್ಯರು ಹೇಳತಕ್ಕದ್ದು ಪುಸ್ತಕದಲ್ಲಿದ್ದು, ತಾವು ಒಂದು ರೀಡಿಂಗ್ ಕೊಟ್ಟರೆ ಏನು ಬಂತು ? ಇವತ್ತು ಇಲ್ಲಿ ಇರುವುದು ಏನು ? ನಾಟಕ. ಜನ ಇದನ್ನು ನೋಡಿದರೆ ನಗುತ್ತಾರೆ. ಇಷ್ಟು ನಗೆಪಾಟಲು ಮಾಡಿದ ಪರಿಸ್ಥಿತಿ ಈ ಸರ್ಕಾರದಿಂದ ಬಂತು. ಯಾರಿಗೆ ಹೇಳಬೇಕು, ತಮಗಂತೂ ಬಿಡಲಾರದ ಸಂಕಟ ಏನೂ ಮಾಡುವುದಕ್ಕಾಗುವುದಿಲ್ಲ. ಈ ಸ್ಥಿತಿಯಲ್ಲಿ ಇದ್ದರೆ ನಮಗಂತೂ ಕೂತುಕೊಂಡು ಕೆಲಸ ಮಾಡುವುದಕ್ಕಾಗುವುದಿಲ್ಲ. ಮಂತ್ರಿಗಳಿಗೆ ಜ್ಞೇರೆ ಕೆಲಸ ಉತ್ತಮವಾಗಿದ್ದರೆ ಅದನ್ನು ಹೇಳಿಬಿಡಲಿ ಪುರಸೊತ್ತು ಆದಾಗ ಬರಲಿ, ಸುಮ್ಮನೆ ನಾವು ಇಲ್ಲಿ ಒದರೋದು ಎಕೆ ?

Sri D. B. KALMANKAR.—Mr. Deputy Speaker, I have got one observation to make. Of course, the hon. Member is known to this House. But what I submit is that it is sufficient even if there is one

(SRI D. B. KALMANKAR)

Minister or two Ministers. Even in the past this has been the convention. There are two or three Ministers who are following the proceedings. When this is the case, I think there is not much force in what Mr. Thimmappa has said.

Mr. DEPUTY SPEAKER.—I have understood the point.

ಶ್ರೀ ಕೆ. ಎಂ. ನಾಗಣ್ಣ.—ಮಾನ್ಯ ಸದಸ್ಯರಾದ ತಿಮ್ಮಪ್ಪನವರು ಸಂಕಟದಿಂದ ಹೇಳಿದ್ದಾರೆ ಅವರು ಏನು ಏನು ಕಷ್ಟಗಳನ್ನು ಹೇಳಿದರೂ ಅದನ್ನು ಗಮನಿಸುವ ತಾಳ್ಮೆ ಕೂಡ ಮಂತ್ರಿಗಳಿಗೆ ಇಲ್ಲ. ನಾನೂ ಸಹ ಬಹಳ ನೊಂದು ಹೇಳುತ್ತೇನೆ ; ಮತ್ತು ಅವರು ಹೇಳಿದ್ದನ್ನು ಒಪ್ಪುತ್ತೇನೆ. ಆದರೆ ಒಂದು ವಿಷಯ ತಮ್ಮ ಮೂಲಕ ಹೇಳುತ್ತೇನೆ, ಯಾರು ಯಾರು ಸದಸ್ಯರು ಸರ್ಕಾರದ ಮೇಲೆ ಆಕ್ಷೇಪಣೆ, ದೋಷಾರೋಪಗಳನ್ನು ಮಾಡಿದ್ದಾರೆ ಎನ್ನುವುದು ಗೊತ್ತಿದೆ, ಸರ್ಕಾರದ ಪರವಾಗಿ ಜವಾಬು ಕೊಡುವಾಗ ಎಲ್ಲ ಸದಸ್ಯರಿಗೂ ಜವಾಬು ಕೊಡಬೇಕು ; ಕೊಡದೆ ಹೋದರೆ ಬಿಡುವುದಿಲ್ಲ.

Sri J. P. SARWESH.—I would like to bring to the notice of the Chair that there is the Legislative Council also running and the Hon. Ministers have to attend that House also.

ಶ್ರೀ ಎಡ್. ಡಿ. ದೇವೇಗೌಡ.—ತಾವು ಈ ಸಭೆಯಲ್ಲಿ ಮಂತ್ರಿಗಳು ಇರಬೇಕಾದ ಅವಶ್ಯಕತೆ ಇದೆ ಎಂದು ತೀರ್ಪನ್ನು ಕೊಟ್ಟಿರಿ. ಮಂತ್ರಿಗಳು ಇಲ್ಲಿ ಇದ್ದಾರೆ ಅಥವಾ ಮಂತ್ರಿಗಳಿಲ್ಲ ಎಂದು ನನ್ನ ಮಿತ್ರರಾದ ತಿಮ್ಮಪ್ಪನವರು ಆಕ್ಷೇಪಣೆ ಎತ್ತಲಿಲ್ಲ, ಆದರೆ ಸದಸ್ಯರು ಹೇಳತಕ್ಕ ಕೆಲವು ಬಹಳ ಮುಖ್ಯವಾದ ಅಂಶಗಳನ್ನು ಗುರುತು ಹಾಕಿಕೊಂಡು ಸರ್ಕಾರ ಉತ್ತರಕೊಡುವುದು ಒಳ್ಳೆಯದು. ವಿರೋಧ ಪಕ್ಷದವರು ಹೇಳಿದ್ದನ್ನು ಗುರುತು ಹಾಕಿಕೊಳ್ಳುವುದಲ್ಲ, ಯಾವ ಪಕ್ಷದವರೇ ಆಗಿರಲೀ ಅವರ ಉತ್ತಮ ಸಲಹೆಗಳನ್ನು ಸರ್ಕಾರದ ಗಮನಕ್ಕೆ ತಂದಾಗ ಅದಕ್ಕೆ ಸರಿಯಾದ ಉತ್ತರ ಕೊಟ್ಟರೆ ಅನುಕೂಲವಾಗುತ್ತದೆ. ಆ ಬಗ್ಗೆ ಎಲ್ಲಾ ವಿವರಗಳನ್ನು ತಗೆದುಕೊಂಡರೆ ಒಳ್ಳೆಯದು. ಆದರೆ ಇಲ್ಲಿ ಏನಾಗಿದೆ ಎಂದರೆ, ಮಂತ್ರಿಗಳಿದ್ದರೆ ಸಾಕಾಗುವುದಿಲ್ಲ, ಈ ಸಭೆಯಲ್ಲಿ ನಡೆಯತಕ್ಕ ಕಾರ್ಯಕರಾಪಗಳ ಬಗ್ಗೆ ಗುರುತು ಹಾಕಿಕೊಳ್ಳುವ ಪ್ರವೃತ್ತಿ ಕಾಣುತ್ತಾ ಇಲ್ಲ. ಮಾನ್ಯ ಶಂಕರ್ ಅಳ್ವ ಅವರು ಅವರ ಹತ್ತಿರ ಹೈಲುಗಳನ್ನು ಇಟ್ಟುಕೊಂಡಿದ್ದಾರೆ, ಬಹುಶಃ ಅವು ಅವರ ಇಲಾಖೆಗೆ ಸಂಬಂಧಪಟ್ಟ ಹೈಲುಗಳು ಇರಬಹುದು. ಪರಿಸ್ಥಿತಿ ಏನಾಗಿದೆ ಎಂದರೆ, ಇಲ್ಲಿ ನಡೆಯತಕ್ಕ ಕಾರ್ಯಕರಾಪಗಳನ್ನು ರಿಪೋರ್ಟರ್ಸ್ ಗುರುತು ಹಾಕಿಕೊಳ್ಳುತ್ತಾರೆ ; ನಾಳೆ ಮುಖ್ಯ ಮಂತ್ರಿಗಳು ಎಕ್ಸ್‌ಟೆಂಪೋರ್ ಸ್ಪೀಚ್ ಮಾಡಬಹುದು ಯಾವ ವಿಷಯಕ್ಕೆ ಸಂಬಂಧಪಟ್ಟ ಚರ್ಚೆ ಮಾಡುತ್ತೇವೆ. ಆ ವಿಷಯದ ಕಡೆ ಇವರ ಗಮನ ಇಲ್ಲ ಎಂದು ನಮ್ಮ ಮಿತ್ರರು ವಿಷಾದದಿಂದ ಹೇಳಿದ್ದಾರೆ. ಅವರ ಮನಸ್ಸು ನೊಂದು ಹೇಳಿದ್ದಾರೆ. ದಯಮಾಡಿ ಈ ವಿಷಯದ ಬಗ್ಗೆ ಸರ್ಕಾರಕ್ಕೆ ತಾವು ಆದೇಶ ಕೊಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎ. ಶಂಕರ್ ಅಳ್ವ (ಸಹಕಾರ ಶಾಖೆಯ ಮಂತ್ರಿಗಳು).— ನಾನು ತಮ್ಮ ಕೂಡ ಅರಿಕೆ ಮಾಡಿಕೊಳ್ಳುವುದು, ಪ್ರತಿಯೊಂದು ಮುಖ್ಯ ಅಂಶಗಳನ್ನು ಮಾನ್ಯ ಸದಸ್ಯರು ಭಾಷಣದಲ್ಲಿ ಏನು ಹೇಳುತ್ತಾರೆ, ಆದಕ್ಕೆ ಮುಖ್ಯವಾಗಿ ಜವಾಬು ಕೊಡುತ್ತೇವೆ. ಆದರೆ ಇದೇ ರೀತಿಯಲ್ಲಿ ಬರೆದು ಕೊಳ್ಳಬೇಕು. ಇಷ್ಟೇ ಮಂತ್ರಿಗಳು ಇರಬೇಕು ಎನ್ನುವ ಅಗತ್ಯವಿಲ್ಲ. ಉತ್ತರ ಕೊಡುವಾಗ ರೆಫ್ಯೂ ಮಾಡುತ್ತೇವೆ, ಮಾನ್ಯ ನಾಗಣ್ಣನವರು ಏನಾದರೂ ಬಿಟ್ಟು ಹೋಗಿದ್ದರೆ ಉತ್ತರ ಕೊಡಬೇಕು ಎಂದು ಹೇಳಿದರು, ಮಾನ್ಯ ಸದಸ್ಯರು ಹೇಳಿರತಕ್ಕ ವಿಷಯಗಳಿಗೆ ಕೆಲವು ಕಡೆ ಉತ್ತರ ಕೊಡುವುದು ಬಿಟ್ಟು ಹೋಗಬಹುದು, ಅಂಥ ಸಂದರ್ಭದಲ್ಲಿ ಯಾರು ಸವಾಲನ್ನು ಎತ್ತಿದ್ದಾರೆ ಅವರು ಉತ್ತರ ಕೊಡಲಲ್ಲ ಎಂದರೆ ಅದಕ್ಕೆ ಉತ್ತರ ಕೊಡುತ್ತೇವೆ. ಪ್ರತಿ ದಿವಸ ಮಂತ್ರಿಗಳು ಇಷ್ಟೇ ಜನ ಇರಬೇಕು ಎಂದರೆ, ಆದಷ್ಟು ಜನ ಮಂತ್ರಿಗಳು ಇಲ್ಲಿ ಕೂತುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಗಮನಕೊಡುವುದಿಲ್ಲ ತಮಾಷೆಯಿಂದ ಇದ್ದೇವೆ ಎಂದು ಯಾರೂ ಭಾವಿಸಬಾರದು. ಅವರು ಎಷ್ಟು ಸೀರಿಯಸ್ ಇದ್ದಾರೆ, ಅಷ್ಟು ನಾವೂ ಸೀರಿಯಸ್ ಆಗಿ ಇದ್ದೇವೆ.

Mr. DEPUTY SPEAKER.--I have understood him. Even while the hon. member was rising, I had very well known what he had in mind. Yesterday also, he was trying to raise it. At that time some Ministers came inside. What Mr. Thimmappa has said to-day is something different from what he raised the other day, that the Ministers were not present. That day, the hon. Members on this side wanted the presence of the Ministers and the Minsters who are present should also be attentive to feel the warmth and vigour and pulse and the force of the arguments which the hon. Members were making about their constituencies and about developments and so many other things. What the hon. Member has raised to-day is - as Mr. K. Puttaswamy also rightly said the other day - the Minister must be present, his ears must be attentive and hearts must be open to listen to all the things that have been mentioned. As the hon. Member Sri Puttaswamy rightly said, the Minister may be present, but if, he is not attentive what is the use of it? I fully subscribe to the view and respect the sentiments of the hon. Members and I do again state what I said the other day that the Ministers must be present and they must be attentive to listen to the force and vigour of the arguments so that may it help them to pursue and make use of the arguments, and the purpose of the speeches is served and they are made use of in the interests of the people of the State.

ಶ್ರೀ ಗಟ್ಟಿಚಂದ್ರಶೇಖರ್ (ಗುಬ್ಬಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಮ್ಮ ಸರ್ಕಾರದ ಪ್ರಗತಿಪರ ನೀತಿ, ಧೋರಣೆಗಳನ್ನು ಉಲ್ಲೇಖಿಸಿರುವುದರಿಂದ ಅದನ್ನು, ಹೆಮ್ಮೆಯಿಂದ ಅನುಮೋದಿಸುತ್ತೇನೆ. ಈ ವಿಧಾನಸಭೆಗೆ ನಾನು ಪ್ರಥಮವಾಗಿ ಚುನಾಯಿಸಿ ಬಂದಿರತಕ್ಕವನು. ಆದರೆ ಹಿಂದೆ ನಡೆದಿರತಕ್ಕಂಥ ವಿಧಾನ ಸಭೆಯನ್ನು ಆಗಾಗ್ಗೆ ಬಂದು ನೋಡತಕ್ಕಂಥ ಕಾಲದಲ್ಲಿ, ವಿರೋಧಪಕ್ಷದಲ್ಲಿ ಸನ್ಮಾನ್ಯ ಗೋಪಾಲಗೌಡರು, ಎಸ್. ಎಂ. ಕೃಷ್ಣ ಅವರು, ಎಚ್. ಎಂ. ಚೆನ್ನಬಸಪ್ಪನವರು ಮತ್ತು ಎಚ್. ಸಿದ್ದವೀರಪ್ಪನವರು ಇನ್ನೂ ಕೆಲವರು ಕೂತುಕೊಳ್ಳುತ್ತಿದ್ದರು. ಅವರ ಭಾಷಣಗಳನ್ನು ಕೇಳುವುದಕ್ಕೆ ಪ್ರತಿಯೊಬ್ಬ ಮಂತ್ರಿಗಳೂ ಸಭೆಯಲ್ಲಿ ಕೂತುಕೊಳ್ಳುತ್ತಿದ್ದರು. ಕಾರಣ ವಾದರೂ ಇಷ್ಟೆ. ಅವರು ವಿರೋಧಪಕ್ಷದವರು ಆದರೂ, ಸರ್ಕಾರದ ನೀತಿಯನ್ನು ಮತ್ತು ಮಂತ್ರಿಗಳನ್ನು ಕರುಳು ಕತ್ತರಿಸುವ ರೀತಿಯಲ್ಲಿ ಮಾತನಾಡುತ್ತಿದ್ದರು. ಆದರೆ ಒಳ್ಳೆಯ ಘನತೆ ಗಾಂಭೀರ್ಯ ಅವರ ಭಾಷಣಗಳಲ್ಲಿ ಇರುತ್ತಿತ್ತು. ಹಾಗೆ ಮಾತನಾಡತಕ್ಕವರು ಈಗಲೂ ಕೆಲವರು ಇದ್ದಾರೆ, ಇಲ್ಲ ಎಂದು ಅಲ್ಲ. ಆದರೂ ಸಾಮಾನ್ಯವಾಗಿ ಇಲ್ಲಿ ವಾತಾವರಣ ನೋಡಿದರೆ ಸಾಮಾನ್ಯ ಜನ ಏನು ವಿಧಾನಸಭೆ ಈ ಮಟ್ಟದಲ್ಲಿ ಕೆಲಸಮಾಡುತ್ತಾ ಇದೆ, ಎನ್ನತಕ್ಕ ಒಂದು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಇದರಲ್ಲಿ ಅನೇಕರು ಹಿರಿಯ ಸದಸ್ಯರು ಇದ್ದಾರೆ. ಇವರೆಲ್ಲ ರನ್ನೂ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಯಾವುದೇ ಟೀಕೆ ಅವರು ಮಾಡಲಿ ಸಭೆಯ ಘನತೆ ಗೌರವಕ್ಕೆ ಸರಿಯಾಗಿ ಅಂದರೆ 'ನುಡಿದರೆ ಮುತ್ತಿನಂತೆ ಇರಬೇಕು, ನುಡಿದರೆ ಮಾಣಿಕ್ಯದಂತೆ ಇರಬೇಕು, ನುಡಿದರೆ ಸ್ಪಟಿಕದ ಸಲಾಖೆಯಂತೆ ಇರಬೇಕು' ಎಂದು ಹೇಳಿದಂತೆ ಆ ರೀತಿ ಗಂಭೀರವಾದ ವಾತಾವರಣವನ್ನು ಕಲ್ಪಿಸಬೇಕೆಂದು ಎಲ್ಲರಿಗೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ಸ್ವಾತಂತ್ರ್ಯ ಬಂದು 25 ವರ್ಷವಾದರೂ ಅನೇಕ ಹಳ್ಳಿಗಳಿಗೆ ಬಾವಿ ಇರಲಿಲ್ಲ, ರಸ್ತೆಗಳಿರಲಿಲ್ಲ, ಎಲೆಕ್ಟ್ರಿಕ್ ಲೈಟ್ ಇರಲಿಲ್ಲ ಅಂಥಾದ್ದರಲ್ಲಿ ನಮ್ಮ ಸರ್ಕಾರ ಬಂದಮೇಲೆ.....

ಶ್ರೀ ಎಚ್. ಡಿ. ದೇವೇಗೌಡ.—ಕ್ಯಾಬಿನೆಟ್ ರೀಶಫಲ್ ಆಗುತ್ತದೆಯೇ? ತಮಗೆ ಅಲ್ಲಿ ಸ್ಥಾನ ಸಿಕ್ಕುವ ಆವಕಾಶ ಇದೆಯೇ?

ಶ್ರೀ ಗಟ್ಟಿ ಚಂದ್ರಶೇಖರ್.-ನತ್ಯವನ್ನು ನತ್ಯ ಎಂದು ಹೇಳುವುದನ್ನು ದಯವಿಟ್ಟು ಕಲಿಯಬೇಕು. ಹಿಂದೆ ಪಿ. ಡಬ್ಲ್ಯೂ. ಡಿ. ಮಂತ್ರಿಗಳು 50 ಮೈಲಿ ರಸ್ತೆ ಯಾವ ತಾಲ್ಲೂಕಿಗೂ ಮಾಡಿರಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಭೂಪಟದಲ್ಲಿ ಇದೆ.

ಶ್ರೀ ಗುಟ್ಟಿ ಚಂದ್ರಶೇಖರ್.—ಪ್ರತಿಯೊಂದು ಊರುಗಳಿಗೂ ಭಾವಿ ಕೊಡಬೇಕು ಎನ್ನುವ ಯೋಜನೆ ಇದೆ. ಜನ ಸಾಮಾನ್ಯರಿಗೆ ಅನುಕೂಲವಾಗತಕ್ಕ ಅನೇಕ ಕಾರ್ಯಗಳನ್ನು ನಮ್ಮ ಸರ್ಕಾರ ಮಾಡಿದೆ.

ಶ್ರೀ ಎಸ್. ಬಂಗಾರಪ್ಪ.—ನೀರಿಲ್ಲದ ಭಾವಿಯೇ !

ಶ್ರೀ ಗುಟ್ಟಿ ಚಂದ್ರಶೇಖರ್.—ಎಲ್ಲಕ್ಕಿಂತಲೂ ಮಹತ್ವಪೂರ್ಣ ಕಾರ್ಯ ಎಂದರೆ ಸೈಟುಗಳ ವಿಂಗಡಣೆ ಮಾಡುವುದರಲ್ಲಿ ನಮ್ಮ ಸರ್ಕಾರ ಬಂದಮೇಲೆ ಬಹಳ ಯಶಸ್ವಿಯಾಗಿ ಜನರಿಗೆ ಹಂಚಿರುವುದರಿಂದ ಎಂಥ ಕ್ರಾಂತಿಕಾರಕ ಬದಲಾವಣೆ ಮಾಡಿದ್ದಾರೆ, ಹಿಂದುಳಿದ ಹರಿಜನ ಗಿರಿಜನರಿಗೆ ಬೇರೆ ಕಾಲೋನಿಗಳನ್ನು ಹಿಂದೆ ಮಾಡುತ್ತಾ ಇದ್ದರು ಕಳೆದ ಅಧಿವೇಶನದಲ್ಲಿ ಆ ರೀತಿ ಮಾಡದಾರದು ಎಲ್ಲಾ ಜನಗಳಿಗೂ ಒಂದುಕಡೆ ಸೈಟುಗಳನ್ನು ಕೊಟ್ಟು ವಾಸ ಮಾಡುವ ಅವಕಾಶ ಕಲ್ಪಿಸಿಕೊಡಬೇಕು ಎಂದು ಸಂಬಂಧಪಟ್ಟ ಡಿಡೀರ್ ಮಂತ್ರಿಗಳಾದ ಬಸವಲಿಂಗಪ್ಪನವರು ಆ ಕೆಲಸಮಾಡಿ ಈಗ ಸುಮಾರು 2 ಲಕ್ಷಕ್ಕೂ ಮೇಲ್ಪಟ್ಟು ನಿವೇಶನಗಳನ್ನು ಬಡವರಿಗೆ ಹಂಚಿದ್ದಾರೆ. ಮತ್ತು ಮುಂದೆ ಮನೆಗಳನ್ನು ಕಟ್ಟಿಕೊಡುವುದಕ್ಕೆ ಕೂಡ ಆಲೋಚನೆ ಮಾಡಲಾಗಿದೆ. ನನಗೆ ಶ್ರೀಮಾನ್ ದೇವೇಗೌಡರ ಮೇಲೆ ಅಭಿಮಾನ, ಅವರು ನಮ್ಮ ಊರಿಗೆ ಭಾಷಣ ಮಾಡುವುದಕ್ಕೆ ಬಂದಿದ್ದರು. ನಾನೂ ಕೇಳುವುದಕ್ಕೆ ಹೋಗಿದ್ದೆ. ಈ ಸರ್ಕಾರ ನಿಮಗೆ ನಿವೇಶನ ಕೊಡುವುದಿಲ್ಲ, ಏನಾದರೂ ಕೊಟ್ಟರೆ ಮೂರು ಅಡಿ ಆರು ಅಡಿ ಸ್ಥಳ ಕೊಡುತ್ತಾರೆಂದು ಹೇಳಿದರು. ಇವೊತ್ತು ನಾವು 2ಲಕ್ಷ ಜನತೆಗೆ ಕೊಟ್ಟಿರುವುದು 0 ಮತ್ತು 40 ಅಡಿ ಸೈಟು.. ಮೂರು ಅಡಿ ಮತ್ತು ಆರು ಅಡಿ ಜಾಗವನ್ನು ಕಳೆದ ಚುನಾವಣೆಯಲ್ಲಿ ಜನತೆ ತಮ್ಮ ಪಕ್ಷಕ್ಕೆ ಕೊಟ್ಟಿದ್ದಾರೆ. ಇದನ್ನು ತಾವು ಮರೆಯಬಾರದು.

ಶ್ರೀ ಎಚ್. ಡಿ. ದೇವೇಗೌಡ.—ಇದನ್ನು ಹೇಳಿಕೊಂಡು ತಿರುಗಿದರೆ ಅದರ ಪರಿಣಾಮ ಏನು ?

ಶ್ರೀ ಗುಟ್ಟಿ ಚಂದ್ರಶೇಖರ್.—ಇವರು ಮಾಡಿದ ತಪ್ಪನ್ನು ತಿದ್ದಿಕೊಂಡು ಸರಿಯಾಗಿ ನಡೆಯದೆ ಹೋದರೆ ಅವರಿಗೆ ಮೂರು ಅಡಿ ಮತ್ತು ಆರು ಅಡಿ ಸ್ಥಳವನ್ನು ಜನತೆ 25 ವರ್ಷಗಳ ನಂತರ ಕೊಟ್ಟಾರೆ ಆ ರೀತಿ ಮಾಡಿದರೆ ನಮಗೆ 5 ವರ್ಷದ ನಂತರ ಕೊಡುತ್ತಾರೆ ಎನ್ನುವುದನ್ನು ಮರೆಯಬಾರದು. ಅದರ ಬಗ್ಗೆ ಬಹಳ ಎಚ್ಚರಿಕೆಯಾಗಿ ಇರಬೇಕು. ಮಿಕ್ಕೊಬ್ಬ ಸದಸ್ಯರು ನಮ್ಮ ಮಂತ್ರಿಮಂಡಲವನ್ನು, ನಮ್ಮ ಪಕ್ಷವನ್ನು ನಾಟಕ ಕಂಪೆನಿಗೆ ಹೋಲಿಸಿದರು ವರ್ಲ್ಡ್ ಈಸ್ ಎ ಸ್ಟೇಜ್ ನಮ್ಮದು ಸುಸಂಸ್ಕೃತಿಯಿಂದ ಕೂಡಿದ ಸುಶಿಕ್ಷಿತ ನಾಟಕ ಮಂಡಲಿ. ಇದು ರಾಜಕೀಯ ನಾಟಕ. ಜನತೆ 25 ವರ್ಷಗಳಿಂದ ಏನು ದೇಶದಲ್ಲಿ ಆಡಳಿತ ನಡೆಸಿದವರು ನಿಮ್ಮ ಪಕ್ಷದ ಸರ್ಕಸ್ ನೋಡಿ ನಿಮಗಿಂತ ನಮ್ಮ ನಾಟಕದ ಕಂಪನಿ ಉತ್ತಮವಾದದ್ದು ಎಂದು ನಮ್ಮನ್ನು ಜನ ಚುನಾವಣೆ ಮಾಡಿದ್ದಾರೆ. ನೀವು ನಮಗೆ ಏನಾಗಿದ್ದೀರಿ ಎಂದರೆ ಹೆಡೆ ತುಳಿದ ಸರ್ಪವಾಗಿದ್ದೀರಿ. ರೋಷ ಮಾತ್ಸರ್ಯದಿಂದ ತುಂಬಿದ್ದೀರಿ. ಈಗ 10 ವರ್ಷಗಳಿಂದ ನಮ್ಮ ಕಂಪನಿ ಸರ್ಕಸ್ ಇತ್ತು, ನಿಜ. ವೀರರಾಮ್ ಪ್ರೈವೇಟ್ ರಿಮಿಟೆಡ್ ಸರ್ಕಸ್ ಬಹಳ ಅದ್ಭುರಿಯಾಗಿ ನಡೆಯುತ್ತಿತ್ತು. ಆ ಸರ್ಕಸ್ ನಲ್ಲಿ ದೊಡ್ಡ ದೊಡ್ಡ ಪ್ರಾಣಿಗಳು ಹುಲಿ, ಸಿಂಹ ಮುಂತಾದವು ಇದ್ದವು. ಆ ಸರ್ಕಸ್‌ನ ಸ್ಥಿತಿ ಹೀಗೆ ಬರುತ್ತದೆ ಎಂದು ನೀವು ತಿಳಿದುಕೊಂಡಿರಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಅದರಲ್ಲಿ ದೇವರಾಜ್ ಅರಸ್‌ರವರ ಪಾತ್ರ ಏನು ! ಭೀಮ ಆಗಿದ್ದಾರೋ, ದುರ್ಯೋಧನ ಆಗಿದ್ದಾರೋ ?

ಶ್ರೀ ಗುಟ್ಟಿ ಚಂದ್ರಶೇಖರ್.—ಅದರೆ ಯಾರು ಇದ್ದರೂ ಆ ಪಾಪ ಎಲ್ಲರಿಗೂ ತಟ್ಟುತ್ತದೆ. ಆಗ ಯಾರು ಆಡಳಿತ ಮಾಡಿದರು ಅವರಿಗೆ ತಟ್ಟುತ್ತದೆ. ಯಾರ ಮನಸ್ಸು ಅದರೂ ಪರಿವರ್ತನೆ ಆದ ಮೇಲೆ ಉತ್ತಮವಾಗುವುದಕ್ಕೆ ಅವಕಾಶ ಇದೆ. ಇದಕ್ಕೆ ನಿದರ್ಶನ :

ವ್ಯಾಸ ಜೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ, ಮಂಡೋದರಿ
ಕಪ್ಪೆಯ ಮಗಳು ಕುಲವನರನಿರಿಭೋ, ಸಾಕ್ಷಾದಗನ್ಯ ಕಟ್ಟಲಿ, ದೂರ್ವಾಸ

ಮಟ್ಟಿಗ, ಕಶ್ಯಪಕಮ್ಮಾರ ಇದರಂತೆ ಮನುಷ್ಯರ ಮನಸ್ಸು ಪರಿವರ್ತನೆ ಆಗಬಹುದು. ತಮ್ಮ ಹಿಂದಿನ ತಪ್ಪನ್ನು ಜೀರ್ಣಿಸಿಕೊಂಡರೆ ಹೊರಿಸಿ ಪರಾಜಿತರಾಗಲು ಪ್ರಯತ್ನಮಾಡಬೇಡಿ. ಕಳೆದ ಚುನಾವಣೆಯಲ್ಲಿ ಇಂದಿರಾ ವಿರುಗಾಳಿಯಲ್ಲಿದ್ದ ಈ ತ್ರೀರಿಂಗ್ ಸರ್ಕಸ್‌ನಲ್ಲಿದ್ದ ಬೆಂಕುಗಳು ಒಡೆದು ಹೋಗಿ ಹೇರಾ ಹಿರಿದು ಹೋಯಿತು. ಇದ್ದಂಥ ಪ್ರಾಣಿಗಳು ಓಡಿ ಹೋಗಿ ಕಾಡು ಪಾಲಾಗಿ, ಈಗ ಅಲ್ಪಸ್ವಲ್ಪ ವಿರೋಧಪಕ್ಷದಲ್ಲಿ ಇದ್ದಾರೆ. ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯು

ಬೇಕಾದರೆ ವಿರೋಧಪಕ್ಷಗಳು ಪ್ರಬಲವಾಗಿರಬೇಕು. ಆದರೆ ದೇಶದ ದುರ್ದೈವದಿಂದ ವಿರೋಧ ಪಕ್ಷಗಳು ಪ್ರಬಲವಾಗಿಲ್ಲ. ಮೈಸೂರು ರಾಜ್ಯದಲ್ಲಿ ನರ್ಕನ್ ಪೈಕಿ ಕೆಲವು ರಿಂಗ್ ಮಾಸ್ಟರ್ಸ್, ಇಬ್ಬರು (* * * *) ಪಾತ್ರದವರು ಉಳಿದುಕೊಂಡಿದ್ದಾರೆ. ನನ್ನದು ತಮ್ಮಲ್ಲಿ ಕಳಕಳಿಯ ಪ್ರಾರ್ಥನೆ ಏನು ಎಂದರೆ ನಮ್ಮ ಸರ್ಕಾರ ಏನು ಒಳ್ಳೆಯ ಕೆಲಸ ಮಾಡುತ್ತದೆ ಅಂಥಹ ಒಳ್ಳೆಯ ಕೆಲಸ ಮಾಡಿದ್ದನ್ನು ಸಹೃದಯದಿಂದ ಹೊಗಳುವುದನ್ನು ಕಲ್ತುಕೊಂಡರೆ ದೇಶ ಖಂಡಿತವಾಗಿ ಮುಂದುವರಿಯುತ್ತದೆ. ಯೂನಿಟಿ ಇನ್ ಡೈವರ್ಸಿಟಿ, ಆ ರೀತಿ ಸಹಕರಿಸುತ್ತೀರಿ ಎಂದು ಪುನಃ ಮನವಿಮಾಡಿಕೊಳ್ಳುತ್ತೇನೆ.

5-30 P.M.

ಮೊನ್ನೆ ದಿವಸ ನಡೆದಂಥ ವಿಚಾರ. 800 ಜನ ಕ್ಷಾಮ ಪ್ರದೇಶದಿಂದ ಇಲ್ಲಿ ಬಂದು ಕಾಳಿತಿದ್ದಾರೆ ಎಂದು ಅನೇಕರು ಸಭಾ ಭವನ ಹಾರಿಹೋಗುವಂತೆ ಕೂಗಿದರು. ಮಾನ್ಯ ಮಂತ್ರಿಗಳಾದ ಚನ್ನಬಸಪ್ಪನವರು ಕುಸ್ತಿಯಲ್ಲಿ ಪಟ್ಟು ಹಾಕುವಂತೆ, ಒಂದು ಪಟ್ಟು ಹಾಕಿದರು. 800 ಜನ ಇರಲಿ ಒಂದು ಸಾವಿರ ಜನ ಇರಲಿ, ಐದು ಸಾವಿರ ಜನ ಇರಲಿ, ಹತ್ತು ಸಾವಿರ ಜನ ಇರಲಿ; ಈ ನಂಜೆಯೊಳಗಾಗಿ ಎಲ್ಲರನ್ನೂ ಬಸ್ಸಿನಲ್ಲಿ ಕಳುಹಿಸುವುದಕ್ಕೆ ಏರ್ಪಾಡು ಮಾಡುತ್ತೇನೆ, ಬರುವವರೆಲ್ಲ ಬರಲಿ ಎಂದು ಸವಾಲು ಹಾಕಿದರು. ಆದರೆ ಬಂದವರು ಕೇವಲ ಒಂದು ನೂರು ಜನ ಮಾತ್ರ. ಇನ್ನೂ ಜನತೆಯನ್ನು ನೋಸ್ ಮಾಡಲು ಸಾಧ್ಯವಿಲ್ಲ. You can fool all the people for some times and some people for all the times, but not all the people at all times.

ಶ್ರೀ ಎಚ್. ಡಿ. ದೇವೇಗೌಡ.—* * * * ಇಂದಿರಾ ಗಾಂಧಿಯವರ ಕಂಪೆನಿಯಲ್ಲಿ ನಾಜೂಕಯ್ಯ ಇದ್ದಾನೆ ಎಂದು ಹೇಳಿದರೆ ಕಷ್ಟವಾಗುತ್ತದೆ.

MR. DEPUTY SPEAKER.—What he said was it is all a drama wherein there are certain actors and heroes. * * * * Anyway, I shall examine the proceedings and if that word is there, I will see that it is expunged.

ಶ್ರೀ ಗುಟ್ಟಿ ಚಂದ್ರಶೇಖರ್.—ವಿರೋಧ ಪಕ್ಷದವರು ನಮ್ಮನ್ನು ನಟ ಭಯಂಕರರಿದ್ದಾರೆ ಮುಂತಾಗಿ ಅನ್ನಬಾರದಷ್ಟೆಲ್ಲ ಹೇಳಿದರು. ನಾನು ಅವರನ್ನು ಸರ್ಕಸ್ಸಿಗೆ ಹೋಲಿಸಿ ಹೇಳಿದೆ ಅಷ್ಟೆ.

ಆಹಾರ ನೀತಿಯ ಬಗ್ಗೆ ಒಂದು ಮಾತು ಹೇಳುತ್ತೇನೆ. ಅಕ್ಕಿ ಬೆಲೆ 225 ರೂಪಾಯಿ ಆಗಿದೆ. ತುಮಕೂರಿನಲ್ಲಿ 175—180 ರೂಪಾಯಿ ಇದ್ದರೆ ಬೆಂಗಳೂರಿನಲ್ಲಿ 225 ರೂಪಾಯಿ ಬೆಲೆ ಇರಬೇಕಾದರೆ ಕಾರಣವೇನು ? ನಮ್ಮ ಸರ್ಕಾರದವರು ಲೆವಿ ಮಾಡುವ ಉದ್ದೇಶದಿಂದ ಜಿಲ್ಲೆಯಿಂದ ಜಿಲ್ಲೆಗೆ ಆಹಾರ ಧಾನ್ಯಗಳು ಹೋಗಬಾರದೆಂದು ಪ್ರತಿಬಂಧಕ ವಿಧಿಸಿರುವುದು ನರಿಯಾಪುದಲ್ಲ. ಇದರಿಂದ ಏನಾಗುತ್ತದೆ ಎಂದರೆ ತುಮಕೂರಿನಲ್ಲಿ ಒಂದು ಲಾರಿ ಅಕ್ಕಿಯನ್ನು ಬೆಂಗಳೂರಿಗೆ ತರುವುದಕ್ಕೆ ಲೆವಿ ಕೊಟ್ಟು ಡೆಪ್ಯೂಟಿ ಕಮಿಷನರಿಂದ ಪರ್ಮಿಟ್ ತೆಗೆದುಕೊಂಡು, ಒಂದೇ ಪರ್ಮಿಟ್‌ನಲ್ಲಿ ಮೂರು ನಾಲ್ಕು ಲಾರಿ ರೋಡ್ ಅಕ್ಕಿಯನ್ನು ಬೆಂಗಳೂರಿಗೆ ತರುತ್ತಾರೆ ಮತ್ತು ಅದನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಾರೆ. ಅಧಿಕಾರಿಗಳು ಇಂಥವರಿಂದ ಲಂಚ ಪಡೆದು ಅವರನ್ನು ಬಿಡುವುದಕ್ಕೆ ಸರ್ಕಾರದ ನೀತಿ ಬಹಳ ಸಹಾಯಕವಾಗಿದೆ. ಅಂತರ ಜಿಲ್ಲಾ ಸಾಗಾಣಿಕೆಯ ಮೇಲೆ ಏನು ಪ್ರತಿಬಂಧಕವಿದೆ ಅದನ್ನು ತೆಗೆದು ಹಾಕಿ, ನಮ್ಮ ರಾಜ್ಯದಿಂದ ಹೊರಗಡೆ ಹೋಗುವುದಕ್ಕೆ ಮಾತ್ರ ಈ ನಿರ್ಬಂಧವನ್ನು ಹಾಕುವುದರಿಂದ ಅಕ್ಕಿ ಮತ್ತು ರಾಗಿ ಧಾರಣೆಗಳು ಇಳಿಮುಖವಾಗುತ್ತವೆ.

ಸಕ್ಕರೆ ವಿಚಾರ ಹೇಳಬೇಕು ಎಂದರೆ, ಸಕ್ಕರೆಯದು ಕೃತಕ ಅಭಾವ. ನರಿಯಾಗಿ ವಿತರಣೆಯಾದರೆ ಅಭಾವವಾಗುವುದಿಲ್ಲ. ನಮ್ಮ ತಾಲ್ಲೂಕಿಗೆ 200 ಮೂಟೆ ಸಕ್ಕರೆ ಬಂದರೆ ಸಾಕಾದಷ್ಟಾಯಿತು. 270 ಮೂಟೆ ಬಂದರೂ ಕೂಡ, ಅದನ್ನು ವಿತರಣೆ ಮಾಡುವುದರಲ್ಲಿ ಇರುವ ನ್ಯೂನತೆಯಿಂದ ಕಾಳಸಂತೆಯಾಗುತ್ತದೆ. ಸಣ್ಣ ಪಳ್ಳಿಗಳಲ್ಲಿ ಒಂದು ಮೂಟೆ ಕೂಡ ಖರ್ಚಾಗುವುದಿಲ್ಲ. ಅಧಿಕಾರಿಗಳಿಗೆ ಲಂಚ ಕೊಟ್ಟು ಅಂಥ ಕಡೆಗಳಿಗೆ ಐದಾರು ಮೂಟೆ ಅಲಾಟ್ ಮಾಡಿಸಿಕೊಂಡು, ಆ ಸಕ್ಕರೆಯನ್ನು ಅದೇ ಊರಿನಲ್ಲಿ ಮಾರುತ್ತಾರೆ. ಈ ಕಾರಣದಿಂದ ಕಾಳಸಂತೆಯಾಗುತ್ತಿದೆ! ಹೋಟಲುಗಳವರಿಗೆ ಸಕ್ಕರೆಯನ್ನು ಕೊಡುತ್ತಿಲ್ಲ. ಕೇಂದ್ರ ಸರ್ಕಾರದವರ ಮೇಲೆ ಒತ್ತಾಯ

**** Words expunged as ordered by the Chair.

(ಶ್ರೀ ಗಟ್ಟಿ ಚಂದ್ರಶೇಖರ್)

ವನ್ನು ತಂದು ಸಕ್ಕರೆಯಲ್ಲಿ ಕಾಳಸಂತೆಯಾಗುವುದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಮಾದೇಗೌಡ (ಬನ್ನೂರು).—ಮಾನ್ಯ ಉಪಾಧ್ಯಕ್ಷರೇ, ಇದೇ ಫೆಬ್ರವರಿ ತಿಂಗಳು 15 ರಂದು ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ಎರಡು ಮಾತನ್ನು ಹೇಳುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಪ್ರಥಮವಾಗಿ ತಮಗೆ ವಂದಿಸುತ್ತ, ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ.

ಪೊಟ್ಟಮೊದಲನೆಯದಾಗಿ ನಾಲ್ಕನೇ ಪುಟದಲ್ಲಿರುವ ಶಾಸನ ನುವ್ಯವಸ್ಥೆಯ ಬಗ್ಗೆ ನಾನು ಅದರ ಔಚಿತ್ಯವನ್ನು ಪ್ರಶ್ನೆ ಮಾಡುತ್ತೇನೆ. ಶಾಸನ ನುವ್ಯವಸ್ಥೆಯ ನಂಬಂಧವಲ್ಲಿ ನಮ್ಮ ರಾಜ್ಯಪಾಲರು ಈ ಸರ್ಕಾರವನ್ನು ಬಹಳವಾಗಿ ಹೊಗಳಿದ್ದಾರೆ. ಬಹುಶಃ ಅವರ ಕರ್ತವ್ಯ ವನ್ನು ಅವರು ಮಾಡಿಹೋಗಿದ್ದಾರೆ. ಆದರೆ ಈ ಶಾಸನ ನುವ್ಯವಸ್ಥೆ ಬಗ್ಗೆ ಅವರು ಹೇಳಿರತಕ್ಕ ಮಾತಿನ ಔಚಿತ್ಯವನ್ನು ನಾನು ಪ್ರಶ್ನೆ ಮಾಡಬೇಕಾಗಿದೆ. ಸರ್ಕಾರದ ಅಧೀನದಲ್ಲಿರುವ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಮತ್ತು ಡೆಪ್ಯುಟಿ ಕಮೀಷನರವರಿಗೆ ಕೈಮಿನರ್ ತಪ್ಪು ಮಾಡಿದ್ದಾರೆಂದು ಕೋರ್ಟಿನಿಂದ ನೋಟೀಸ್ ಜಾರಿಯಾಗಿರುವಾಗ ಅಂಥ ಸರ್ಕಾರದ ಪತಿಯಿಂದ ಶಾಸನ ನುವ್ಯವಸ್ಥೆ ನಮ್ಮ ರಾಜ್ಯದಲ್ಲಿ ಇದೆಯೇ ಎನ್ನುವುದನ್ನು ನಾನು ಪ್ರಸ್ತಾಪ ಮಾಡಬೇಕಾಗಿದೆ.

ಮಾನ್ಯ ಅಧ್ಯಕ್ಷರೇ ಸಾಮಾನ್ಯವಾಗಿ ಪೋಲೀಸ್ ಇಲಾಖೆಯವರು ತಪ್ಪಿತಸ್ಥರನ್ನು ಹಿಡಿದು ಪೋಲೀಸ್ ಪತಿಯಿಂದ ಕೇನುಗಳನ್ನು ಹಾಕತಕ್ಕದ್ದೇ ಬಹಳ ವಿರಳವಾಗಿರತಕ್ಕಂಥಾದಲ್ಲಿ ಪೋಲೀಸ್ ಪತಿಯಿಂದ ಹಾಕಿರತಕ್ಕ ಕೇನುಗಳು ಪೋಲೀಸಿನವರ ಅಜಾಗರೂಕತೆಯಿಂದ ಮ್ಯಾಜಿಸ್ಟ್ರೇಟರಿಂದ ವಜಾ ಆಗಿರತಕ್ಕ ನಂದರ್ಭಗಳು ಬಹಳ ಇವೆ. ಹೀಗಿರುವಾಗೆ ನಮ್ಮ ಸರ್ಕಾರದಲ್ಲಿ ಶಾಸನ ನುವ್ಯವಸ್ಥೆ ಸರಿಯಾಗಿದೆಯೇ ಎಂದು ಪ್ರಶ್ನೆ ಮಾಡಬೇಕಾಗಿದೆ. ಕೋರ್ಟಿನಿಂದ ಸ್ಪೇ ಆರ್ಡರ್ ಕೊಟ್ಟಿರತಕ್ಕ ನಂದರ್ಭದಲ್ಲಿ, ನಂಬಂಧಪಟ್ಟ ಜಮೀನಿನಲ್ಲಿ ಪೋಲೀಸರ ನಹಾಯದಿಂದ ತಾನೀಲ್ದಾರರು ಹೋಗಿ ಆಕ್ರಮ ಪ್ರವೇಶ ಮಾಡಿದ್ದಾರೆ. ಅಂಥವರ ಮೇಲೆ ಕೇನು ಕೋರ್ಟಿನಲ್ಲಿ ದಾಖಲಾಗಿರತಕ್ಕ ಕಾಲದಲ್ಲಿ ಈ ಸರ್ಕಾರದ ಶಾಸನ ನುವ್ಯವಸ್ಥೆ ಸರಿಯಾಗಿದೆ ಎಂದು ಹೇಳುವುದರ ಔಚಿತ್ಯವಾದರೂ ಇದೆಯೇ ಎಂದು ಕೇಳುತ್ತೇನೆ. ಈ ಸರ್ಕಾರ ಶಾಸನ ನುವ್ಯವಸ್ಥೆಯಲ್ಲಿ ಬಹಳವಾಗಿ ವಿಫಲಗೊಂಡಿದೆ. ಶಾಸನವನ್ನು ಪಾಲನೆ ಮಾಡುವವರಲ್ಲಿ ವ್ಯಾವಹಾರಿಕತೆಯ ಅಭಾವ, ದಕ್ಷತೆಯ ಅಭಾವವಿರುವುದರಿಂದ ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗತಕ್ಕ ಶಕ್ತಿ ಇಲ್ಲದೆ ಇರತಕ್ಕ ಸರ್ಕಾರದಲ್ಲಿ ಶಾಸನ ನುವ್ಯವಸ್ಥೆ ಸರಿಯಾಗಿದೆ ಎಂದು ಹೇಳತಕ್ಕದ್ದೇ ಅವಶ್ಯಕತೆಯಾದರೂ ಏನು ಎಂದು ಕೇಳುತ್ತೇನೆ.

ಇನ್ನು ವ್ಯವಸಾಯದ ಬಗ್ಗೆ ಉತ್ತೇಜನ ಕೊಟ್ಟು ಹೆಚ್ಚು ಬೆಳೆ ತಗೆಯುವ ಪ್ರಯತ್ನವನ್ನು ರಾಜ್ಯ ಸರಕಾರ ಮಾಡಲು ಶಕ್ತಿ ಇಲ್ಲ ಎಂದು ಹೇಳಬೇಕಾಗಿದೆ. ಇನ್ನು ಮೋಟಾರು ವಾಹನಗಳ ಆಕ್ಟ್ ಪ್ರಕಾರ ಇಲ್ಲ ಒಂದು ಪ್ರಶ್ನೆ ಕೇಳಿದಾಗ ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗುತ್ತದೆ ಎನ್ನುವ ಉತ್ತರವನ್ನು ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಕೊಟ್ಟರು. ನಾನು ನರಕಾರದಲ್ಲಿ ಇಂತಹ ನಂದರ್ಭಗಳು ಬಂದಾಗ ಉತ್ತರಗಳು ಜವಾಬ್ದಾರಿಯುತವಾಗಿ ಕೊಡುವುದು ಸರಿಯಾಗಿರುತ್ತದೆ. ಹೀಗೆ ಒಂದಕ್ಕೊಂದು ವಿರೋಧವಾಗುವಂತೆ ಇಲ್ಲಿ ಕೊಡುವುದು ಸರಿಯಲ್ಲ. ಈಗ ಸರಕಾರ ಕಾಂಟ್ರಾಕ್ಟ್ ಕ್ಯಾರೇಜ್ ಪರ್ಮಿಟ್‌ಗಳೆಂದು ಕೊಡುತ್ತಿದ್ದಾರೆ. ಆದರೆ ಮೋಟಾರ್ ವೆಹಿಕಲ್ಸ್ ಆಕ್ಟ್ ಪ್ರಕಾರ ಇಂತಹ ಪರ್ಮಿಟ್‌ಗಳನ್ನು ಕೊಡುವ ಅಧಿಕಾರ ನರಕಾರಕ್ಕೆ ಇಲ್ಲ. ಆದರೆ ಇಲ್ಲಿರುವ ಅಧಿಕಾರಿಗಳು ಕೆಲವರ ಪ್ರಭಾವಕ್ಕೆ ಒಳಗಾಗಿ ಆನ್ ಕಾಂಟ್ರಾಕ್ಟ್ ಪರ್ಮಿಟ್ ಎಂದು ಪ್ರತಿ ಜಿಲ್ಲೆಯಲ್ಲೂ ಕೊಡುತ್ತಿರುವುದು ನಾವು ನೋಡುತ್ತಿದ್ದೇವೆ. ಕಾನೂನಿನಲ್ಲಿ ಅವಕಾಶವಿಲ್ಲದ ಇರುವಾಗ ಅಧಿಕಾರಿಗಳು ಇಂತಹ ಪರ್ಮಿಟ್ಟುಗಳನ್ನು ಯಾವ ರೀತಿ ಕೊಡಬಹುದು ಎಂದು ಇಲ್ಲಿ ಪ್ರಶ್ನೆ ಮಾಡಬೇಕಾಗಿದೆ.

ಆಹಾರ ಪರಿಸ್ಥಿತಿ ಬಗ್ಗೆ ಹೇಳುವುದಾದರೆ ಇಂದು ಮೈಸೂರಿನಲ್ಲಿ ಬೆಳೆದಿರತಕ್ಕ ಅಕ್ಕಿಗೆ ಮೂಟೆ ಒಂದಕ್ಕೆ ನೂರು ನೂರೈವತ್ತು ಇದ್ದರೆ ಅದೇ 88 ಮೈಲಿ ದೂರದಲ್ಲಿರುವ ಬೆಂಗಳೂರು ಹೇಚೆಯಲ್ಲಿ 200-250 ರವರೆಗೆ ಮಾರಾಟವಾಗುತ್ತಿದೆ. ಎಂದರೆ ಒಂದು ಮೂಟೆಗೆ ಐವತ್ತು ರೂಪಾಯಿಗಳ ಲಾಭ ಸಂಪಾದನೆ ಮಾಡುತ್ತಿದ್ದಾರೆ. ಇದರಿಂದ ಜನರ ಜೀವನಮಟ್ಟ ಏರುತ್ತಿದ್ದರೂ ನರಕಾರ ಆಹಾರದ ಬೆಲೆ ವಿಚಾರದಲ್ಲಿ ನರಿಯಾಗಿ ವ್ಯವಹಾರ ಮಾಡುತ್ತಿಲ್ಲ ಎಂದು ವಿಷಾದದಿಂದ ಹೇಳ

ಜೇಕಾಗಿದೆ ಮತ್ತು ಆಹಾರ ವ್ಯವಸ್ಥೆ ಇಂದು ಮಾಡಿರುವುದು ಸರಿಯಾಗಿದೆಯೇ ಎನ್ನುವುದನ್ನು ಇಲ್ಲಿ ಪ್ರಶ್ನೆ ಮಾಡಬೇಕಾಗಿದೆ. ಇದಕ್ಕೆ ಕಾರಣ ಇಂಟರ್ ಸ್ಟೇಟ್ ಡಿಸ್ಪ್ಯೂಟ್ ಮೂವಮೆಂಟಿನ ನಿರ್ಬಂಧ ಎಂದು ಮಾಡಿರುವುದರಿಂದ ಬೆಲೆಗಳಲ್ಲಿ ಇಷ್ಟುಮಟ್ಟಿನ ಏರಿಕೆಗೆ ಕಾರಣವಾಗಿದೆ. ಜನಕ್ಕೆ ಅನಾನುಕೂಲವಾಗುವಂತಹ ಇಂಟರ್‌ಸ್ಟೇಟ್ ನಿರ್ಬಂಧವನ್ನು ಏತಕ್ಕಾಗಿ ಮುಂದುವರಿಸುತ್ತಿದ್ದೀರಿ ? ಇದು ಮೂಲಭೂತವಾದ ಪ್ರಶ್ನೆ. ಒಂದು ಜಿಲ್ಲೆಯಿಂದ ಒಂದು ಜಿಲ್ಲೆಗೆ ಭತ್ತ ಸಾಗಿಸಲು ಅವಕಾಶ ಕೊಟ್ಟಿದ್ದರೆ ಬತ್ತ ಅಥವಾ ಅಕ್ಕಿ ಜಿಲ್ಲೆ ಇಷ್ಟುಮಟ್ಟಿಗೆ ಏರಲು ಅವಕಾಶವಾಗುತ್ತಿರಲಿಲ್ಲ. ಲೆವಿ ಭತ್ತ ವಸೂಲು ಮಾಡಲು ಸರಕಾರಕ್ಕೆ ಶಕ್ತಿ ಇದೆ ಮತ್ತು ಇದಕ್ಕೆ ಬೇಕಾದ ಕಾನೂನು ಹಾಗೂ ಅಧಿಕಾರವೂ ಸರಕಾರಕ್ಕೆ ಇರುವಾಗ ಇಂತಹ ಇಂಟರ್‌ಸ್ಟೇಟ್ ನಿರ್ಬಂಧ ವಾದರೂ ಏಕೆ ಇರಬೇಕು ? ಇದನ್ನು ಏತಕ್ಕಾಗಿ ಮುಂದುವರಿಸುತ್ತೀರಿ ?

ಇನ್ನು ಎಂ. ಎಸ್. ಆರ್. ಟಿ. ಸಿ. ಇಲಾಖೆ ಬಗ್ಗೆ ಬೇಕಾದಷ್ಟು ಟೀಕೆ ಟಿಪ್ಪಣಿಗಳೂ ಬರುತ್ತಿದ್ದರೂ ಸರಕಾರ ಇದರ ಕಡೆಗೆ ಗಮನ ಕೊಟ್ಟಂತೆ ಕಾಣುವುದಿಲ್ಲ. ಇದರ ಬಗ್ಗೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ನಮ್ಮ ಎಂ. ಎಸ್. ಆರ್. ಟಿ. ಸಿ. ಯವರು ಐದಾರು ಡಿಪೋಗಳನ್ನು ಅಲ್ಲಲ್ಲಿ ತೆರೆದಿದ್ದಾರೆ. ಇದೇ ರೀತಿ ಮೈಸೂರಿನಲ್ಲಿ ಒಂದು ಡಿಪೋವನ್ನು ತೆಗೆದಿದ್ದಾರೆ. ಈ ಡಿಪೋಗಳಿನಲ್ಲಿ ಒಂದು ತಿಂಗಳಿಗೆ 800 ರಿಂದ ಒಂದು ಸಾವಿರದವರೆಗೆ ಟೈರು ಗಳನ್ನು ರೀಪ್ಲೇಸು ಮಾಡುತ್ತಾರೆ. ಒಂದು ತಿಂಗಳಿಗೆ ಇಲ್ಲಿ ಸುಮಾರು ಒಂದು ಸಾವಿರದಷ್ಟು ಟೈರುಗಳನ್ನು ರೀ ಬಿಲ್ಡ್ ಮಾಡುತ್ತಿದ್ದಾರೆ ಮತ್ತು ಇಲ್ಲಿನ ಇಲಾಖೆಯವರು ಹಾಗೆ ಬಂದ ಟೈರುಗಳಲ್ಲಿ ಒಂದೊಂದು ಟೈರಿಗೂ ಸುಮಾರು 800 ರಿಂದ 1200 ರೂಪಾಯಿಗಳ ಬೆಲೆ ಆಗುತ್ತದೆ. ಹೀಗಿರುವಾಗ ಇಲ್ಲಿನ ಅಧಿಕಾರಿಗಳು ಸುಮಾರು 800 ಟೈರುಗಳು ಸರಿಯಾಗಿಲ್ಲ ಎಂದು ರಿಜೆಕ್ಟ್ ಮಾಡುತ್ತಿದ್ದಾರೆ. ಇದರಿಂದ ಸರಕಾರದ ದುಡ್ಡು ಎಷ್ಟು ಅಪವ್ಯಯವಾಗುತ್ತಿದೆ ಎನ್ನುವುದನ್ನು ಇವರು ಗಮನಕ್ಕೆ ತಗೆದುಕೊಂಡಂತೆ ಕಾಣುವುದಿಲ್ಲ. ಸರಿಯಾದ ಕಾಲಕ್ಕೆ ಸರಿಯಾಗಿರುವ ಟೈರುಗಳನ್ನು ರಿಪ್ಲೇಸು ಮಾಡಿದ್ದರೆ ಇಂತಹ ನಷ್ಟಗಳು ಸರಕಾರಕ್ಕೆ ಆಗಾಗ್ಗೆ ಬರುವುದಿಲ್ಲ. ಹೀಗೆ 800 ಟೈರುಗಳಂತೆ ರಿಜೆಕ್ಟ್ ಮಾಡುತ್ತಾ ಹೋದರೆ ಸರಕಾರಕ್ಕೆ ಲಕ್ಷಾಂತರ ರೂಪಾಯಿ ಗಳಷ್ಟು ನಷ್ಟ ಬರುತ್ತದೆ. ಇದರ ಬಗ್ಗೆ ಸರಕಾರ ಪೂರ್ಣವಾದ ವಿಚಾರಣೆ ಮಾಡಿ ಇಂತಹ ಅವ್ಯವಹಾರಗಳನ್ನು ನಿರ್ಬಂಧಿಸಬೇಕು. ಇಂತಹ ಒಂದು ಉತ್ತಮವಾದ ಇಲಾಖೆಯ ಬಗ್ಗೆ ರಾಜ್ಯಪಾಲರು ಅವರ ಭಾಷಣದಲ್ಲಿ ಒಂದು ಮಾತನ್ನೂ ಹೇಳಿಲ್ಲ. ಅಡಳಿತದಲ್ಲಿ ಇರುವ ಅಧಿಕಾರಿಗಳು ದೇಶದಲ್ಲಿ ಆಗಿರತಕ್ಕ ಎಲ್ಲ ವ್ಯವಹಾರಗಳ ಬಗ್ಗೆ ಸರಿಯಾದ ರೀತಿಯಲ್ಲಿ ಒಂದು ವರದಿ ತಯಾರು ಮಾಡಿ ಕೊಡುವವರು ಇವ್ಯಾರೂ ಅಂತಹ ಯಾವ ಒಂದು ವಿಚಾರಗಳೂ ರಾಜ್ಯಪಾಲರ ಭಾಷಣದಲ್ಲಿ ಏಕೆ ತರಲಿಲ್ಲ ಎಂದು ಇಲ್ಲಿ ಪ್ರಶ್ನೆ ಮಾಡಬೇಕಾಗಿದೆ.

ಇನ್ನು ಹಕ್ಕು ಸಾವಿರ ಎಕರೆ ಅಚ್ಚುಕಟ್ಟು ಇರುವ ಭಾಗದಲ್ಲಿ ಸರಿಯಾದ ಕಾಲದಲ್ಲಿ ಸಿರ್ ತೆಗೆಸದೆ ಇರುವುದರಿಂದಾಗಿ ಬರುವ ಭತ್ತದ ಬೆಳೆಗೂ ನಷ್ಟವಾಯಿತು. ಅದರಲ್ಲೂ ಸಿರ್ಫ್ ಎತ್ತಿಪ ಕಾರ್ಯವನ್ನು ಭತ್ತ ಒಡೆಬರುವ ಕಾಲದಲ್ಲಿ ಮಾಡಿದರೆ ಫಲವು ಚೆನ್ನಾಗಿ ಬರುತ್ತದೆಯೇ ಇದನ್ನು ವಿಚಾರ ಮಾಡಿದಂತಾಗಲಿಲ್ಲ. ಇದರಿಂದ ಬರುವ ಯೀಲ್ಡ್ ಶೇಕಡಾ ಐವತ್ತರಷ್ಟು ಕಡಿಮೆ ಯಾಯಿತು. ಇಂತಹ ಅವ್ಯವಸ್ಥೆಯಿಂದ ರೈತರಿಗೆ ತೊಂದರೆಯಾಗುತ್ತಿದೆ. ಇದನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಸರಕಾರದಲ್ಲಿ ಕೇಳಿಕೊಳ್ಳುತ್ತೇನೆ.

ನನ್ನೆ ಇಲ್ಲಿ ನಡೆದ ಚರ್ಚೆ ಕಾಲದಲ್ಲಿ ಮಾನ್ಯ ಮಂತ್ರಿಗಳಾದ ಶ್ರೀ ಬಸವಲಿಂಗಪ್ಪನವರು ಮಹಾತ್ಮ ಗಾಂಧಿಯವರ ಬಗ್ಗೆ ಹೇಳಿದ ವಿಷಯದಲ್ಲಿ ಒಂದು ದೊಡ್ಡ ಆಂತಃಕರಣಯುತವಾದು ಮಾತುಗಳು ಬಂದು ಅದರ ಬಗ್ಗೆ ಸಾರ್ವಜನಿಕವಾಗಿಯೂ ಟೀಕೆಗಳು ಬಂದಿದ್ದವು.

ಉಪಾಧ್ಯಕ್ಷರು.—ಮೊನ್ನೆ ಆಗಿದ್ದು ಆಗಿಹೋಯಿತು. ಮತ್ತೆ ಈಗ ಇಲ್ಲಿ ಇದರ ಪ್ರಸ್ತಾಪ ಮಾಡುವುದು ಬೇಡ.

One is entitled to have difference of opinion on any matter. It was once raised and it is over.

Sri K. MADE GOWDA.—That does not prevent me from speaking.

Mr. DEPUTY SPEAKER.—That need not be raised here. One may agree with one view aod disagree with another view.

ಶ್ರೀ ಎಚ್. ಡಿ. ದೇವೇಗೌಡ.—ಈ ಮಾನ್ಯ ಸಭೆಯು ಸದಸ್ಯರು ಮಹಾತ್ಮ ಗಾಂಧಿಯವರ ಬಗ್ಗೆ ಇಂತಹ ವಿಚಾರಗಳನ್ನು ಹೇಳಿರುವುದರಿಂದ ಈ ಸದನದಲ್ಲಿ ಹಾಕಿರು ಮಹಾತ್ಮ ಗಾಂಧಿಯವರ ಫೋಟೋವನ್ನು ಕಿತ್ತು ಹಾಕಿದರೆ ಸರಿಯಾಗಿರುತ್ತದೆ. ಇಂತಹ ಫೋಟೋಗಳು ಈ ಸಭೆಯಲ್ಲಿರುವ ಅವಶ್ಯಕತೆ ಇಲ್ಲ. ಮಾನ್ಯ ಉಪಾಧ್ಯಕ್ಷರು ಸ್ಟಾಲಿನ್‌ರವರ ಫೋಟೋವನ್ನು ತೆಗೆದರು ಎಂದು ಹೇಳಿದಂತೆ ಇಲ್ಲಿರುವ ಕಾಂಗ್ರೆಸ್ ಮಂತ್ರಿಗಳು ಇಲ್ಲಿರುವ ಮಹಾತ್ಮ ಗಾಂಧಿಯವರ ಫೋಟೋವನ್ನು ತೆಗೆದುಹಾಕುವುದು ಒಳ್ಳೆಯದು.

Mr. DEPUTY SPEAKER.—One may have difference of opinion and still hold him in highest reverence.

Sri C. M. ARUMUGHAM.—Keeping his photo, would it mean that we entirely agree with what all he said?

Mr. DEPUTY SPEAKER.—I may disagree with certain chapters of Bhagavad Gita but still I may hold it in high esteem.

ಶ್ರೀ ಕೆ. ಮಾದೇಗೌಡ.—ಮಾನ್ಯ ಸಭಾಪತಿಯವರೇ, ನನ್ನು ಸರಕಾರದವರು ಲೆವಿ ಮೂಲಕ ಭತ್ತ ವಸೂಲು ಮಾಡುತ್ತಿದ್ದಾರೆ. ಇದು ಸರಕಾರದ ನೀತಿಯಾಗಿದೆ. ಆದರೆ ಇದರಿಂದ ಆಗಿರ ತಕ್ಕಂಥ ಫಲ ಮತ್ತು ಪ್ರತಿಫಲ ನೋಡಿಕೊಂಡು ಅದಕ್ಕೆ ತಕ್ಕಂತೆ ವರ್ತಿಸಬೇಕು. ರೈತರಿಂದ ಲೆವಿ ಮೂಲಕ ಏನು ಭತ್ತ ವಸೂಲು ಮಾಡಿದನಂತರ ಅದನ್ನು ಸ್ಟೋರ್ ಮಾಡಿ ಕಾಪಾಡಿಕೊಂಡು ಬರುತ್ತಾರೋ, ಅದನ್ನು ಕನ್‌ಸ್ಯೂಮರ್‌ಗೆ ಸರಿಯಾದ ರೀತಿಯಲ್ಲಿ ಹಂಚುತ್ತಿದ್ದಾರೆಯೇ ಎಂಬುದು ಇಲ್ಲಿರುವ ಪೊಡ್ಡ ಪ್ರಶ್ನೆಯಾಗಿದೆ. ಈ ವರ್ಷದ ಸುಗ್ಗಿಯಲ್ಲಿ ರೈತರಿಂದ ಪಡೆದ ಭತ್ತವನ್ನು ಸ್ಟೋರ್ಸ್ ಮಾಡಿದ ಮೇಲೆ ಅದನ್ನು ಎರಡು ವರ್ಷವಾದರೂ ಕೂಡ ಲಿಫ್ಟ್ ಮಾಡದೆ, ಅದು ಹಾಳಾಗಿರುವ ಸಂದರ್ಭ ಬಹಳ ಇವೆ. ಇಂತಹ ಸಂದರ್ಭದಲ್ಲಿ ನಾನಾ ಸರಿ ಕೂಡ ಸೂಚನೆ ಮಾಡುವುದು ಇಷ್ಟೇ. ಯಾವಾಗ ರೈತನಿಂದ ನೀವು ಭತ್ತವನ್ನು ವಸೂಲು ಮಾಡಿ ಸ್ಟೋರ್ ಮಾಡುತ್ತೀರಿ ಆ ಭತ್ತವನ್ನು ಆದಷ್ಟು ಜಾಗ್ರತೆ ಇಟ್ಟಿರತಕ್ಕ, ಸ್ವಳದಿಂದ ಅದನ್ನು ತೆಗೆದು ಕನ್‌ಸೂಮರ್ಸ್‌ಗೆ ನಾವು ಉಪಯೋಗ ಮಾಡಿಕೊಡಬೇಕು ಮತ್ತೆ ಮುಂದೆ ಸುಕ್ಕ ಬಂದ ಕಾಲದಲ್ಲಿ ಹಿಂದಿನ ಭತ್ತ ಇದ್ದರೆ ತಾವು ಆ ಭತ್ತವನ್ನು ಬಡರಾಯಿಸಿ ಕೊಸವಾಗಿ ಬಂದ ಭತ್ತವನ್ನು ರೀಪ್ಲೇಸ್ ಮಾಡತಕ್ಕ ಅವಕಾಶ ಬಹಳ ಇದೆ. ಆದರಿಂದ ಎಲ್ಲಿ ಭತ್ತವನ್ನು ಸ್ಟೋರ್ ಮಾಡಿದ್ದರೂ ಮುಂದಿನ ಸುಗ್ಗಿ ಬಂದ ತಕ್ಷಣ ಎಷ್ಟು ಒಳ್ಳೆಯ ಭತ್ತ ಸ್ಟಾಕ್‌ನಲ್ಲಿ ಇದೆಯೋ ಅವನ್ನು ಸರಿಸರಿ ಆದಷ್ಟಿತಕ್ಕೆ ತೆಗೆದುಕೊಳ್ಳಬೇಕು ಎಂದು ನಾನು ಸೂಚನೆ ಕೊಟ್ಟು ಅಧ್ಯಕ್ಷರು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮತ್ತೊಮ್ಮೆ ಅವರನ್ನು ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—Regarding the point raised by hon. Member Sri Deve Gowda, I have gone through the proceedings and I found that there is nothing to be expunged. For the information of this House, I will read the extract of the proceedings pertaining thereto. It is as follows :

ಕಳೆದ ಚುನಾವಣೆಯಲ್ಲಿ ಇಂದಿರಾ ಬಿರುಗಾಳಿಯಿಂದ ಈ ತ್ರೀರಿಂಗ್ ಸರ್ಕಸ್‌ನಲ್ಲಿದ್ದ ಬೆಂಚುಗಳು ಒಡೆದು ಹೋದುವು. ಅಲ್ಲಿ ಇದ್ದಂಥ ಪ್ರಾಣಿಗಳು ಓಡಿ ಹೋಗಿ ಕಾಡು ಪಾಲಾಗಿ ಈಗ ಅಲ್ಪ ಸ್ವಲ್ಪ ವಿರೋಧ ಪಕ್ಷದಲ್ಲಿ ಇದ್ದಾರೆ. ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯ ಕಾದರೆ ವಿರೋಧ ಪಕ್ಷಗಳು ಪ್ರಬಲವಾಗಿರಬೇಕು. ದೇಶದ ದುರ್ದೈವ ಮೈಸೂರು ರಾಜ್ಯದಲ್ಲಿ ಈ ಸರ್ಕಸ್ ಹೈಕಿ ಕೆಲವು ರಿಂಗ್‌ಮಾಸ್ಟರ್ಸ್ ಇಬ್ಬರು ಬಫೂನ್ ಪಾತ್ರದವರು ಉಳಿದುಕೊಂಡಿದ್ದಾರೆ.

Therefore there is nothing to be expunged.

Sri D. DEVARAJ URS.—Sir, I would like to be enlightened on one point. I think the word '*buffoon*' may be unparliamentary, but 'buffoonary' may not be unparliamentary.

Mr. DEPUTY SPEAKER.—Yes. Buffoonary is parliamentary.

† **Sri J. P. SARWESH** (Sedum).—Sir, while supporting the Motion of Thanks to the Governor's Address, I wish to state, that you are one of the senior Members of this House and you were in this August House at a time when Mr. Nijalingappa was the Chief Minister, when Mr. Jatti was Chief Minister and also at a time when Mr. Veerendra Patil was Chief Minister. These were all the people from North Karnataka. I want to know what they did for these North Karnataka areas ? They have almost deceived the people, they have cheated them.

Sri H. D. DEVE GOWDA.—Sir, I want to know from the Chair whether the word 'cheated' could be used ?

Mr. DEPUTY SPEAKER.—Whether it could be used or not depends upon the meaning or context in which it is used.

Sri H. D. DEVE GOWDA.—Tommorrow if I say that the Devaraj Urs Ministry has cheated, will it be alright ?

Sri D. DEVARAJ URS.—Sir, my hon. friend, the Leader of Opposition has used words which are even more harsh than this. He might not have used English words, but he might have used Kannada words.

ಶ್ರೀ ಎಂ. ಎಸ್. ಕೃಷ್ಣನ್.—'ಚೀಟೆಡ್" ಎಂಬ ಪದವನ್ನು ಹೊರಗಡೆ ಉಪಯೋಗ ಮಾಡ ಬಹುದು. ಇಲ್ಲಿ ಆ ಪದವನ್ನು ಉಪಯೋಗ ಮಾಡಿದರೆ ಅದು ಬೇರೆ ಅರ್ಥವಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಹೇಳಿದ್ದು, ಹಿಂದಿನ ಸರ್ಕಾರದವರು ಹಣವನ್ನು ಚೆನ್ನಾಗಿ ಖರ್ಚು ಮಾಡಲಿಲ್ಲ ಮತ್ತು ಆ ವಿಚಾರದಲ್ಲಿ ಯಶಸ್ವಿಯಾಗಿಲ್ಲ ಎಂದು.

Mr. DEPUTY SPEAKER.—As I have already said it depends upon the import or meaning. Here, in the way in which it is used, the word 'cheated' cannot be unparliamentary.

6-00 P.M.

Sri J. P. SARWESH.—Sir, after Independence, in Andra Pradesh, they have spent the maximum amount for irrigation projects whereas the Government of Mysore was spendig for Circuit Houses and Dock bungalows and for furnishing those bungalows with Dunlop beds and pillows. The previous governmen's were spending for providing comforts in the Dock Bungalows. Today if the people are suffering in our area, it is because of the successive governments who indulged in other things istead of providing irrigation projects because they were interested elsewhere. Sri C. M. Arumugham, in his Report at page 10 Chapter-III—has stated as follows :

> " Gulbarga, Raichur and Bidar are the three districts of the Hyderabad Karnataka area which have been integrated in the new Mysore State. Gulbarga and Raichur districts are more susceptible to crop failures. During the past one century they had 5 famines commencing from 1823. In 1854 there was the second famine, followed by the Great Famine of 1900. In 1927 and 1935, part of Raichur and Gulburga districts were affected After 1934, though during some

(SRI J. P. SARWESH)

years the seasonal conditions were very bad, the problems were not of such a magnitude as are faced by the villagers now."

Sri D. DEVARAJ URS.—Sir with your leave, I may be permitted to move that the House may be allowed to sit for another half-an-hour or more since I have to reply tomorrow and even tomorrow evening I won't be here for long as I have to go to Delhi in the evening. ಆದಕಾರಣ ಮಾನ್ಯ ಸಭೆ ಒಪ್ಪುವುದಾದರೆ ಇನ್ನೂ ಅರ್ಧ ಗಂಟೆಯವರೆಗೆ ಸಭೆಯನ್ನು ಮುಂದುವರೆಸೋಣ.

ಶ್ರೀ ಎಚ್. ಡಿ. ದೇವೇಗೌಡ.—ಆಗಬಹುದು ನಾಳೆ ಪ್ರಶ್ನೋತ್ತರವಾದ ಮೇಲೆ ಮೂರೂ ವರೆಯಿಂದ ಐದೂ ವರೆವರೆಗೆ ತಾವು ಉತ್ತರ ಕೊಡಬಹುದು.

ಉಪಾಧ್ಯಕ್ಷರು.—ಪ್ರಶ್ನೋತ್ತರವಾದ ಮೇಲೆ ಜೀರೋ ಅವರ್ ಬೇಕೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರೆಲ್ಲರೂ ಮಾತನಾಡಿದ ವಿಷಯಗಳಿಗೆ ಕೇವಲ ಎರಡು ಗಂಟೆಗಳಲ್ಲಿ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಎಚ್. ಡಿ. ದೇವೇಗೌಡ.—ಎರಡು ಗಂಟೆ ಸಾಕೆಂದು ಮುಖ್ಯ ಮಂತ್ರಿಗಳು ಒಪ್ಪಿ ಕೊಂಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಚರ್ಚೆಯ ಪೂರ್ಣಕಾಲದಲ್ಲಿ ಸಭೆಯಲ್ಲಿ ಇರಲಿಲ್ಲ. ಆದಕಾರಣ ತಾವು ಎಲ್ಲ ಅಂಶಗಳಿಗೂ ಉತ್ತರ ಕೊಡುತ್ತೀರೋ ಅಥವಾ ಇಲ್ಲವೋ ಎಂಬ ಅನುಮಾನ ನಮಗೆ ಬರುತ್ತಿದೆ.

ಶ್ರೀ ಡಿ. ದೇವರಾಜ ಅರಸ್.—ನಾನು ಇಲ್ಲದಿದ್ದರೂ ಸಹ ಮಾನ್ಯ ಸದಸ್ಯರು ಹೇಳಿದ್ದನ್ನೆಲ್ಲಾ ಗುರುತು ಹಾಕಿಕೊಳ್ಳಲಾಗಿದೆ. ಇಲ್ಲದಿದ್ದರೆ ಉತ್ತರ ಕೊಡುವುದಕ್ಕೆ ಎಲ್ಲಿ ಸಾಧ್ಯವಾಗುತ್ತದೆ ? ಎಲ್ಲ ಅಂಶಗಳಿಗೂ ಉತ್ತರ ಕೊಡದಿದ್ದರೆ ತಾವೆಲ್ಲಿ ಬಿಡುತ್ತೀರಾ ?

ಶ್ರೀ ಪಾಟಾಳ್ ನಾಗರಾಜ್.—ಸಭೆ ನಡೆಯುವಾಗ ತಾವು ದೆಹಲಿಗೆ ಏತಕ್ಕೆ ಹೋಗುತ್ತೀರಾ ? ಇಲ್ಲಯೇ ಏತಕ್ಕೆ ಇರಬಾರದು ?

ಶ್ರೀ ಡಿ. ದೇವರಾಜ ಅರಸ್.—ತಮ್ಮಿಂದ ಪರ್‌ಮಾನ್ ಬರಲಿ ಎಂದು ಕಾಯುತ್ತಿದ್ದೇನೆ. ಬರೆದು ಕಳಿಸಿಕೊಡಿ. ನೋಡುತ್ತೇನೆ.

Sri J. P. SARVESH.—That means that all the past Chief Ministers were aware of these famines. But they did nothing. Though there were several projects in Gulbarga district for which estimates were also prepared, no project was taken up during the time of Sri Veerendra Patil except a very small project, *viz.*, Chandrampalli project, in his own taluk. We could very well see the interest of the past Chief Ministers for this area. Today, Sri Veerendra Patil like a great champion of the suffering people is saying that people are starving and that they will agitate. Is that a way of giving co-operation to the Government to solve the problem ?

Sri R. GUNDU RAO.—He wants to build up his party and therefore he is saying it.

Sri H. D. DEVE GOWDA.—As if the hon. member do not want to build up his party !

SRI J. P. SARVESH:—It is only this Government that has taken concrete measures to relieve the distress of the people of the drought affected areas. Sri C. M. Arumugham, in his Report at page 86 has also stated as follows :—

> "It is only the Government that has taken concrete measures to relieve the distress of people in the drought affected areas. There is no participation of voluntary organisations in this big task. Except by one or two rotary clubs and a few other philanthropists who have offered fodder for the cattle, no substantial help has been rendered by any voluntary organisation to the Government to tackle this massive problem."

People used to die on account of famine when there was foreign Government. Today we have our own Government. Therefore, it is the duty of every one of us to see that our neighbour has taken his food or not. Government is doing its best to provide food grains in those areas. Food grains are being sold at 90 paise per kg. not only at the district headqurters but also in the rural areas through fairprice shops, and even the transportation charges are borne by the Government.

I would like to congratulate the Government for taking up so many projects, *viz.*, Upper Krishna, Bannitura, Mullamari and Amarja projects and 30 minor irrigation projects in the affected areas. I am sure these are the permanent projects which are going to help the people. At the same time, I feel that the Government has to do something more. When these projects start working, naturally lakhs of people will be employed. The Syndicate people must not have the dareness to talk about this, because all the mistakes were committed by their party leaders.

Government have introduced the system of supply of free ration for old and infirm persons in drought affected areas, and in each taluk such people are given free ration. I appeal to my friends in the Opposition that this is not the time to play politics—I am sorry I am using this word. They want to exploit the sufferings of the people at the advantage of their party. I appeal to them that this is the time to co-operate. Let us co-operate and save our people and cattle. In Bengal at the time of famine one poet said :

(*Hindi Verses*)

Sir, I am sorry to say one other thing. The Syndicate Congress has not so far started a single 'ganji centre' in Gulbarga district. That clearly shows how much they are interested towards the distressed people. They want to incite the people to violence and to create chaos in the whole State.

With these few words, I thank the Chair.

†ಶ್ರೀ ವೈ. ಎಸ್. ಪಾಟೀಲ್ (ಸಿಂದ್ಗಿ).—ಮಾನ್ಯ ಸಭಾಧ್ಯಕ್ಷರೇ, ಈ ಬರಗಾಲ ಪೀಡಿತ ಪ್ರದೇಶಗಳಲ್ಲಿ ಈಗ ಏನು ಕ್ಷಾಮ, ಅಭಾವ ಪರಿಸ್ಥಿತಿ ಬಂದಿದೆ ಈ ಪರಿಸ್ಥಿತಿಯು ಅರಿವು ನಮ್ಮ ಸರ್ಕಾರದವರಿಗೆ ಆಷ್ಟು ಚೆನ್ನಾಗಿ ಆಗಿಲ್ಲ ಎಂದು ನಾನು ಹೇಳಬಯಸುತ್ತೇನೆ. ಇವರಿಗೆ ಸಾಮಾನ್ಯ ಮನುಷ್ಯ ಪರಿಚಯ ಆಗಿಲ್ಲ. ಮಾನ್ಯ ಮಂತ್ರಿಗಳಿಗೆ ಸಾಮಾನ್ಯ ಮನುಷ್ಯನ ದುಃಖದ ಪರಿಚಯ ಆಗಿಲ್ಲ. ಮಾನ್ಯ ಮಂತ್ರಿಗಳು ನಮ್ಮ ಜೊತೆಯಲ್ಲಿ ಬನ್ನಿ ಆಲ್ಲಿ ಜನಗಳ ಕಷ್ಟಗಳು ಯಾವ ರೀತಿ ಇದೆ ಎಂಬುದನ್ನು ತೋರಿಸುತ್ತೇನೆ. ಈ ಸರ್ಕಾರಕ್ಕೆ ಕೀರ್ತಿ ಬರಬೇಕಾದರೆ ಅಲ್ಲಿ ಎಂದರೆ ಬರಗಾಲ ಪೀಡಿತ ಪ್ರದೇಶಗಳಲ್ಲಿರತಕ್ಕ ಜನಗಳ ಕಷ್ಟ ನುಖಗಳನ್ನು ಅರಿತು ಅವರಿಗೆ ತಕ್ಕ ಪರಿಹಾರವನ್ನು ಒದಗಿಸಬೇಕು. ಮಾನ್ಯ ರಾಜ್ಯಪಾಲರು ಎರಡೂ ಸದನಗಳ ಸದಸ್ಯರನ್ನು ಕುರಿತು ಭಾಷಣ ಮಾಡಿದರು. ಅದರ ಮೇಲೆ ಮಾನ್ಯ ಸದಸ್ಯರೆಲ್ಲರೂ ಚರ್ಚೆ ಮಾಡುತ್ತಾರೆ. ಆ ಮೇಲೆ ಕೊನೆಯಲ್ಲಿ ಆ ಚರ್ಚೆಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಆದರೆ ಮಾನ್ಯ ಮಂತ್ರಿಗಳು ಬಿಜಾಪುರ, ಬೀದರ್ ಗುಲ್ಬರ್ಗಾ ರಾಯಚೂರು ಈ ಪ್ರದೇಶಗಳಲ್ಲಿ ಜನಗಳು ಬರಗಾಲದ ದೆಶೆಯಿಂದ ಯಾವ ರೀತಿ ಕಷ್ಟವನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ನೋಡಿ ಅವರಿಗೆ ತಕ್ಕ ಪರಿಹಾರವನ್ನು ಒದಗಿಸತಕ್ಕದ್ದು ಈ ಸರ್ಕಾರದವರ ಜವಾಬ್ದಾರಿ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಿಜವಾಗಿಯೂ ಅಲ್ಲಿ ಜನತೆಗೆ ಸಾಕಷ್ಟು ಪರಿಹಾರ ದೊರೆತಿಲ್ಲ. ಸುಮ್ಮನೆ ಆ ಪ್ರದೇಶದಲ್ಲಿ ರೈತರಿಗೆ ಜನತೆಗೆ ಈ ರೀತಿ ಅನುಕೂಲ ಮಾಡಿಕೊಟ್ಟಿದ್ದೇವೆ ಆ ರೀತಿ ಅನುಕೂಲ ಮಾಡಿಕೊಟ್ಟಿದ್ದೇವೆ ಎಂದು ಹೇಳಿದರೆ ಸಾಲುವುದಿಲ್ಲ. ನಿಜವಾಗಿ ಅವರ ಕಷ್ಟ ಏನಿದೆ ಎಂಬುದನ್ನು ಅರಿತು ಅವರಿಗೆ ಯೋಗ್ಯ ನೆರವುದೊರೆಯುವಂಥಾ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

1956 ನೇ ಇಸವಿಯಲ್ಲಿ ಕನ್ನಡ ರಾಜ್ಯ ಅಥವಾ ಕರ್ನಾಟಕ ರಾಜ್ಯ ನಿರ್ಮಾಣವಾಯಿತು. ಆಗ ನಮ್ಮ ರಾಜ್ಯದ ಜನಸಂಖ್ಯೆ 2 ಕೋಟಿ ಇತ್ತು. ಆ ಎರಡು ಕೋಟಿ ಜನಗಳಿಗೂ ಅನ್ನ ಅರಿವೆ, ಶಿಕ್ಷಣ ಮುಂತಾದ ಜೀವನದ ಸೌಕರ್ಯಗಳನ್ನು ಒದಗಿಸತಕ್ಕಂಥಾದ್ದು ಆಗಿನ ಸರ್ಕಾರದ ಜವಾಬ್ದಾರಿಯಾಗಿತ್ತು. ಈಗ ನಮ್ಮ ರಾಜ್ಯದ ಜನಸಂಖ್ಯೆ ಸುಮಾರು ಮೂರು ಕೋಟಿಗೆ ಏರಿದೆ. ಈ ಮೂರು ಕೋಟಿ ಜನಗಳನ್ನು ಕಾಪಾಡತಕ್ಕ ಜವಾಬ್ದಾರಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಾದ ದೇವರಾಜ ಅರಸ್ ಅವರ ಮೇಲೆ ಬಿದ್ದಿದೆ. ಶ್ರೀಮಾನ್ ವೀರೇಂದ್ರಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ಅವರೂ ಸಾಧ್ಯವಾದ ಮಟ್ಟಿಗೆ ಜನತಾ ಸೇವೆಯನ್ನು ಮಾಡಿದ್ದಾರೆ. ಈಗ ಅವರು ಈ ಸಭೆಯ ಸದಸ್ಯರಲ್ಲ. ಆದ್ದರಿಂದ ಈಗ ಅವರು ಮಾಡಬೇಕಾದ್ದನ್ನು ಮಾಡಲಿಲ್ಲ ಎನ್ನುವ ಪ್ರಶ್ನೆ ಬೇಡ. ಅವರು ಮಾಡಲಿ ಮಾಡದೇ ಇರಲಿ. ಈಗ ಆ ಪ್ರದೇಶದಲ್ಲಿ ಏನು ಅಭಾವ ಪರಿಸ್ಥಿತಿ ಬಂದಿದೆ ಅದರ ನಿವಾರಣೆಯ ಬಗ್ಗೆ ಸರ್ಕಾರದವರು ತಮ್ಮ ಗಮನವನ್ನು ಹರಿಸಿ ಅವರಿಗೆ ಬೇಕಾದ ನೆರವನ್ನು ಒದಗಿಸಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ನಮ್ಮ ಬಿಜಾಪುರ ಜಿಲ್ಲೆ ತೀವ್ರವಾದ ಬರಗಾಲಕ್ಕೆ ತುತ್ತಾಗಿದೆ. ಅಲ್ಲಿನ ರೈತರಿಗೆ ನೀರಾವರಿಯ ಸೌಲಭ್ಯವನ್ನು ಒದಗಿಸುವ ದೃಷ್ಟಿಯಿಂದ ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನ ಕೆಲಸವನ್ನು ತೆಗೆದುಕೊಂಡು ತೀವ್ರವಾಗಿ ಮುಗಿಸಿ ನಾಲೆಗಳ ಮುಖಾಂತರ ರೈತರಿಗೆ ನೀರನ್ನು ಒದಗಿಸುವಂತಹ ಒಂದು ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಮಾನ್ಯ ಹಣಕಾಸಿನ ಮಂತ್ರಿಗಳಾದ ಶ್ರೀಮಾನ ಘೋರ್ಪಡೆಯವರು ಹೇಳಿದ್ದರು. ಅದನ್ನು ಯಾವಾಗ ಮಾಡುತ್ತಾರೆ ಎಂಬುದು ಗೊತ್ತಾಗಲಿಲ್ಲ. ಮತ್ತು ಈ ಅಪ್ಪರ್ ಕೃಷ್ಣ ಪ್ರಾಜೆಕ್ಟನ್ನು ನ್ಯಾಷನಲ್ ಪ್ರಾಜೆಕ್ಟ್ ಆಗಿ ಮಾಡುತ್ತೇವೆ ಎಂದು ಹೇಳಿದ್ದರು. ಅವರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಏನೂ ಹೇಳಿಲ್ಲ.. ಆದ್ದರಿಂದ ಈ ಅಪ್ಪರ್ ಕೃಷ್ಣಾ ಯೋಜನೆಯನ್ನು ಒಂದು ನ್ಯಾಷನಲ್ ಪ್ರಾಜೆಕ್ಟ್ ಎಂದು ಮಾಡಿ ಕಾರ್ಯಗತ ಮಾಡಬೇಕು. ಅದೇ ರೀತಿ ಬಿಜಾಪುರದಲ್ಲಿ ಎಲ್ಲೆಲ್ಲಿ ನೀರಿನ ಆಶ್ರಯ ಸಿಗುತ್ತದೆ ಅದನ್ನು ಉಪಯೋಗಿಸಿಕೊಂಡು ಜನರಿಗೆ ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ಸರ್ಕಾರದವರು ಹಾಕಿಕೊಳ್ಳಬೇಕೆಂದು ಸೂಚನೆ ಮಾಡುತ್ತೇನೆ. ಅವೇಲರೆ ಕಂದಾಯ ಮಂತ್ರಿಗಳು ಹೊಟ್ಟೆಗಿಲ್ಲದೆ ಯಾರೂ ಸಾಯಲಿಲ್ಲವೆಂದು ಹೇಳುತ್ತಾರೆ. ಹೊಟ್ಟೆಗಿಲ್ಲದೆ ಸತ್ತ ವಿಚಾರವನ್ನ 16—1—73 ರಂದು ನಾನು ಮಾನ್ಯ ಸಜ್ಜನ್‌ರವರು ಗುಲ್ಬರ್ಗಾದಲ್ಲಿ ಬಾಪು ಗೌಡರ ಮನೆಯಲ್ಲಿ ಇದ್ದಾಗ ಒಬ್ಬ ಕ್ರಿಶ್ಚಿಯನ್ ಹೊಟ್ಟೆಗೆ ಹಿಟ್ಟು ಇಲ್ಲದೆ ಸತ್ತ ಎಂಬ ಸಮಾಚಾರ ನಮಗೆ ಬಂದಿದೆ ಅದನ್ನು ಸಜ್ಜನ್‌ರವರು ಪ್ರಾಮಾಣಿಕತನದಿಂದ ಮುಖ್ಯಮಂತ್ರಿಯವರಿಗೆ ಹೇಳಿದರೆ ಸಾಕು. ಇನ್ನು ಡೆವಲಪ್‌ಮೆಂಟ್ ಮಂತ್ರಿಯವರಿಗೆ ಒಂದು ವಿಚಾರವನ್ನು ಹೇಳುತ್ತೇನೆ. ಹೈದರಾಬಾದು ಸಂಸ್ಥಾನದಲ್ಲಿ ಹರಿಜನರ ಸಲುವಾಗಿ ಸ್ಪೆಶರ್ ಡ್ರಿಂಕಿಂಗ್ ವಾಟರ್ ವೆರ್ಲ್ಸ್ ಎಂಬ ಸ್ಕೀಮ್ ಮಾಡ

ದ್ದಾರೆ, ಆದೇ ರೀತಿಯಲ್ಲಿ ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಸಹ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಏಕೆಂದರೆ ಅಲ್ಲಿ ಹರಿಜನರು ನೀರಿಲ್ಲದೆ ಗೋಳಾಟ ಮಾಡುತ್ತಿದ್ದಾರೆ. ಆದ್ದರಿಂದ ಅಲ್ಲಿ ಆರ್ಜಿಗಳು, ಬರಲಿ ಅಥವಾ ಬಾರದೆ ಇರಲಿ, ಈ ಕಾರ್ಯವನ್ನು ಸರ್ಕಾರ ತಕ್ಷಣ ಮಾಡಿಬೇಕೆಂದು ಹೇಳುತ್ತೇನೆ.

ಇನ್ನು ಹರಿಜನರ ಕೇರಿಯಲ್ಲಿ ಸ್ವಲ್ಪ ಅಂಗಡಿಗಳನ್ನು ಇಡಬಾರದು. ಅದರಿಂದ ಬಹಳ ಹಾನಿ ಇದೆ. ಆಮೇಲೆ ಡಿಸಿಪ್ಲಿಂಗ್ ಆಫ್ ಬೋರ್ ವೆಲ್ಸ್ ಕಾರ್ಯವನ್ನು ಯಶಸ್ವಿಯಾಗಿ ಮಾಡಬೇಕು ಇವತ್ತು ಡಿಸಿರ್ವ ಮಾಡಿ ನಾಳೆ ಪುನಃ ಸಿರ್ವ್ ಬೀಳುವ ರೀತಿಯಲ್ಲಿ ಮಾಡಬಾರದು, ಏಕೆಂದರೆ ನಮ್ಮ ಇಂಡಿ ಮತ್ತು ಸಿಂದಗಿಯಲ್ಲಿ ಶಾಶ್ವತವಾದ ಕಷ್ಟಕಾಲ ಇದ್ದೇ ಇರುತ್ತದೆ. ಆದ್ದರಿಂದ ಗುಲ್ಬರ್ಗ ಬೀದರ ಕಡೆ ಬರಗಾಲ ಇರುವುದನ್ನು ಪರಿಹರಿಸಲು ಹೇಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿರೋ ಹಾಗೆಯೇ ಈ ಸಿಂದಗಿ ಮತ್ತು ಇಂಡಿ ಪ್ರದೇಶದ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ದಕ್ಕೆ ಒಂದು ಕಮಿಟಿ ಮಾಡಿ ಅಲ್ಲರತಕ್ಕಂತಹ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳುತ್ತೇನೆ.

ಇನ್ನು ಲ್ಯಾಂಡ್‌ಲೆಸ್ ಜನರಿಗೆ ಭೂಮಿಯನ್ನು ಎಲ್ಲಿಯೂ ಸಿಗದಿದ್ದರೆ ಅರಣ್ಯ ಇಲಾಖೆಯಿಂದ ಕೊಡುತ್ತೇವೆಂದು ಕೆ. ಚಿಚ್. ಪಾಟೀಲರು ಹೇಳುತ್ತಾರೆ. ಆದರೆ ಬಾಗಲಕೋಟೆಯಲ್ಲಿ ಕೆಲವು ಲಂಬಾಣಿಗಳು ಫಾರೆಸ್ಟ್ ಲ್ಯಾಂಡಿನಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಆ ಜಮೀನನ್ನು ಅವರಿಗೆ ಖಾಯಂ ಮಾಡಿ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಏಕೆಂದರೆ ಇದನ್ನು ಒಂದು ಮಾನವೀಯ ದೃಷ್ಟಿಯಿಂದ ಸರ್ಕಾರ ನೋಡಬೇಕೆಂದು ನನ್ನ ಏನಂತಿ.

ಇನ್ನು ಎಂ ಎಸ್ ಆರ್ ಟಿ ಸಿ ಯಲ್ಲಿ ಒಂದು ಕಂಪ್ಲೈಂಟ್ ಬುಕ್ ಸಹ ಇಲ್ಲ. ಬಸ್ ಕಂಡಕ್ಟರ್ಸ್ ಬಸ್ ಇನ್ಸ್‌ಪೆಕ್ಟರ್ಸ್ ತರಹ ವರ್ತನೆ ಮಾಡುತ್ತಿದ್ದಾರೆ. ಬೇಕಾದರೆ ನೀವು ನಾರ್ಮ್ ಜನ ನದಸ್ಯರು ಬಂದರೆ ನಾನು ಇದನ್ನು ತೋರಿಸಬಲ್ಲೆ.

ಕೊನೆಯದಾಗಿ ನಮ್ಮ ಜಿಲ್ಲೆಯ ನೇಕಾರರ ಸಮಸ್ಯೆ ಬಹಳ ಕಷ್ಟದಾಯಿಕವಾಗಿದೆ. ಅಲ್ಲಿ 17ಸಾವಿರ ಜನ ನೇಕಾರರು ಇದ್ದಾರೆ. ಅತ್ಯಧಿಕ ಬರಕತಿ, ಬನಹಟ್ಟಿ, ಗುಳೇದಗುಡ್ಡ ನೇಕಾರರ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಅಲ್ಲದೆ ಅಲ್ಲಿ ಕಲರ್ ಸಾರಿ ನೇಯುವಾರದು ಎಂದು ಸಹ ಹೇಳುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಸಹಾನುಭೂತಿಯಿಂದ ಪರಿಶೀಲನೆ ಮಾಡಿ ಅವರಿಗೆ ನ್ಯಾಯವಾದ ರೀತಿಯಲ್ಲಿ ಅನುಕೂಲ ಮಾಡುವ ಸ್ಕೀಮುಗಳನ್ನು ಜಾರಿಗೆ ಕೊಡಬೇಕೆಂದು ಹೇಳುತ್ತೇನೆ.

ನನ್ನ ಭಾಷಣವನ್ನು ಮುಗಿಸುವ ಮುನ್ನ ನಾನು ಹೇಳಿದ ಬರಗಾಲದ ಬಗ್ಗೆ, ನೀರಾವರಿ ಬಗ್ಗೆ, ಸಾಯಿಲ್ ಕನ್‌ಸರ್ವೇಶನ್, ಬೋರ್ ವೆಲ್ಸ್, ರೋಡು ಕೆಲಸಗಳು ಇತ್ಯಾದಿಗಳನ್ನು ಸರ್ಕಾರ ಜಾಗ್ರತೆ ಕ್ರಮ ತೆಗೆದುಕೊಂಡು ಕೆಲಸ ಮಾಡಿಸಬೇಕು. ಮತ್ತು ಮಹಾರಾಷ್ಟ್ರದ ರೀತಿಯಲ್ಲಿ ತ್ವರಿತವಾಗಿ ಇಂತಹ ಕೆಲಸಗಳನ್ನು ಮಾಡಿ ಅಡಳಿತ ಪಕ್ಷದವರು ಹೆಸರು ತೆಗೆದುಕೊಳ್ಳಬೇಕೆಂದು ಹೇಳಿ ತಮಗೆ ನನ್ನ ಚೆಂಪರರಿ ಥ್ಯಾಂಕ್ಸ್‌ನ್ನು ಕೊಟ್ಟು, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6-30 P.M.

ಶ್ರೀ ಎ. ವಿ. ಪಾಟೀರ್ (ರೋಣ್).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದನೆಗಳನ್ನರ್ಪಿಸುವ ಈ ಸಂದರ್ಭದಲ್ಲಿ ನನಗೆ ಒಂದೆರಡು ಮಾತುಗಳನ್ನು ಆಡಲು ಅನುಮತಿ ಕೊಟ್ಟದ್ದಕ್ಕಾಗಿ ನಾನು ತಮಗೆ ಪ್ರಥಮವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ.

ಮಾನ್ಯ ರಾಜ್ಯಪಾಲರು ಇಡೀ ರಾಜ್ಯದ ಸಮಗ್ರ ಚಿತ್ರವನ್ನು ತಮ್ಮ ಕಣ್ಮುಂದೆ ಇಟ್ಟುಕೊಂಡು ಎಲ್ಲ ಸಮಸ್ಯೆಗಳನ್ನೂ ಕೂಲಂಕಷವಾಗಿ ವಿವೇಚನೆಯಿಂದ ಪರಿಶೀಲಿಸಿ ಅವುಗಳಿಗೆ ಪರಿಹಾರವನ್ನು ಕಂಡುಹಿಡಿದಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳು.

ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಮುಖ್ಯವಾಗಿ ರಾಜ್ಯದ ಇಂದಿನ ಅಭಾವ ಪರಿಸ್ಥಿತಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದಾರೆ. ಬೀದರ್, ಗುಲ್ಬರ್ಗಾ, ಬಿಜಾಪುರ, ಬೆಳಗಾವಿ, ರಾಯಚೂರು ಜಿಲ್ಲೆಗಳ ಕೆಲವು ತಾಲ್ಲೂಕುಗಳ ಪರಿಸ್ಥಿತಿ ತೀವ್ರ ದಾರುಣವಾಗಿದೆಯೆಂದು ಹೇಳಿದ್ದಾರೆ. ಆದರೆ ದುರ್ದೈವದಿಂದ ಅವರು ಧಾರವಾಡ ಜಿಲ್ಲೆಯ ರೋಣ, ನವಲಗುಂದ, ನರಗುಂದ, ಮುಂದರಗಿ ತಾಲ್ಲೂಕುಗಳನ್ನು ಉಲ್ಲೇಖ ಮಾಡಿರುವುದಿಲ್ಲ. ನನ್ನ ಮಾತಕ್ಷೇತ್ರವಾದ ರೋಣ

(ಶ್ರೀ ಎ. ವಿ. ಪಾಟೀಲ್)

ತಾಲ್ಲೂಕು ಇಡೀ ಧಾರವಾಡ ಜಿಲ್ಲೆಯಲ್ಲಿಯೇ ಅತ್ಯಂತ ಬರಗಾಲ ಪೀಡಿತ ಪ್ರದೇಶವಾಗಿದೆ. ಅಲ್ಲಿಯ ಜನರ ಪರಿಸ್ಥಿತಿ ತೀರಾ ಶೋಚನೀಯವಾಗಿದೆ. ಮುಂಗಾರಿ ಮಳೆಯಂತೂ ಬರಲೇ ಇಲ್ಲ. ಹಿಂಗಾರಿ ಮಳೆ ಅಲ್ಲಲ್ಲಿ ಸ್ವಲ್ಪವಾದರೂ ಸಾಕಷ್ಟು ಆಗಲಿಲ್ಲ. ಹೀಗಾಗಿ ಹಿಂಗಾರಿ ಬೆಳೆಯೂ ಕೈಗೆ ಬಾರದಾಯಿತು. ಎರಡು ಬೆಳೆಗಳನ್ನು ಕಳೆದುಕೊಂಡು ಜನರು ಹೈರಾಣಾಗಿದ್ದಾರೆ. ಆದರೂ ಸರ್ಕಾರದವರು ನಮ್ಮ ತಾಲ್ಲೂಕನ್ನು ಬರಗಾಲ ಪ್ರದೇಶವೆಂದು ಸಾರಿದ್ದರಿಂದ ಅಲ್ಲಿಯ ಜನರಿಗೆ ಉಳಿದ ಬರಗಾಲ ಜಿಲ್ಲೆಗಳಿಗೆ ಸಿಗುವ ಸವಲತ್ತುಗಳು ಪೂರ್ಣವಾಗಿ ಸಿಗದಂತಾಗಿದೆ. ಇದ್ದುದರಲ್ಲಿಯೇ ಒಂದು ಸಂತೋಷದ ಸಂಗತಿ ಮಾನ್ಯ ಸರ್ಕಾರದವರು ನಮ್ಮ ತಾಲ್ಲೂಕಿನಲ್ಲಿ ಬರಗಾಲ ಕಾಂಗಾರಿಗಳಿಗಾಗಿ ಧನಸಹಾಯವನ್ನು ಒದಗಿಸುತ್ತಾ ಬಂದಿದ್ದಾರೆ. ಆದರೆ ಈ ಸಹಾಯ ಯಾತಕ್ಕೂ ಸಾಲದಾಗಿದೆ. ಆದ್ದರಿಂದ ಈಗ ಅಲ್ಲಿ ಶಾಶ್ವತವಾದಂಥ ರೀತಿಯಲ್ಲಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕು. ಮಲಪ್ರಭಾ ನೀರಾವರಿ ಯೋಜನೆಯು ಲಾಭವು ನಮ್ಮ ತಾಲ್ಲೂಕಿನ ಅನೇಕ ಹಳ್ಳಿಗಳಿಗೆ ಆಗುತ್ತಿದ್ದು ಕಾಲುವೆ ತೋಡುವ ಕೆಲಸವನ್ನು ಅತಿ ಶೀಘ್ರದಲ್ಲಿಯೆ ಪ್ರಾರಂಭಿಸಬೇಕು. ಅಂದರೆ ಬಡ ಕೂಲಿಗಾರರಿಗೆ ಕೆಲಸ ಸಿಗುವುದರ ಜೊತೆಗೆ ಒಂದು ಶಾಶ್ವತವಾದ ಕೆಲಸವೂ ಸಹ ಆಗುತ್ತದೆ. ಮಾನ್ಯ ಸರ್ಕಾರದವರು ಎಷ್ಟೂ ವಿಳಂಬಕ್ಕೆ ಅವಕಾಶ ಕೊಡದೆ ಈ ಕಾರ್ಯವನ್ನು ಪ್ರಾರಂಭಿಸಬೇಕು ಮತ್ತು ಉಳಿದ ಕಡೆಗಳಲ್ಲಿ ಲಿಫ್ಟ್ ಇರ್ರಿಗೇಷನ್ ವ್ಯವಸ್ಥೆ ಮಾಡಬೇಕು.

ಇನ್ನು ಸಾಯಿಲ್ ಕನ್‌ಸರ್‌ವೇಷನ್ ವಿಷಯ. ಈ ಯೋಜನೆಯಿಂದ ನಮ್ಮ ರೈತರಿಗೆ ವಿಶೇಷವಾದ ಲಾಭವಿದೆ. ಈಗಾಗಲೇ ಕೂಲಿಗಳಿಗೆ ಒದ್ದು ಹಾಕುವ ಕೆಲಸವು ನಡೆದಿದೆಯಾದರೂ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ನಡೆದಿರುವುದಿಲ್ಲ. ಸಿಬ್ಬಂದಿಯ ಕೊರತೆ ಇದೆ. ಮಾನ್ಯ ಮುಖ್ಯ ಮಂತ್ರಿಗಳು ದೋಣಿಕ್ಕೆ ಆಗಸ್ಟ್ 72ರಂದು ಬಂದಾಗ ದೋಣಿ ತಾಲ್ಲೂಕಿಗೆ ಒಂದು ಪ್ರತ್ಯೇಕವಾದ ಸಬ್ ಡಿವಿಷನ್ನನ್ನು ಸಾಯಿಲ್ ಕನ್‌ಸರ್‌ವೇಷನ್‌ಗಾಗಿ ಕೊಡುತ್ತೇವೆಂದು ಹೇಳಿದ್ದರೂ ಅಂತಹ ಸಬ್ ಡಿವಿಷನ್ ಇನ್ನೂ ನಮ್ಮ ತಾಲ್ಲೂಕಿಗೆ ಸಿಕ್ಕಿಲ್ಲ. ಆದ್ದರಿಂದ ತೀವ್ರದಲ್ಲಿಯೇ ನಮ್ಮ ತಾಲ್ಲೂಕಿನಲ್ಲಿ ಒಂದು ಸಬ್ ಡಿವಿಷನ್ ಪ್ರಾರಂಭವಾದರೆ ಹೆಚ್ಚಿನ ಸಿಬ್ಬಂದಿಯನ್ನು ನೇಮಿಸಿಕೊಂಡರೆ ಒಂದು ದೊಡ್ಡ ಪ್ರಮಾಣದಲ್ಲಿ ಕೆಲಸವನ್ನು ಕೈಗೊಳ್ಳಲು ಅನುಕೂಲವಾಗುವುದು. ಸವಳು ಭೂಮಿಯ ಸಮಸ್ಯೆ ಬಗ್ಗೆ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಸಾವಿರಾರು ಎಕರೆ ಜಮೀನು ಸವಳು ಭೂಮಿಯಾಗಿ ವ್ಯವಸಾಯಕ್ಕೆ ಬಾರದಂತೆ ಆಗಿದೆ. ಆದ್ದರಿಂದ ತಜ್ಞರಿಂದ ಇಂತಹ ಸವಳು ಭೂಮಿ ಮಣ್ಣಿನ ಸಮೀಕ್ಷೆ ಮಾಡಿಸಿ ಅವಕ್ಕೆ ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬೇಕು.

ನಮ್ಮ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಕುಡಿಯುವ ನೀರಿನ ಬವಣೆ ಹೇಳತೀರದಷ್ಟು ಇದೆ. ಅದಕ್ಕಾಗಿ ಸರ್ಕಾರದವರು ತೀವ್ರವೇ ಒಂದು ರಿಗ್ ಮೆಷಿನನ್ನು ನಮ್ಮ ತಾಲ್ಲೂಕಿಗೆ ಕಳಿಸಿ ಕೊಡಬೇಕು.

ಇನ್ನು ನೇಕಾರರ ಸಮಸ್ಯೆ. ನಮ್ಮ ತಾಲ್ಲೂಕಿನ ಗಜೇಂದ್ರಗಡ ಮೊದಲಾದ ಕೆಲವು ಹಳ್ಳಿಗಳಲ್ಲಿ ನೇಕಾರಿಕೆಯೇ ಪ್ರಮುಖವಾದ ಒಂದು ಉದ್ಯೋಗವಾಗಿದೆ. ನೇಕಾರರ ಪರಿಸ್ಥಿತಿಯಂತೂ ತೀವ್ರ ಕಳವಳಕಾರಕವಾಗಿದೆ. ಒಪ್ಪೊತ್ತಿನ ಊಟಕ್ಕೂ ಗತಿಯಿಲ್ಲದೆ ಜನರು ಕಂಗಾಲಾಗಿದ್ದಾರೆ. ಅವರಿಗೆ ಯೋಗ್ಯ ದರದಲ್ಲಿ ಸಾಕಷ್ಟು ನೂಲಿನ ಪೂರ್ಯೆಕೆಯಾಗುವಂತೆ ಮಾಡಬೇಕು. ಮತ್ತು ಅವರು ತಯಾರಿಸಿದ ಬಟ್ಟೆಗೆ ಯೋಗ್ಯ ಮಾರುಕಟ್ಟೆ ಸಿಗಬೇಕು. ಅಂದರೆ ಮಾತ್ರ ನೇಕಾರರು ಬೇವನ್ನು ನಡೆಸಲು ಸಾಧ್ಯವಾದೀತು. ಕೆಲವೊಂದು ನಿರ್ದಿಷ್ಟ ಬಟ್ಟೆಗಳನ್ನು ತಯಾರಿಸಲು ಕೈಮಗ್ಗಗಳಿಗೆ ಮೀಸಲಿಡಬೇಕೆಂದು ಹೇಳುತ್ತೇನೆ.

ಇನ್ನು ಬರಗಾಲ ಪರಿಸ್ಥಿತಿ ನಮ್ಮ ದೋಣಿ ತಾಲ್ಲೂಕಿನಲ್ಲಿ ಬಹಳ ತೀವ್ರವಾಗಿದೆಯೆಂಬುದನ್ನು ಸರ್ಕಾರದವರು ಮನಗಾಣಬೇಕು. ನಮ್ಮ ತಾಲ್ಲೂಕಿನಲ್ಲಿ ಬರಗಾಲ ಪರಿಹಾರ ಕಾರ್ಯಗಳನ್ನು ಹೆಚ್ಚು ಹೆಚ್ಚಿಗೆ ತೆಗೆದುಕೊಳ್ಳುವುದರ ಮೂಲಕ ಎಲ್ಲ ಸೌಲಭ್ಯಗಳನ್ನು ಕೊಡಬೇಕು. ಇನ್ನೂ ಈಗಾಗಲೇ ನಮ್ಮ ತಾಲ್ಲೂಕಿನಲ್ಲಿ ಪಶು ಸಂಪತ್ತು ಬಹಳ ನಷ್ಟವಾಗಿದೆ. ಆ ರೀತಿ ನಷ್ಟವಾಗದಂತೆ ಸರ್ಕಾರದವರು ನೋಡಿಕೊಳ್ಳಬೇಕು. ಜೋಳದ ಉತ್ತಮ ಬೀಜಗಳನ್ನು ಈಗಲೇ ಕೇಬರಿಸಿ ಕೊಂಡರೆ ಮಾತ್ರ ಮುಂದಿನ ವರ್ಷದಲ್ಲಿ ಹೆಚ್ಚಿಗೆ ಬೆಳೆ ತೆಗೆಯುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಉತ್ತಮ ಬೀಜ ಸಿಗದೇ ಇರುವ ಪರಿಸ್ಥಿತಿಯೂ ಬರಬಹುದು.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಕರ್ನಾಟಕ ರಾಜ್ಯವೆಂದು ನಾಮಕರಣ ಮಾಡಬೇಕೆಂಬ ಬಗ್ಗೆ ಹೇಳಿದ್ದಾರೆ. ಅದಕ್ಕಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಡಿ. ದೇವರಾಜ್ ಅರಸ್ ಅವರ ಸರ್ಕಾರವನ್ನು ಅಭಿನಂದಿಸುತ್ತೇನೆ. ಕೊನೆಯದಾಗಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ನಾನು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now rise and meet tomorrow, at 1-00 P.M.

The House adjourned at Thirty Five Minutes past Six of the Clock to meet again at One of the Clock on Friday, the 23rd February 1973.